KA / BG-GPO / 2515 / WPP-47 / 2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೫	ಬೆಂಗಳೂರು, ಗುರುವಾರ, ಡಿಸೆಂಬರ್ ೨೩, ೨೦೧೦, (ಪುಷ್ಯ ೨, ಶಕ ವರ್ಷ ೧೯೩೨)	ಸಂಚಿಕೆ ೫೦

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

ENERGY SECRETARIAT

Sub :- Transfer of 39.6 MW wind power capacity in favour of M/s CLP Wind Farms (India) Private Limited -reg.

Read :- 1) Government Order No: DE 124 NCE 2002 dated : 31-05-2002.

2) Government Order No: DE 124 NCE 2002 dated : 05-03-2003.

3) Government Order No: EN 31 NCE 2004 dated : 17-12-2004.

4) Government Order No: EN 369 NCE 2007 dated : 15-10-2007.

5 Letter No. KRED/08/CLP-CWPPL/2010/2719 dated: 24-09-2010 received from the Managing Director, Karnataka Renewable Energy Development Limited, Bangalore.

Preamble:

In the Government Order read at (1), (2), (3) and (4) above sanction has been accorded for implementation of 262.10 MW capacity Wind Power Project at Chitradurga, Davangere, Shimoga and Gadag Districts in favour of M/s Chitradurga Wind Power Private Limited.

In the letter read at (5) above, the Managing Director, Karnataka Renewable Energy Development Limited, Bangalore has recommended to the Government for transfer of 39.6 MW wind power capacity in favour of M/s CLP Wind Farms (India) Private Limited from out of the 80.85 MW (Harapanahalli, Davangere District) part capacity of the main capacity 262.10 MW sanctioned to M/s Chitradurga Wind Power Private Limited at Harakanalui, Arasanalu, Hyarada and Dasanahalli villages of Harapanahalli Taluk, Davangere District.

The proposal has been examined in detail and issued following Orders:

Government Order No. EN 407 NCE 2010, Bangalore, dated : 27th October, 2010

Government accords approval for transfer of 39.6 MW wind power capacity in favour of M/s CLP Wind Farms (India) Private Limited from out of the 80.85 MW Harapanahalli Taluk, Davangere District) part capacity of the main capacity 262.10 MW sanctioned to M/s Chitradurga Wind Power Private Limited at Harakanalui, Arasanalu, Hyarada and Dasanahalli villages of Harapanahalli Taluk, Davangere District as detailed below and subject to the following conditions:-

Sl. No.	Village Name	Taluk and District	Land Survey No.	Extent of land	Wind Turbine Generator location No.
1	Harakanalui		324	24.505 Ha	9x1650kw LOC: H-15, H-17, H-18, H-22, H-23, H-26, H-28, H-29 and H-30.
2	Arasanahalu	Harapanahalli Davangere	258	1.237 Ha	1x1650 kw LOC: H-16

3	Hyarada		323	15.759 Ha	6x1650 kw LOC: H-19, H-20, H-21, H-24, H-25 and H-27
4	Dasanahalli		276	15.007 Ha	8x1650kw LOC: H-31, H-32, H-33, H-34, H-35, H-36 H-37 and H-38
	Total			56.508 Ha	24 No's of 1650 Kw

1. M/s CLP Wind Farms (India) Private Limited shall execute and agreement with Government within 45 (forty five) days from the date of issue of this Order.
2. PPA is assigned to BESCOM. BESCOM shall execute the PPA with M/s CLP Wind Farms (India) Private Limited within a period of one month.
3. The Government reserves the right to Cancel/modify this Order.

The other terms and conditions of the Government Order read at (1) above shall IPSO FACTO applicable.

By Order and in the name of the Governor of Karnataka

(**SURESH. B. KRISHNAPPANAVAR)**

Under Secretary to Government

Energy Department

P.R. 2669

LAW, JUSTICE AND HUMAN RIGHTS SECRETARIAT

Sub: Guidelines received from the Government of India regarding release of grant-in-aid for improvement of justice delivery as recommended by the 13th Finance Commission-reg.

Read: 1. Letter No. F 32 (30)/FCD/2010, dt. 20-09-2010 from Director (FCD), Department of Expenditure, Finance Commission Division, Government of India.

Preamble:

In the letter dt. 20-09-2010 read above, Finance Commission Division of Department of Expenditure, Government of India have issued guidelines for release and utilisation of Grant-in-aid for improvement in justice delivery as recommended by the 13th Finance Commission (FC XIII). As per the guidelines, a direction has been given to set up a High Level Monitoring Committee (HLMC) presided over by the Chief Secretary with the following persons as members of the HLMC.

1) Secretary, Finance Department
2) Secretary, Law, Justice & Human Rights Department
3) Secretary, Home Department
4) Secretary, Public Works Department
5) Director of Prosecution
6) Registrar General, High Court
7) Member Secretary, Karnataka State Legal Service Authority
8) Director, Karnataka State Judicial Academy

It is further stated that HLMC shall be responsible for monitoring both the physical and financial grants, ensuring the adherence to specific condition in respect of the grant. HLMC shall meet on a quarterly basis during the award period of the FC XIII. Minutes of the meetings shall be provided to the Department of Expenditure (FCD) in the Ministry of Finance and to the Dept. of Justice.

After careful examination of the proposal, it has been approved to constitute High Level Monitoring Committee. Hence this order.

Government Order No. LAW 231 LAC 2010, Bangalore, Dated 20-10-2010

After careful consideration, Government agrees for constitution of High Level Monitoring Committee under the Chairmanship of the Chief Secretary consisting of the following members which shall meet on a quarterly basis during the award period of FC XIII. The Minutes of the HLMC meeting to be provided to the Department of Expenditure (Finance Commission Division), the Ministry of Finance and to the Department of Justice.

1	Chief Secretary	Chairman
2	The Secretary to Govt. Finance Department	Member
3	The Secretary to Govt. Law, Justice & Human Rights Department	Member
4	The Secretary to Govt. Home Department	Member

5	The Secretary to Govt. Public Works Department	Member
6	Director of Prosecution and Govt. Litigation	Member
7	Registrar General, High Court	Member
8	Member Secretary, Karnataka State Legal Service Authority	Member
9	Director, Karnataka State Judicial Academy	Member

By Order and in the name of the Governor of Karnataka

N. MAHALAKSHMAMMA

P.R. 2645

Under Secretary to Government (Admn.-1)

Law, Justice & Human Rights Department

ಕಂದಾಯ ಸಚಿವಾಲಯ

ವಿಷಯ : ಕಂದಾಯ ಇಲಾಖೆಯಲ್ಲಿ ಶಿರಸ್ತೇದಾರ್ ವೃಂದದಿಂದ ತಹಶೀಲ್ದಾರ್ ಗ್ರೇಡ್–2 ವೃಂದಕ್ಕೆ ಹಾಗೂ ತಹಶೀಲ್ದಾರ್ ಗ್ರೇಡ್–2 ವೃಂದದಿಂದ ತಹಶೀಲ್ದಾರ್ ಗ್ರೇಡ್–1 ವೃಂದಕ್ಕೆ ಮುಂಬಡ್ತಿ ನೀಡಲು ಇಲಾಖಾ ಪದೋನ್ನತಿ ಸಮಿತಿಯನ್ನು ಪುನರ್ ರಚಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ. ಆರ್‌ಡಿ 330 ಎಎಸ್‌ಡಿ 2007, ದಿನಾಂಕ 06–12–2007.

2) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 75 ಸೆನೆನಿ 2010, ಬೆಂಗಳೂರು, ದಿನಾಂಕ 19–05–2010.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ 06–12–2007 ರ ಆದೇಶದಲ್ಲಿ ಕಂದಾಯ ಇಲಾಖೆಯ ಸೇವೆಗೆ ಸೇರಿದ ಶಿರಸ್ತೇದಾರ್ ವೃಂದದಿಂದ ತಹಶೀಲ್ದಾರ್ ಗ್ರೇಡ್–2 ವೃಂದಕ್ಕೆ ಹಾಗೂ ತಹಶೀಲ್ದಾರ್ ಗ್ರೇಡ್–2 ವೃಂದದಿಂದ ತಹಶೀಲ್ದಾರ್ ಗ್ರೇಡ್–1 ವೃಂದಕ್ಕೆ ಮುಂಬಡ್ತಿ ನೀಡುವ ಸಲುವಾಗಿ ಪ್ರಕರಣಗಳನ್ನು ಪರಿಶೀಲಿಸಲು, ಈ ಕೆಳಕಂಡ ಅಧಿಕಾರಿಗಳನ್ನೊಳಗೊಂಡಂತೆ ಇಲಾಖಾ ಮುಂಬಡ್ತಿ ಸಮಿತಿಯನ್ನು ರಚಿಸಲಾಗಿರುತ್ತದೆ.

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ – ಅಧ್ಯಕ್ಷರು
2) ಸರ್ಕಾರದ ಕಾರ್ಯದರ್ಶಿಗಳು, (ವಿಪತ್ತು ನಿರ್ವಹಣೆ) – ಸದಸ್ಯರು
3) ಪ್ರಾದೇಶಿಕ ಆಯುಕ್ತರು ಬೆಂಗಳೂರು ವಿಭಾಗ – ಸದಸ್ಯರು
4) ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ – ಸದಸ್ಯರು
5) ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ – ಸದಸ್ಯರು
6) ಪ್ರಾದೇಶಿಕ ಆಯುಕ್ತರು, ಗುಲ್ಬರ್ಗಾ ವಿಭಾಗ – ಸದಸ್ಯರು
7) ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ದರ್ಜೆ ಇಲ್ಲದಿರುವ ಸಂಸದೀಯ– ಸದಸ್ಯರು ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಪ್ರತಿನಿಧಿ
8) ಉಪಕಾರ್ಯದರ್ಶಿ (ಸೇವಾ ವಿಷಯ ನಿರ್ವಹಿಸುತ್ತಿರುವ ಅಧಿಕಾರಿ) – ಸದಸ್ಯ ಕಾರ್ಯದರ್ಶಿ

ಮೇಲೆ ಓದಲಾದ ಕ್ರಮ ಸಂಖ್ಯೆ (2) ದಿನಾಂಕ: 19–05–2010 ರ ಆದೇಶದಲ್ಲಿ ಈ ಕೆಳಕಂಡಂತೆ ಇಲಾಖಾ ಮುಂಬಡ್ತಿ ಸಮಿತಿಯನ್ನು ಪುನರ್ ರಚಿಸಲಾಗಿದೆ.

(1) ಕರ್ನಾಟಕ ಆಡಳಿತ ಸೇವೆಯ ಹಿರಿಯ ಶ್ರೇಣಿಗೆ ಸಮನಾದ ಮತ್ತು ಹೆಚ್ಚಿನ ವೇತನ ಶ್ರೇಣಿಯ 'ಎ' ಸಮೂಹದ ಹುದ್ದೆಗಳಿಗೆ ಮುಂಬಡ್ತಿ ನೀಡಲು

(ಅ) ಸಂಬಂಧಿಸಿದ ಆಡಳಿತ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ;
(ಆ) ಸಂಬಂಧಿಸಿದ ಇಲಾಖಾ ಮುಖ್ಯಸ್ಥರು
(ಇ) ಉಪ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ಇಲ್ಲದಿರುವ ಸಂಸದೀಯ ವ್ಯವಹಾರ ಮತ್ತು ಶಾಸನ ರಚನಾ ಇಲಾಖೆಯ ಪ್ರತಿನಿಧಿ.

(2) ಕರ್ನಾಟಕ ಆಡಳಿತ ಸೇವೆಯ ಹಿರಿಯ ಶ್ರೇಣಿಗೆ ಸಮನಾದ ಹುದ್ದೆಗಳಿಗೆ ಮತ್ತು ತಹಶೀಲ್ದಾರ್ ಗ್ರೇಡ್–2 ಹುದ್ದೆಗಳಿಗೆ ಮುಂಬಡ್ತಿ ನೀಡಲು.

(ಅ) ಸಂಬಂಧಿಸಿದ ಆಡಳಿತ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಅಥವಾ ಕಾರ್ಯದರ್ಶಿ;
(ಆ) ಸಂಬಂಧಿಸಿದ ಇಲಾಖಾ ಮುಖ್ಯಸ್ಥರು
(ಇ) ಸಂಬಂಧಿಸಿದ ಸರ್ಕಾರದ ಪ್ರಧಾನ ಕಾರ್ಯದರ್ಶಿ : ಕಾರ್ಯದರ್ಶಿಯವರು ನಾಮ ನಿರ್ದೇಶನ ಮಾಡಿದ ಕರ್ನಾಟಕ ಸರ್ಕಾರ ಸಚಿವಾಲಯ ಅಧೀನ ಕಾರ್ಯದರ್ಶಿ ದರ್ಜೆಗಿಂತ ಕಡಿಮೆ ಇಲ್ಲದಿರುವ ಒಬ್ಬ ಅಧಿಕಾರಿ

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಶಿರಸ್ತೇದಾರ್ ವೃಂದದಿಂದ ಗ್ರೇಡ್–2 ತಹಶೀಲ್ದಾರ್ ವೃಂದಕ್ಕೆ ಹಾಗೂ ತಹಶೀಲ್ದಾರ್ ಗ್ರೇಡ್–2 ವೃಂದದಿಂದ ತಹಶೀಲ್ದಾರ್ ಗ್ರೇಡ್–1 ವೃಂದಕ್ಕೆ ಪದೋನ್ನತಿ ನೀಡಲು ಸರ್ಕಾರವು ಇಲಾಖಾ ಪದೋನ್ನತಿ ಸಮಿತಿಯನ್ನು ಪುನರ್ ರಚಿಸಲು ತೀರ್ಮಾನಿಸಿದೆ. ಅದಕ್ಕಾಗಿ ಈ ಕೆಳಕಂಡಂತೆ ಆದೇಶ.

ಸರ್ಕಾರದ ಆದೇಶ ಸಂಖ್ಯೆ: ಕಂಇ 634 ಎಎಸ್‌ಡಿ 2010, ಬೆಂಗಳೂರು, ದಿನಾಂಕ: 19–10–2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಕಂದಾಯ ಇಲಾಖೆಯ ಸೇವೆಗೆ ಸೇರಿದ ಶಿರಸ್ತೇದಾರ್ ವೃಂದದಿಂದ ತಹಶೀಲ್ದಾರ್ ಗ್ರೇಡ್–2 ವೃಂದಕ್ಕೆ ಹಾಗೂ ತಹಶೀಲ್ದಾರ್ ಗ್ರೇಡ್–2 ವೃಂದದಿಂದ ತಹಶೀಲ್ದಾರ್ ಗ್ರೇಡ್–1 ವೃಂದಕ್ಕೆ ಮುಂಬಡ್ತಿ ನೀಡುವ ಸಲುವಾಗಿ ಪ್ರಕರಣಗಳನ್ನು

ಪರಿಶೀಲಿಸಲು ಈ ಕೆಳಕಂಡ ಅಧಿಕಾರಿಗಳನ್ನೊಳಗೊಂಡಂತೆ ಪರಿಷ್ಕೃತ ಇಲಾಖಾ ಮುಂಬಡ್ತಿ ಸಮಿತಿಯನ್ನು ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಹೊಸದಾಗಿ ಪುನರ್ ರಚಿಸಿ ಆದೇಶಿಸಿದೆ.

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ – ಅಧ್ಯಕ್ಷರು
2) ಸರ್ಕಾರದ ಕಾರ್ಯದರ್ಶಿಗಳು, (ವಿಪತ್ತು ನಿರ್ವಹಣೆ) – ಸದಸ್ಯರು
3) ಪ್ರಾದೇಶಿಕ ಆಯುಕ್ತರು ಬೆಂಗಳೂರು ವಿಭಾಗ – ಸದಸ್ಯರು
4) ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ – ಸದಸ್ಯರು
5) ಪ್ರಾದೇಶಿಕ ಆಯುಕ್ತರು, ಬೆಳಗಾವಿ ವಿಭಾಗ – ಸದಸ್ಯರು
6) ಪ್ರಾದೇಶಿಕ ಆಯುಕ್ತರು, ಗುಲ್ಬರ್ಗಾ ವಿಭಾಗ – ಸದಸ್ಯರು
7) ಉಪ ಕಾರ್ಯದರ್ಶಿ (ವಿಪತ್ತು ನಿರ್ವಹಣೆ ಮತ್ತು ಸೇವೆಗಳು) – ಸದಸ್ಯ ಕಾರ್ಯದರ್ಶಿ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಪಿ.ಆರ್. 2646
ಎಸ್.ಬಿ. ಸಸಾಲಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು–3)

ಸಹಕಾರ ಸಚಿವಾಲಯ

ಸೇರ್ಪಡೆ

ಸಂಖ್ಯೆ ಸಇ 52 ಸಂಮಾಸ 2010, ಬೆಂಗಳೂರು, ದಿನಾಂಕ: 04–10–2010

ಸರ್ಕಾರಿ ಆದೇಶ ಸಂಖ್ಯೆ ಸಇ 52 ಸಂಮಾಸ 2010 ದಿನಾಂಕ: 13–08–2010 ರ ಆದೇಶ ಭಾಗದ ಉಪ ಕಂಡಿಕೆ (8) ರ ನಂತರ ಈ ಕೆಳಕಂಡಂತೆ ಸೇರಿಸಿ ಓದಿಕೊಳ್ಳತಕ್ಕದ್ದು.

ಮೇಲೆ ಉಪ ಕಂಡಿಕೆ (2) ರಲ್ಲಿ ತಿಳಿಸಿರುವ ರೂ. 0.72 ಕೋಟಿ (ಎಪ್ಪತ್ತೆರಡು ಲಕ್ಷಗಳು ಮಾತ್ರ) ಅಪರ ನಿಬಂಧಕರು (ಬಳಕೆ ಮತ್ತು ಮಾರಾಟ) "ಸಹಕಾರ ಸಂಘಗಳ ನಿಬಂಧಕರವರ ಕಛೇರಿ ಬೆಂಗಳೂರು, ಇವರು ಹಣ ಸಂದಾಯ ರಸೀದಿ ಮೂಲಕ ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ಇವರ ಮೇಲು ಸಹಿ ಪಡೆದು ಖಜಾನೆಯಿಂದ ಪಡೆಯತಕ್ಕದ್ದು."

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಪಿ.ಆರ್. 2647
ನಂಜುಂಡಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಹಕಾರ ಇಲಾಖೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ತಿದ್ದುಪಡಿ

ಸಂಖ್ಯೆ ಮಮಇ 55 ಮಅನಿ 2010, ಬೆಂಗಳೂರು, ದಿನಾಂಕ: 05–10–2010

ಸರ್ಕಾರದ ಆದೇಶ ಸಂಖ್ಯೆ: ಮಮಇ 55 ಮಅನಿ 2010 ದಿನಾಂಕ: 31–07–2010 ರಲ್ಲಿನ ಆದೇಶ ಭಾಗದ ಐದನೇ ಸಾಲಿನಲ್ಲಿ "ಎರಡನೇ ಕಂತಾಗಿ" ಎಂಬುದರ ಬದಲಾಗಿ "ಮೊದಲನೇ ಕಂತಾಗಿ" ಎಂದು ಮತ್ತು ಅನುಬಂಧದಲ್ಲಿ "ಜನವರಿ 2010 ರಿಂದ ಮಾರ್ಚ್ 2010" ರ ಎಂಬುದರ ಬದಲಾಗಿ "ಏಪ್ರಿಲ್ 2010 ರಿಂದ ಜೂನ್ 2010ರವರೆಗೆ" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಪಿ.ಆರ್. 2648
ಬಿ. ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ–2,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

FOREST, ECOLOGY AND ENVIRONMENT SECRETARIAT

ADDENDUM

No. FEE 165 FFM 2010 Bangalore, Dated 04-10-2010

In the order portion of the Government Order No. FEE 132 FFM 2009 dated: 01.02.2010, the following conditions shall be deemed to be added w.e.f. 01.02.2010 as follows:

"Condition No. 14a: **The lease is granted for 10 years**."

By Order and in the name of the Governor of Karnataka
H.M. MALLIKARJUNA SWAMY
P.R. 2649
Under Secretary to Government
Forest, Ecology and Environment Department

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀಮತಿ ಎನ್. ದೇವಕುಮಾರಿ ಕೆ.ಎ.ಎಸ್. (ನಿವೃತ್ತ) ಅಧಿಕಾರಿ ಮತ್ತು ಶ್ರೀ ಪಿ. ಶಿವಣ್ಣ, ಕಿರಿಯ ಅಭಿಯಂತರರು ಇವರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆ – ಆರೋಪ ಮುಕ್ತರನ್ನಾಗಿಸಿ ಅಂತಿಮ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 129 ಕೆಇವಿ 2007 ದಿನಾಂಕ 24–10–07 ಮತ್ತು 05–09–08
2. ಶ್ರೀ ಎಚ್.ವಿ. ರಾಮಚಂದ್ರರಾವ್ ನಿವೃತ್ತ ನ್ಯಾಯಾಧೀಶರು ಇವರ ವಿಚಾರಣಾ ವರದಿ ದಿನಾಂಕ: 14–09–09.

ಪ್ರಸ್ತಾವನೆ:

ಮೇಲೆ ಕ್ರಮ ಸಂ.(1)ರಲ್ಲಿ ಓದಲಾದ ಆದೇಶದಲ್ಲಿ ಶ್ರೀಮತಿ ಎನ್. ದೇವಕುಮಾರಿ ಕೆ.ಎ.ಎಸ್. (ನಿವೃತ್ತ) ಅಧಿಕಾರಿ ಇವರು ಬೆಂಗಳೂರಿನ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯಲ್ಲಿ ನಿರ್ದೇಶಕರಾಗಿ ವಿಶೇಷ ಕರ್ತವ್ಯಾಧಿಕಾರಿಯಾಗಿ ಮತ್ತು ಶ್ರೀ ಪಿ. ಶಿವಣ್ಣ ಸದರಿ ಸಂಸ್ಥೆಯಲ್ಲಿ ಕಿರಿಯ ಅಭಿಯಂತರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ವಿಂಡ್ ಜನರೇಟರ್ ಖರೀದಿಯಲ್ಲಿ ಅವ್ಯವಹಾರ ನಡೆಸಿದ್ದರೆನ್ನಲಾದ ಆಪಾದನೆಗಳ ಸಂಬಂಧ ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿ: 05–09–08ರ ಸರ್ಕಾರಿ ಆದೇಶದಲ್ಲಿ ಇವರುಗಳ ವಿರುದ್ಧದ ಜಂಟಿ ಇಲಾಖಾ ವಿಚಾರಣೆ ನಡೆಸಲು ಶ್ರೀ ಎಚ್.ವಿ. ರಾಮಚಂದ್ರರಾವ್, ನಿವೃತ್ತ ಜಿಲ್ಲಾ ನ್ಯಾಯಾಧೀಶರು ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ಮೇಲೆ ಕ್ರಮ ಸಂ.(2)ರಲ್ಲಿ ಓದಲಾದ ದಿ: 14–09–09ರ ವರದಿಯಲ್ಲಿ ವಿಚಾರಣಾಧಿಕಾರಿಗಳು ಸರ್ಕಾರಕ್ಕೆ ವಿಚಾರಣಾ ವರದಿ ಸಲ್ಲಿಸಿ ಶ್ರೀ ಎನ್. ದೇವಕುಮಾರಿರವರು ನವೆಂಬರ್ 2004ರಲ್ಲಿ ಸದರಿ ಜಾಗದಿಂದ ವರ್ಗಾವಣೆಗೊಂಡಿದ್ದು ಎನರ್ಜಿಪಾರ್ಕ್ ಅನ್ನು ಕೇಂದ್ರ ಸಚಿವರು ಉದ್ಘಾಟನೆ ಮಾಡಿದಾಗ ಎಲ್ಲಾ ಯಂತ್ರಗಳು ಸುಸ್ಥಿತಿಯಲ್ಲಿ ನಡೆಯುತ್ತಿದ್ದು, ಈ ಯಂತ್ರಗಳಿಗೆ ಒಂದು ವರ್ಷ ಗ್ಯಾರಂಟಿ ಹಾಗೂ ನಾಲ್ಕು ವರ್ಷಗಳ ವಾರಂಟಿ ಇದ್ದು, ಯಂತ್ರಗಳು 2005ರಲ್ಲಿ ದುರಸ್ತಿಗೆ ಬಂದಿದ್ದು ಆ ಸಮಯದಲ್ಲಿ ಯಂತ್ರವನ್ನು ಬದಲಿಸಲಾಗಿದೆ. ಆದುದರಿಂದ ಆಪಾದಿತರು ಟೆಂಡರ್‌ಗಳನ್ನು ತುಲನಾತ್ಮಕವಾಗಿ ಪರಿಶೀಲಿಸಿ ತೀರ್ಮಾನಿಸಿ ಕಡಿಮೆ ಟೆಂಡರ್ ಅನ್ನು ಪರಿಗಣಿಸಿರುವುದರಿಂದ ಆಪಾದಿತರುಗಳು ಈ ಲೋಪಕ್ಕೆ ಕಾರಣರಲ್ಲವೆಂದು ಹಾಗೂ ಆಪಾದಿತರ ವಿರುದ್ಧದ ಆರೋಪಗಳ ಬಗ್ಗೆ ಯಾವುದೇ ಸಾಕ್ಷ್ಯ ರುಜುವಾತು ಸಮರ್ಥನೆ ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಕ್ರೆಡಿಲ್‌ನವರು ಸಾಕ್ಷ್ಯ ನೀಡಬೇಕಿದ್ದು ಅವರ ಹೆಸರು ಸಾಕ್ಷಿ ಪಟ್ಟಿಯಲ್ಲಿಯೇ ಇರಲಿಲ್ಲ. ಆಪಾದಿತರು ಟೆಂಡರ್ ದಾಖಲೆಯಂತೆ ಹಾಗೂ ತುಲನಾತ್ಮಕ ಹೇಳಿಕೆಯಂತೆ ವಸ್ತುಗಳನ್ನು ಕೊಂಡಿದ್ದು ಇದರಲ್ಲಿ ಯಾವುದೇ ತಪ್ಪು ಮಾಡದ ಕಾರಣ ಇವರುಗಳ ಮೇಲಿನ ಆರೋಪಗಳು ಸಾಬೀತಾಗಿರುವುದಿಲ್ಲವೆಂದು ವರದಿ ನೀಡಿರುತ್ತಾರೆ.

ವಿಚಾರಣಾಧಿಕಾರಿಗಳು ನೀಡಿರುವ ವಿಚಾರಣಾ ವರದಿಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ ಶ್ರೀಮತಿ ಎನ್. ದೇವಕುಮಾರಿ, ಕೆ.ಎ.ಎಸ್. (ನಿವೃತ್ತ) ಮತ್ತು ಶ್ರೀ ಪಿ. ಶಿವಣ್ಣ ಕಿರಿಯ ಅಭಿಯಂತರರು, ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯಿಂದ ವರ್ಗಾವಣೆಗೊಂಡ ನಂತರ ವಿಂಡ್ ಪವರ್ ಜನರೇಟರ್‌ನಲ್ಲಿ ತೊಂದರೆ ಕಾಣಿಸಿಕೊಂಡಿದ್ದು, ಟೆಂಡರ್‌ನಲ್ಲಿನ ನಿಬಂಧನೆಗಳ ಅನುಸಾರ ಇದಕ್ಕೆ ಒಂದು ವರ್ಷ ಗ್ಯಾರಂಟಿ ಹಾಗೂ 04 ವರ್ಷ ವಾರಂಟಿ ಇದ್ದುದರಿಂದ ಸರಬರಾಜು ಮಾಡಿದ ಕಂಪನಿಯು ಸದರಿ ಯಂತ್ರವನ್ನು ಕಂಪನಿಯ ವೆಚ್ಚದಲ್ಲಿ ಬದಲಾಯಿಸಿರುವುದು ಕಂಡು ಬರುತ್ತದೆ. ಆದುದರಿಂದ ಅವರುಗಳ ವಿರುದ್ಧ ಮಾಡಲಾದ ಆರೋಪಗಳು ಸಾಬೀತಾಗಿರುವುದಿಲ್ಲವೆಂದು ವಿಚಾರಣಾಧಿಕಾರಿಗಳು ನೀಡಿರುವ ವಿಚಾರಣಾ ವರದಿಯನ್ನು ಒಪ್ಪದೇ ಇರಲು ಯಾವುದೇ ಸಕಾರಣಗಳು ಇರುವುದಿಲ್ಲವಾದ್ದರಿಂದ ವಿಚಾರಣಾ ವರದಿಯನ್ನು ಅಂಗೀಕರಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 270 ಎಸ್‌ಇಎನ್ 06 (ಸಿಆಸುಇ 129 ಕೆಇವಿ 07), ಬೆಂಗಳೂರು, ದಿನಾಂಕ: 19ನೇ ಅಕ್ಟೋಬರ್ 2010.

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ ಸರ್ಕಾರವು ಶ್ರೀಮತಿ ಎನ್. ದೇವಕುಮಾರಿ, ಕೆ.ಎ.ಎಸ್. (ನಿವೃತ್ತ) ಅಧಿಕಾರಿ ಮತ್ತು ಶ್ರೀ ಪಿ. ಶಿವಣ್ಣ, ಕಿರಿಯ ಅಭಿಯಂತರರು ಇವರುಗಳನ್ನು ದಿ: 18–12–2006ರ ನೋಟೀಸ್‌ನಲ್ಲಿ ಮಾಡಲಾದ ಆರೋಪಗಳಿಂದ ಆರೋಪಮುಕ್ತರನ್ನಾಗಿಸುತ್ತದೆ.

ಈ ಇಲಾಖಾ ವಿಚಾರಣೆ ನಡೆಯದಿದ್ದಲ್ಲಿ ಇವರುಗಳು ಯಾವ ಸೌಲಭ್ಯಗಳನ್ನು ಪಡೆಯಲು ಅರ್ಹರಾಗಿರುತ್ತಿದ್ದರೋ ಅವುಗಳನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ವಾಸುದೇವಮೂರ್ತಿ

ಪಿ.ಆರ್. 2655

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಆಸುಇ ಇಲಾಖೆ (ಸೇವೆಗಳು–2)

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಎಚ್.ವಿ. ರಾಮಚಂದ್ರರಾವ್ ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಚಾರಣಾಧಿಕಾರಿಗಳು ಇವರಿಗೆ ವಿಚಾರಣಾ ವರದಿ ಸಲ್ಲಿಸಿದ್ದಕ್ಕಾಗಿ ಗೌರವಧನ ಹಾಗೂ ವಾಹನ ಭತ್ಯೆ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂ.: ಸಿಆಸುಇ 129 ಕೆಇವಿ 2007 ದಿ: 05–9–2008.
2. ವಿಚಾರಣಾಧಿಕಾರಿರವರ ವರದಿ ದಿ: 14–09–2009.
3. ವಿಚಾರಣಾಧಿಕಾರಿರವರ ಮನವಿ ದಿ: 14–09–2009.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ಆದೇಶದಲ್ಲಿ ಶ್ರೀಮತಿ ಎನ್. ದೇವಕುಮಾರಿ ಕೆ.ಎ.ಎಸ್. (ನಿವೃತ್ತ) ಅಧಿಕಾರಿ ಇವರು ಬೆಂಗಳೂರಿನ ಮಹಾತ್ಮ ಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯಲ್ಲಿ ನಿರ್ದೇಶಕರಾಗಿ ವಿಶೇಷ ಕರ್ತವ್ಯಾಧಿಕಾರಿಯಾಗಿ ಮತ್ತು ಶ್ರೀ ಪಿ. ಶಿವಣ್ಣ ಸದರಿ ಸಂಸ್ಥೆಯಲ್ಲಿ ಕಿರಿಯ ಅಭಿಯಂತರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ವಿಂಡ್ ಜನರೇಟರ್ ಖರೀದಿಯಲ್ಲಿ ಅವ್ಯವಹಾರ ನಡೆಸಿದ್ದರೆನ್ನಲಾದ ಆಪಾದನೆಗಳ

ಸಂಬಂಧದ ಆರೋಪಗಳ ಕುರಿತು ಜಂಟಿ ಇಲಾಖಾ ವಿಚಾರಣೆ ನಡೆಸಲು ಉಲ್ಲೇಖಿತ ಸರ್ಕಾರಿ ಆದೇಶದಲ್ಲಿ ಶ್ರೀ ಎಚ್.ವಿ. ರಾಮಚಂದ್ರರಾವ್ ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧಿಶರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ಈ ಪ್ರಕರಣದಲ್ಲಿ ವಿಚಾರಣೆ ನಡೆಸಿದ ವಿಚಾರಣಾಧಿಕಾರಿಗಳು ಮೇಲೆ ಕ್ರಮ ಸಂ.:(2) ರಲ್ಲಿ ಓದಲಾದ ದಿ: 14–09–2009 ರಲ್ಲಿ ವಿಚಾರಣೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಮೇಲೆ ಕ್ರಮ ಸಂ.: (3)ರಲ್ಲಿ ಓದಲಾದ ಮನವಿಯಲ್ಲಿ ವಿಚಾರಣಾಧಿಕಾರಿಯವರು ವಿಚಾರಣೆಯನ್ನು ನಡೆಸಿರುವ ಸಂಬಂಧ ಗೌರವಧನ ಹಾಗೂ ಪ್ರಯಾಣ ಭತ್ಯೆ ಮಂಜೂರು ಮಾಡುವಂತೆ ಕೋರಿರುತ್ತಾರೆ ಅದರಂತೆ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 270 ಎಸ್‌ಇಎನ್ 2006 (ಸಿಆಸುಇ 129 ಕೆಇವಿ 07), ಬೆಂಗಳೂರು ದಿನಾಂಕ: 19ನೇ ಅಕ್ಟೋಬರ್ 2010.

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ ಸರ್ಕಾರವು ಶ್ರೀ ಎಚ್.ವಿ. ರಾಮಚಂದ್ರರಾವ್ ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಬೆಂಗಳೂರು ಇವರಿಗೆ ಇಲಾಖಾ ವಿಚಾರಣೆ ನಡೆಸಿ ವಿಚಾರಣಾ ವರದಿಯನ್ನು ಸಲ್ಲಿಸಿದ್ದಕ್ಕಾಗಿ ಸರ್ಕಾರಿ ಆದೇಶ ಸಂ.: ಸಿಆಸುಇ 22 ಸೇಇವಿ 07 ದಿ: 11–04–08 ರನ್ವಯ ರೂ. 8,000–00 (ಎಂಟು ಸಾವಿರ ರೂಪಾಯಿಗಳು ಮಾತ್ರ) ಗೌರವಧನವನ್ನು ಹಾಗೂ ರೂ. 1,500–00 (ಒಂದು ಸಾವಿರದ ಐನೂರು ರೂಪಾಯಿಗಳು ಮಾತ್ರ)ಗಳ ವಾಹನ ಭತ್ಯೆಯನ್ನು ಪಾವತಿಸಲು ಮಂಜೂರಾತಿ ನೀಡಲಾಗಿದೆ.

ಈ ವೆಚ್ಚವನ್ನು ಆಯವ್ಯಯ ಲೆಕ್ಕ ಶೀರ್ಷಿಕೆ 2052–ಸಚಿವಾಲಯ–ಸಾಮಾನ್ಯ ಸೇವೆಗಳು–090–ಸಚಿವಾಲಯ–01, ಕರ್ನಾಟಕ ಸರ್ಕಾರ ಸಚಿವಾಲಯ–051–ಸಾಮಾನ್ಯ ವೆಚ್ಚಗಳರಡಿ ಭರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ವಾಸುದೇವಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. 2656 ಸಿಆಸುಇ (ಸೇವೆಗಳು–2)

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ವಿಷಯ : ಶ್ರೀ ಎಂ. ಅಮರನಾಥ ಸುಮತಿ ಕೆ.ಎ.ಎಸ್. (ನಿ) ಅಧಿಕಾರಿ ಹಾಗೂ ಇವರ ವಿರುದ್ಧ ಇಲಾಖಾ ವಿಚಾರಣೆ ದಂಡನೆ ವಿಧಿಸಿ ಅಂತಿಮ ಆದೇಶ ಹೊರಡಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 03 ಎಸ್‌ಇಎನ್ 00 ದಿ: 28–07–06, ದಿ: 02–01–08 ಮತ್ತು 19–11–08
2. ವಿಚಾರಣಾಧಿಕಾರಿಗಳ ವರದಿ ದಿ: 01–04–2010
3. ಎರಡನೇ ಕಾರಣ ಕೇಳುವ ನೋಟೀಸ್ ದಿ: 10–06–2010.
4. ಎರಡನೇ ಕಾರಣ ಕೇಳುವ ನೋಟೀಸಿಗೆ ಉತ್ತರ ದಿ: 19–06–2010.
5. ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ ಇವರ ಪತ್ರ ದಿ: 24–09–2010.

ಪ್ರಸ್ತಾವನೆ :

ಶ್ರೀ ಎಂ. ಅಮರನಾಥ ಸುಮತಿ ಕೆ.ಎ.ಎಸ್.(ನಿ) ಇವರು ಮಡಿಕೇರಿ ಉಪ ವಿಭಾಗಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ ಭೂಸುಧಾರಣಾ ತಿದ್ದುಪಡಿ ನಿಯಮಗಳು 1998ರ ನಿಯಮ 26(ಸಿ) ಮತ್ತು ಭೂಸುಧಾರಣಾ ಕಾಯ್ದೆ 1961ರ ಕಲಂ 77(ಎ)ನ್ನು ಉಲ್ಲಂಘನೆ ಮಾಡಿರುವ ಹಾಗೂ ಕಾನೂನು ನಿಯಮ/ಸುತ್ತೋಲೆಗಳನ್ನು ಉಲ್ಲಂಘಿಸಿದ ಆರೋಪದ ಸಂಬಂಧ ಇವರ ವಿರುದ್ಧ ವಿಚಾರಣೆ ನಡೆಸಲು ಮೇಲೆ ಕ್ರಮ ಸಂ.(1)ರಲ್ಲಿ ಓದಲಾದ ದಿ: 19–11–2008ರ ಆದೇಶದಲ್ಲಿ ಡೈರೆಕ್ಟರ್ ಜನರಲ್, ಆಡಳಿತ ತರಬೇತಿ ಸಂಸ್ಥೆ ಮೈಸೂರುರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು. ವಿಚಾರಣೆ ನಡೆಸಿದ ವಿಚಾರಣಾಧಿಕಾರಿಗಳು ಮೇಲೆ ಕ್ರಂ ಸಂ.(2)ರಲ್ಲಿ ಓದಲಾದ ದಿ: 01–04–2010ರ ಪತ್ರದೊಂದಿಗೆ ವಿಚಾರಣಾ ವರದಿಯನ್ನು ಸಲ್ಲಿಸಿ ಶ್ರೀ ಎಂ. ಅಮರನಾಥ ಸುಮತಿ, ಕೆ.ಎ.ಎಸ್. ಅಧಿಕಾರಿ ಇವರ ವಿರುದ್ಧ ಮಾಡಲಾದ 7 ಆರೋಪಗಳ ಪೈಕಿ 5 ಆರೋಪಗಳು ಸಾಬೀತಾಗಿದೆಯೆಂದು ವರದಿಯನ್ನು ನೀಡಿರುತ್ತಾರೆ.

ವಿಚಾರಣಾ ವರದಿಯನ್ನು ದಾಖಲೆಗಳೊಂದಿಗೆ ಪರಿಶೀಲಿಸಿ ವಿಚಾರಣಾ ವರದಿಯಲ್ಲಿ ತಿಳಿಸಿರುವಂತೆ ಆಪಾದಿತರ 5 ಆರೋಪಗಳು ಸಾಬೀತಾಗಿದ್ದು ಇವುಗಳು ಗಂಭೀರವಾದ ಆಡಳಿತಾತ್ಮಕ ಲೋಪದೋಷಗಳಿರುವ ಪ್ರಕರಣಗಳು ಆಗಿರುತ್ತವೆ. ಪ್ರಿಉಂಬಳಿ ಜಮ್ಮೆಬಾಣೆ ಜಾಗದ ಬಗ್ಗೆ ಪರಭಾರೆ ಹಾಗೂ ಕೃಷಿಯೇತರ ಉದ್ದೇಶಕ್ಕಾಗಿ ಅನುಮೋದನೆ ನೀಡಲು ಕಾನೂನಿನಲ್ಲಿ ಅವಕಾಶ ಇಲ್ಲದೇ ಇದ್ದರೂ ಕೂಡ ಅದಕ್ಕೆ ಅನುಮೋದನೆ ನೀಡಿ ಖಾತಾ ವರ್ಗಾವಣೆ ಮಾಡಲು ಆದೇಶ ಹೊರಡಿಸಿರುವುದು ಹಾಗೂ ಭೂಸುಧಾರಣೆ ಕಾಯ್ದೆ ಕಲಂ 79 ಎ ರಡಿಯಲ್ಲಿ ಅನುಮೋದನೆ ನೀಡುವಾಗ ಖರೀದಿದಾರರು ಕೃಷಿ ಭೂಮಿ ಹೊಂದಲು ಅರ್ಹರೇ ಇಲ್ಲವೇ ಎಂಬ ಬಗ್ಗೆ ವಿವರವಾದ ವಿಚಾರಣೆ ಅಗತ್ಯತೆ ಇದ್ದು ಆ ವಿಚಾರಣೆಯನ್ನು ಸಾಮಾನ್ಯವಾಗಿ ತಹಶೀಲ್ದಾರ್‌ರವರ ಮೂಲಕ ನಡೆಸಿ ತಹಶೀಲ್ದಾರ್‌ರ ವರದಿಯನ್ನು ಪರಿಗಣಿಸಿ ನಂತರ ಸೂಕ್ತ ಆದೇಶ ಮಾಡಬಹುದಾಗಿತ್ತು. ಆದರೆ ಅಂತಹ ಯಾವುದೇ ವರದಿಯನ್ನು ಆಪಾದಿತ ಅಧಿಕಾರಿಯವರು ತಹಶೀಲ್ದಾರ್‌ರವರಿಂದ ಪಡೆಯದೇ ನೇರವಾಗಿ ಅನುಮೋದನೆ ನೀಡಿರುತ್ತಾರೆ. ಹಾಗೂ ಇನ್ನೊಂದು ಆರೋಪದಲ್ಲಿ ಭೂಪರಿವರ್ತನೆ ಮಾಡುವಾಗ 104 ಪ್ರಕರಣಗಳಲ್ಲಿ ತಹಶೀಲ್ದಾರ್‌ರವರ ವರದಿ ಪಡೆಯದೇ ನಾಡ ಕಛೇರಿ ಅಥವಾ ಕಂದಾಯ ಪರಿವೀಕ್ಷಕರಿಂದ ಮಾಹಿತಿಯನ್ನು ಪಡೆದು ಭೂ ಪರಿವರ್ತನೆಗೆ ಆದೇಶ ಮಾಡಿರುವುದು ಸರಿಯಲ್ಲ. ಮೇಲ್ಕಂಡ ಕಾರಣಗಳಿಂದಾಗಿ ಆರೋಪಿತ ಅಧಿಕಾರಿ ಎರಡನೇ ಕಾರಣ ಕೇಳುವ ನೋಟೀಸಿಗೆ ಸಲ್ಲಿಸಿರುವ ಲಿಖಿತ ಅಹವಾಲಿನಲ್ಲಿ ಅವರನ್ನು ಆರೋಪಮುಕ್ತಗೊಳಿಸಲು ಪರಿಗಣಿಸುವಂತಹ ಯಾವುದೇ ಅಂಶಗಳು ಕಂಡುಬರುವುದಿಲ್ಲದಿರುವುದರಿಂದ ಆಪಾದಿತರು ವಿಚಾರಣಾ ವರದಿಯನ್ನು ಔಪಚಾರಿಕವಾಗಿ ವಿರೋಧಿಸುತ್ತಿದ್ದಾರೆಂದು ಸರ್ಕಾರವು ನಿರ್ಣಯಿಸಿದೆ.

ಮೇಲ್ಕಂಡಂತೆ ಆರೋಪಿತರಾದ ಶ್ರೀ ಎಂ. ಅಮರನಾಥ ಸುಮತಿ, ನಿವೃತ್ತ ಕೆ.ಎ.ಎಸ್. ಅಧಿಕಾರಿ ಇವರ ವಿರುದ್ಧದ ಆರೋಪಗಳು ಸಾಬೀತಾಗಿರುವ ಹಿನ್ನೆಲೆಯಲ್ಲಿ, ಇವರ ನಿವೃತ್ತಿ ವೇತನದಲ್ಲಿ ಮಾಹೆಯಾನ ರೂ. 500/– ಗಳನ್ನು 5 ವರ್ಷಗಳ ಅವಧಿಗೆ ಕಡಿತಗೊಳಿಸುವ ದಂಡನೆಯನ್ನು ವಿಧಿಸಲು ಸರ್ಕಾರವು ನಿರ್ಧರಿಸಿದ್ದು, ದಂಡನೆ ವಿಧಿಸುವ ಈ ಪ್ರಸ್ತಾವನೆಗೆ ಕರ್ನಾಟಕ ಲೋಕ ಸೇವಾ ಆಯೋಗವು ಮೇಲೆ ಓದಲಾದ ಕ್ರಮ ಸಂ.(5)ರ ಪತ್ರದಲ್ಲಿ ಸಹಮತಿ ಪಡೆದು ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 03 ಎಸ್‌ಇಎನ್ 2000 (ಸಿಆಸುಇ 312 ಕೆಇವಿ 2007), ಬೆಂಗಳೂರು ದಿನಾಂಕ: 21ನೇ ಅಕ್ಟೋಬರ್ 2010.

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ, ಸರ್ಕಾರವು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 214 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಶ್ರೀ ಎಂ. ಅಮರನಾಥ ಸುಮತಿ, ನಿವೃತ್ತ ಕೆ.ಎ.ಎಸ್. ಅಧಿಕಾರಿ ಇವರಿಗೆ ಇವರ ನಿವೃತ್ತಿ ವೇತನದಲ್ಲಿ ಮಾಹೆಯಾನ ರೂ. 500/– ಗಳನ್ನು 5 ವರ್ಷಗಳ ಅವಧಿಗೆ ಕಡಿತಗೊಳಿಸುವ ದಂಡನೆಯನ್ನು ವಿಧಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ವಾಸುದೇವಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಆಸುಇ (ಸೇವೆಗಳು–2)

ಪಿ.ಆರ್. 2657

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಸರ್ಕಾರದ ಕಾರ್ಯದರ್ಶಿ, ಸಿ.ಆ.ಸು. ಇಲಾಖೆ ಇವರ ಆಪ್ತ ಶಾಖೆಗೆ ಹೊಸ ಪ್ಯಾನಾಸೋನಿಕ್ ಕೀ–ಟೆಲಿಫೋನ್ ಉಪಕರಣಗಳನ್ನು ಖರೀದಿಸಿ ಅಳವಡಿಸಿರುವ ವೆಚ್ಚ ಪಾವತಿ ಮಾಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಕಾರ್ಯದರ್ಶಿ, ಸಿ.ಆ.ಸು. ಇಲಾಖೆ ಇವರ ಆಪ್ತ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ: ಸಿಆಸುಇ 142 ಕಾ 2010 ದಿನಾಂಕ: 05–08–2010.
2. ಸರ್ಕಾರದ ಪತ್ರ ಸಂಖ್ಯೆ: ಸಿಆಸುಇ 977 ಡಿಟಿಎನ್ 2010 ದಿನಾಂಕ: 11–08–2010.
3. ಮೆ. ಸ್ವಿಸ್ ಮಾರ್ಕೆಟಿಂಗ್ ಕಂ., ಬೆಂಗಳೂರು ಸಂಸ್ಥೆಯ ಪತ್ರ ದಿನಾಂಕ: 12–08–2010.
4. ಸರ್ಕಾರದ ಪತ್ರ ಸಂಖ್ಯೆ: ಸಿಆಸುಇ 977 ಡಿಟಿಎನ್ 2010 ದಿನಾಂಕ: 28–08–2010
5. ಮೆ. ಸ್ವಿಸ್ ಮಾರ್ಕೆಟಿಂಗ್ ಕಂ., ಬೆಂಗಳೂರು ಸಂಸ್ಥೆಯ ಬಿಲ್ ಸಂಖ್ಯೆ: 467 ದಿನಾಂಕ: 04–10–2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿನ ಟಿಪ್ಪಣಿಯಲ್ಲಿ ಸರ್ಕಾರದ ಕಾರ್ಯದರ್ಶಿ ಸಿ.ಆ.ಸು. ಇಲಾಖೆ ಇವರ ಆಪ್ತ ಶಾಖೆಯನ್ನು ನವೀಕರಿಸಲಾಗಿದ್ದು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಹಳೆಯ ಕೀ ಟೆಲಿಫೋನ್‌ಗಳನ್ನು ಬದಲಾಯಿಸಿ 5 ಹೊಸ ಪ್ಯಾನಾಸೋನಿಕ್ ಕೀ ಟೆಲಿಫೋನ್ ಹಾಗೂ ಒಂದು ದೂರವಾಣಿ ಉಪಕರಣಗಳನ್ನು ಅಳವಡಿಸುವಂತೆ ಸರ್ಕಾರದ ಕಾರ್ಯದರ್ಶಿ, ಸಿ.ಆ.ಸು. ಇಲಾಖೆ ಇವರ ಆಪ್ತ ಕಾರ್ಯದರ್ಶಿಯವರು ಕೋರಿಕೆ ಸಲ್ಲಿಸಿದ್ದರು. ಅದರಂತೆ, ಸರ್ಕಾರದ ಕಾರ್ಯದರ್ಶಿ, ಸಿ.ಆ.ಸು. ಇಲಾಖೆ ಇವರ ಆಪ್ತ ಶಾಖೆಗೆ ಐದು ಪ್ಯಾನಾಸೋನಿಕ್ 7730 ಕೀ–ಟೆಲಿಫೋನ್ ಉಪಕರಣಗಳು, ಒಂದು ಪುಷ್ ಬಟನ್ ದೂರವಾಣಿ ಉಪಕರಣ ಹಾಗೂ ಕೇಬ್ಲಿಂಗ್ ಮತ್ತು ಕಮಿಷನಿಂಗ್ ವೆಚ್ಚ ಸೇರಿ ಅಳವಡಿಸುವ ಸಂಬಂಧ ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿನ ಸರ್ಕಾರದ ಪತ್ರದಲ್ಲಿ ನಾಲ್ಕು ಸಂಸ್ಥೆಗಳಿಂದ ದರಪಟ್ಟಿಯನ್ನು ಕರೆಯಲಾಗಿದ್ದು, ಇದಕ್ಕೆ ಪ್ರತಿಕ್ರಯಿಸಿ ಮೂರು ಸಂಸ್ಥೆಗಳು ದರಪಟ್ಟಿಯನ್ನು ಸಲ್ಲಿಸಿದ್ದು, ಮೂರು ಸಂಸ್ಥೆಗಳ ದರಪಟ್ಟಿಗಳನ್ನು ನಿಯಮಾನುಸಾರ ಪರಿಶೀಲಿಸಿದಾಗ ಮೆ. ಸ್ವಿಸ್ ಮಾರ್ಕೆಟಿಂಗ್ ಕಂ., ಬೆಂಗಳೂರು ಸಂಸ್ಥೆಯು 7730 ಕೀ ಟೆಲಿಫೋನ್ ಉಪಕರಣ, ಒಂದು ಪುಷ್ ಬಟನ್ ದೂರವಾಣಿ ಹಾಗೂ ಕೇಬ್ಲಿಂಗ್ ಮತ್ತು ಕಮಿಷನಿಂಗ್ ವೆಚ್ಚ ಸೇರಿ ಅತಿ ಕಡಿಮೆ ದರ ಅಂದರೆ ರೂ. 28,870–00 (ಎಲ್ಲಾ ತೆರಿಗೆ ಸೇರಿ) ಮೊತ್ತವನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (3) ರಲ್ಲಿ ನಮೂದಿಸಿರುತ್ತದೆ. ಸರ್ಕಾರದ ಕಾರ್ಯದರ್ಶಿ, ಸಿ.ಆ.ಸು. ಇಲಾಖೆ ಇವರ ಆಪ್ತ ಶಾಖೆಗೆ ಪ್ಯಾನಾಸೋನಿಕ್ ಐದು ಸಂಖ್ಯೆ 7730 ಕೀ–ಟೆಲಿಫೋನ್ ಉಪಕರಣಗಳು, ಒಂದು ಪುಷ್ ಬಟನ್ ದೂರವಾಣಿ ಉಪಕರಣ ಹಾಗೂ ಕೇಬ್ಲಿಂಗ್ ಮತ್ತು ಕಮಿಷನಿಂಗ್ ಸೇರಿ ಒಟ್ಟು ರೂ. 28,870–00 (ರೂ. ಇಪ್ಪತ್ತೆಂಟು ಸಾವಿರದ ಎಂಟು ನೂರ ಎಪ್ಪತ್ತು ಮಾತ್ರ) (ತೆರಿಗೆ ಸೇರಿ) ವೆಚ್ಚದಲ್ಲಿ ಖರೀದಿಸಿ ಅಳವಡಿಸುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಪತ್ರದಲ್ಲಿ ಸದರಿ ಸಂಸ್ಥೆಯನ್ನು ಕೋರಲಾಗಿತ್ತು. ಅದರಂತೆ ಈ ಸಂಸ್ಥೆಯು ಸರ್ಕಾರದ ಕಾರ್ಯದರ್ಶಿ, ಸಿ.ಆ.ಸು. ಇಲಾಖೆ ಇವರ ಆಪ್ತ ಶಾಖೆಗೆ ಐದು ಪ್ಯಾನಾಸೋನಿಕ್ 7730 ಕೀ–ಟೆಲಿಫೋನ್ ಉಪಕರಣಗಳು, ಒಂದು ಪುಷ್ ಬಟನ್ ದೂರವಾಣಿ ಉಪಕರಣ ಹಾಗೂ ಕೇಬ್ಲಿಂಗ್ ಮತ್ತು ಕಮಿಷನಿಂಗ್ ವೆಚ್ಚ ಸೇರಿ ಖರೀದಿಸಿ ಅಳವಡಿಸಿದ್ದು, ಮೇಲೆ ಓದಲಾದ ಕ್ರಮ ಸಂಖ್ಯೆ (5) ರಲ್ಲಿನ ಬಿಲ್ಲನ್ನು ಪಾವತಿಗಾಗಿ ಸಲ್ಲಿಸಿದೆ. ಅದರಂತೆ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 397 ಡಿಟಿಎನ್ 2010, ಬೆಂಗಳೂರು ದಿನಾಂಕ: 26–10–2010.

ಪ್ರಸ್ತಾವನೆಯಲ್ಲಿನ ವಿವರಣೆಯನ್ವಯ ಸರ್ಕಾರದ ಕಾರ್ಯದರ್ಶಿ, ಸಿ.ಆ.ಸು. ಇಲಾಖೆ ಇವರ ಆಪ್ತ ಶಾಖೆಗೆ ಐದು ಪ್ಯಾನಾಸೋನಿಕ್ 7730 ಕೀ–ಟೆಲಿಫೋನ್ ಉಪಕರಣಗಳು, ಒಂದು ಪುಷ್ ಬಟನ್ ದೂವಾಣಿ ಉಪಕರಣ ಹಾಗೂ ಕೇಬ್ಲಿಂಗ್ ಮತ್ತು ಕಮಿಷನಿಂಗ್ ವೆಚ್ಚ ಸೇರಿ ಖರೀದಿಸಿ ಅಳವಡಿಸಿರುವ ವೆಚ್ಚ ಒಟ್ಟು ರೂ. 28,870–00 (ರೂ. ಇಪ್ಪತ್ತೆಂಟು ಸಾವಿರದ ಎಂಟು ನೂರ ಎಪ್ಪತ್ತು ಮಾತ್ರ) (ತೆರಿಗೆ ಸೇರಿ) ಗಳನ್ನು ಮೆ. ಸ್ವಿಸ್ ಮಾರ್ಕೆಟಿಂಗ್ ಕಂ., ನಂ. 277/14, ಪೋಸ್ಟ್ ಆಫೀಸ್ ಎದುರು, 10ನೇ ಕ್ರಾಸ್, ವಿಲ್ಸನ್ ಗಾರ್ಡನ್, ಬೆಂಗಳೂರು–27 ಸಂಸ್ಥೆಗೆ ಪಾವತಿ ಮಾಡಲು ಮಂಜೂರಾತಿ ನೀಡಲಾಗಿದೆ.

ಈ ವೆಚ್ಚವನ್ನು ಆಯವ್ಯಯ ಲೆಕ್ಕಶೀರ್ಷಿಕೆ "2052–ಸಚಿವಾಲಯ ಸಾಮಾನ್ಯ ಸೇವೆಗಳು–090–ಸಚಿವಾಲಯ–01 ಕರ್ನಾಟಕ ಸರ್ಕಾರ ಸಚಿವಾಲಯ–051–ಸಾಮಾನ್ಯ ವೆಚ್ಚಗಳು" ಇದರಡಿಯಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 1996, ದಿನಾಂಕ 10–7–1996ರಲ್ಲಿ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ.ಎಸ್. ಮಂಜುನಾಥ್

ಸರ್ಕಾರದ ಅಧೀನ ಕಾರ್ಯದರ್ಶಿ

ಸಿಆಸುಇ (ಕಾರ್ಯಕಾರಿ)

ಪಿ.ಆರ್. 2658

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವಾಲಯ

ವಿಷಯ : ಕರ್ನಾಟಕ ರಾಜ್ಯದ ದೇವಸ್ಥಾನಗಳು ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಹಾಗೂ ಅಲ್ಲಿನ ಸುತ್ತಣ ಪರಿಸರದಲ್ಲಿ ಪ್ಲಾಸ್ಟಿಕ್ ಬಳಕೆ ಮತ್ತು ವಿಲೇವಾರಿ ನಿಷೇಧಿಸುವ ಬಗ್ಗೆ.

ಓದಲಾಗಿದೆ : ಪರಿಸರ (ಸಂರಕ್ಷಣೆ) ಕಾಯಿದೆ, 1986

ಪ್ರಸ್ತಾವನೆ :

ಕರ್ನಾಟಕ ರಾಜ್ಯವು ಹಲವಾರು ದೇವಸ್ಥಾನಗಳು ಹಾಗೂ ಧಾರ್ಮಿಕ ಕೇಂದ್ರಗಳನ್ನು ಹೊಂದಿದೆ. ಹೆಚ್ಚಿನ ದೇವಸ್ಥಾನಗಳು ಹಾಗೂ ಧಾರ್ಮಿಕ ಕೇಂದ್ರಗಳು ನದಿ, ಸರೋವರ, ಬೆಟ್ಟ ಗುಡ್ಡಗಳು ಹಾಗೂ ದಟ್ಟ ಕಾಡುಗಳಂತಹ ಪರಿಸರಾತ್ಮಕವಾಗಿ ಸೂಕ್ಷ್ಮವಾದ ಪ್ರಕೃತಿಯ ನಡುವೆ ಸ್ಥಾಪಿಸಲ್ಪಟ್ಟಿವೆ. ಇಂತಹ ಅನೇಕ ದೇವಸ್ಥಾನ ಮತ್ತು ಧಾರ್ಮಿಕ ಕೇಂದ್ರಗಳಲ್ಲಿ ಕಲ್ಯಾಣಿ ಮುಂತಾದ ಜಲಕಾಯಗಳ ನಿರ್ಮಾಣವೂ ಆಗಿದೆ. ಈ ಪ್ರದೇಶಗಳು ಜಲಚರಗಳೇ ಮುಂತಾದ ಜೀವವೈವಿಧ್ಯ ಸಂರಕ್ಷಣೆಯ ತಾಣಗಳಾಗಿರುವುದನ್ನು ಗಮನಿಸಲಾಗಿದೆ. ನಮ್ಮ ಸಾಂಪ್ರದಾಯಿಕ ಪೂಜಾ ವಿಧಾನಗಳು ಮತ್ತು ಧಾರ್ಮಿಕ ಪ್ರಕ್ರಿಯೆಗಳು ಪ್ರಕೃತಿ ಮತ್ತು ಅಲ್ಲಿನ ಪರಿಸರಕ್ಕೆ ಪೂರಕವಾಗಿಯೇ ಇರುತ್ತವೆ. ಆದರೆ, ಇಂತಹ ಚಟುವಟಿಕೆಗಳ ಮೇಲೆ ಪ್ಲಾಸ್ಟಿಕ್ ಬಳಕೆಯಂತಹ ಆಧುನಿಕ ವಸ್ತುಗಳ ಕರಿ ಛಾಯೆ ಆವರಿಸಿ ಅಲ್ಲಿನ ಪರಿಸರದ ಮೇಲೆ ಅಗಾಧ ದುಷ್ಪರಿಣಾಮ ಬೀರುತ್ತಿರುವುದನ್ನು ಗಮನಿಸಲಾಗಿದೆ. ಪೂಜಾ ಸಾಮಗ್ರಿಗಳನ್ನು ಒಯ್ಯಲು, ಪ್ರಸಾದ ವಿನಿಯೋಗ, ಮುಂತಾದ ಸಂದರ್ಭಗಳಲ್ಲಿ ಪ್ಲಾಸ್ಟಿಕ್ ಕೈಚೀಲ, ತಟ್ಟೆ, ಲೋಟ, ಚಮಚ, ಫೋರ್ಕ್, ಸ್ಟ್ರಾಗಳು ಬಳಕೆಯಾಗುತ್ತಿದ್ದು, ಇವುಗಳನ್ನು ಬಳಕೆಯ ನಂತರ ಅಲ್ಲಿನ ಪರಿಸರದಲ್ಲಿ ಅವೈಜ್ಞಾನಿಕವಾಗಿ ಎಸೆಯುವುದರಿಂದ ಅಲ್ಲಿನ ಪರಿಸರದ ಮೇಲೆ ದುಷ್ಪರಿಣಾಮ ಉಂಟಾಗಿ ಸ್ಥಳೀಯ ಪರಿಸರ ಮಾಲಿನ್ಯಕ್ಕೆ ಇವು ಕಾರಣೀಭೂತವಾಗಿವೆ. ಇಂತಹ ಚಟುವಟಿಕೆಗಳಿಂದಾಗಿ ದೇವಸ್ಥಾನ ಮತ್ತು ಧಾರ್ಮಿಕ ಕ್ಷೇತ್ರಗಳ ಭವ್ಯ ಪರಂಪರೆಗೆ ಧಕ್ಕೆಯುಂಟಾಗಿದೆಯಲ್ಲದೆ, ಸ್ಥಳೀಯ ಪ್ರಾಕೃತಿಕ ಸನ್ನಿವೇಶ ಮತ್ತು ವನ್ಯಜೀವಿಗಳ ಮೇಲೆ ಅಗಾಧ ದುಷ್ಪರಿಣಾಮ ಉಂಟಾಗುತ್ತಿದೆ. ಇಂತಹ ಆಘಾತಕಾರಿ ಬೆಳವಣಿಗೆಯನ್ನು ತಡೆಗಟ್ಟಲು ತುರ್ತು ಕ್ರಮ ಕೈಗೊಳ್ಳುವುದು ಅಗತ್ಯವೆಂದು ಮನಗಾಣಲಾಗಿದೆ.

ಅದರಂತೆ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಅಪಜೀ 138 ಇಪಿಸಿ 2010 ಬೆಂಗಳೂರು ದಿನಾಂಕ: 20–10–2010.

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದ ದೇವಸ್ಥಾನಗಳು ಮತ್ತು ಧಾರ್ಮಿಕ ಕ್ಷೇತ್ರಗಳು ಹಾಗೂ ಅವುಗಳ ವ್ಯಾಪ್ತಿಯಿಂದ 100 ಮೀಟರ್ ಪರಿಧಿಯೊಳಗೆ ಪ್ಲಾಸ್ಟಿಕ್ ಉತ್ಪಾದನೆಗಳ ಬಳಕೆ, ಮಾರಾಟ ಮತ್ತು ವಿಲೇವಾರಿಯನ್ನು ನಿಷೇಧಿಸಲು ಕ್ರಮ ಕೈಗೊಳ್ಳುವಂತೆ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು ಹಾಗೂ ಎಲ್ಲಾ ಜಿಲ್ಲಾಧಿಕಾರಿಗಳವರಿಗೆ ನಿರ್ದೇಶನ ನೀಡಲಾಗಿದೆ. ಪೂಜಾಸ್ಥಳಗಳಲ್ಲಿ ಜೈವಿಕವಾಗಿ ಅಳಿಯುವ ಸಾಂಪ್ರದಾಯಿಕ ಸಾಮಗ್ರಿಗಳನ್ನು ಮಾತ್ರ ಬಳಸುವುದನ್ನು ಖಾತ್ರಿಪಡಿಸಿಕೊಳ್ಳಲು ನಿರ್ದೇಶಿಸಿದೆ.

ಈ ನಿರ್ದೇಶನವನ್ನು ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಮಂತ್ರಾಲಯದ ಅಧಿಸೂಚನೆ ಸಂಖ್ಯೆ: ಎಸ್.ಓ. 152(ಇ) ದಿನಾಂಕ: 10–02–1988ರ ರೀತ್ಯಾ ರಾಜ್ಯ ಸರ್ಕಾರಕ್ಕೆ ಪ್ರದತ್ತವಾಗಿರುವ ಪರಿಸರ ಸಂರಕ್ಷಣಾ ಕಾಯಿದೆ, 1986ರ ಸೆಕ್ಷನ್ 5ರ ಅನುಸಾರ ನೀಡಲಾಗಿದೆ.

ಈ ನಿರ್ದೇಶನವು ತಕ್ಷಣದಿಂದ ಜಾರಿಗೆ ಬರುತ್ತದೆ ಮತ್ತು ಅನುಪಾಲನೆಯಾಗದಿದ್ದಲ್ಲಿ ಕೇಂದ್ರ ಸರ್ಕಾರದ ಪರಿಸರ (ಸಂರಕ್ಷಣೆ) ಕಾಯಿದೆ, 1986ರ ಸೆಕ್ಷನ್ 15 ಮತ್ತು 17ರಲ್ಲಿನ ದಂಡನೀಯ ಅವಕಾಶಗಳು ಅನ್ವಯವಾಗುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಮನೋಹರ್

ಸರ್ಕಾರದ ಅಧೀನ ಕಾರ್ಯದರ್ಶಿ

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಪಿ.ಆರ್. 2659

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ತಿದ್ದೋಲೆ

ಸಂಖ್ಯೆ: ಐಟಿಡಿ 39 ಎಂಡಿಎ 2008 ಬೆಂಗಳೂರು, ದಿನಾಂಕ 20–10–2010

ವಿಷಯ : ಗ್ರಾಮೀಣ ಬಿಪಿಓ ಕೇಂದ್ರಗಳನ್ನು ಸ್ಥಾಪಿಸುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಬಗ್ಗೆ.

ಮೇಲಿನ ವಿಷಯಕ್ಕೆ ಸಂಬಂಧಪಟ್ಟಂತೆ, ಸರ್ಕಾರಿ ಆದೇಶ ಸಂಖ್ಯೆ ಐಟಿಡಿ 39 ಎಂಡಿಎ 2008 ದಿನಾಂಕ: 21–09–2010ರ ಆದೇಶದಲ್ಲಿನ ಅನುಬಂಧದಲ್ಲಿ ಕ್ರಮ ಸಂಖ್ಯೆ: 2ರಲ್ಲಿನ ಮಹಂತೇಶ್ ಜಿ.ಕಿವಡಸಣ್ಣವರ್, ಮ್ಯಾನೇಜಿಂಗ್ ಟ್ರಸ್ಟೀ, ಸಮರ್ಥನಂ ಟ್ರಸ್ಟ್ ಫಾರ್ ಡಿಸೇಬಲ್ಡ್, ಸಿಎ–39, 15ನೇ ಅಡ್ಡ ರಸ್ತೆ, 16ನೇ ಮುಖ್ಯ ರಸ್ತೆ, 4ನೇ ಸೆಕ್ಟಾರ್, ಹೆಚ್.ಎಸ್.ಆರ್., ಬಡಾವಣೆ ಬೆಂಗಳೂರು–560102– ಈ ಅಭ್ಯರ್ಥಿಯ ಎದುರು ಬಿಪಿಓ ಕೇಂದ್ರ ತೆರೆಯಲು ಅನುಮೋದಿಸಿರುವ ಸ್ಥಳ ಇದರ ಅಡಿಯಲ್ಲಿ ನಮೂದಿಸಲಾಗಿರುವ " ಬೆಂಗಳೂರು ಗ್ರಾಮಾಂತರ ಜಿಲ್ಲೆ" ಎಂಬುದಕ್ಕೆ ಬದಲಾಗಿ "ರಾಮನಗರ ಜಿಲ್ಲೆ" ಎಂದು ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಂ.ವಿ. ಕೃಷ್ಣಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

ಪಿ.ಆರ್ 2650

ಜಲಸಂಪನ್ಮೂಲ ಸಚಿವಾಲಯ

ಸೇರ್ಪಡೆ ಆದೇಶ(ADDENDUM)

ಸಂಖ್ಯೆ: ಜಸಂಇಂ/ಅಭಯೋ 1, 2008 ಬೆಂಗಳೂರು ದಿನಾಂಕ 13-10-2010

ಉಲ್ಲೇಖ :

1. ಸರ್ಕಾರಿ ಆದೇಶ ಸಂಖ್ಯೆ: ಜಸಂಇ 35 ಇಂಸಂಕೇ 2004 ಬೆಂಗಳೂರು, ದಿ: 23-01-2007.
2. ಸರ್ಕಾರಿ ಆದೇಶ ಸಂಖ್ಯೆ: ಜಸಂಇ 18 ಅಭಯೋ 2006 ಬೆಂಗಳೂರು, ದಿ: 28-05-2007.
3. ಅಅ., ಉ ಮತ್ತು ಮೌ, ಬೆಂಗಳೂರು ರವರ ಪತ್ರ ಸಂಖ್ಯೆ: ಅಅ/ಉ ಮತ್ತು ಮೌ/ಸ.ಇಂ-5/ ಸನೀಇ/ದಕ್ಷಿಣ ವಲಯ ಅಣೆಕಟ್ಟುಗಳ ಪರಿವೀಕ್ಷಣೆ/2009-10/1151 ದಿ: 26-03-2010.

*****

ಸರ್ಕಾರಿ ಆದೇಶ ಸಂಖ್ಯೆ: ಜಸಂಇ 35 ಇಂಸಂಕೇ 2004 ಬೆಂಗಳೂರು, ದಿ: 23-01-2007ರಲ್ಲಿ ರಚಿಸಲಾಗಿರುವ ಅಣೆಕಟ್ಟು ಸುರಕ್ಷತಾ ಪರಿಶೀಲನಾ ಸಮಿತಿ (DSRP) ಯಲ್ಲಿ ಹಾಲಿ ಸದಸ್ಯರಾಗಿದ್ದ ಶ್ರೀ. ವೈ. ಎಸ್. ಕಾಂಬ್ಳೆ, ಮುಖ್ಯ ಅಭಿಯಂತರರು, (ನಿ) ರವರು ನಿಧನ ಹೊಂದಿದರಿಂದ ಅವರ ಸ್ಥಾನದಲ್ಲಿ ಶ್ರೀ. ಎಂ ಎಸ್ ರಾಮರಾವ್, ಮುಖ್ಯ ಅಭಿಯಂತರರು ಕೆಪಿಸಿಎಲ್ (ನಿ), # P-16, 25th main, J.P. Nagar, 1-Phase, Bangalore-560078, ರವರನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ. ಹಾಗೂ, ಈ ಸದಸ್ಯತ್ವವು, ಸರ್ಕಾರಿ ಆದೇಶ ಸಂಖ್ಯೆ: ಜಸಂಇ 35 ಇಂಸಂಕೇ 2004 ಬೆಂಗಳೂರು, ದಿ: 23-01-2007 ರಲ್ಲಿ ಸೂಚಿಸಲಾಗಿರುವ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಜಸಂಇ 18 ಅಭಯೋ 2006 ಬೆಂಗಳೂರು, ದಿ: 28-05-2007ರಲ್ಲಿ, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ವ್ಯಾಪ್ತಿಗೆ ಒಳಪಡುವ ಭಾರಿ ಅಣೆಕಟ್ಟುಗಳ ಸುರಕ್ಷತಾ ಪರಿಶೀಲನೆಗಾಗಿ ರಚಿಸಲಾಗಿರುವ ಕರ್ತವ್ಯನಿರತ ಅಧಿಕಾರಿಗಳ ತಂಡದ ಸಲಹೆಗಾರರಾಗಿದ್ದ ಶ್ರೀ. ವೈ. ಎಸ್. ಕಾಂಬ್ಳೆ, ಮುಖ್ಯ ಅಭಿಯಂತರರು (ನಿ) ರವರು ನಿಧನ ಹೊಂದಿದರಿಂದ ಅವರ ಸ್ಥಾನದಲ್ಲಿ ಶ್ರೀ.ಎಂ.ಎಸ್. ರಾಮರಾವ್, ಮುಖ್ಯ ಅಭಿಯಂತರರು, ಕೆಪಿಸಿಎಲ್ (ನಿ), # P-16, 25th main, J.P. Nagar, 1-Phase, Bangalore-560078, ರವರನ್ನು ಸಲಹೆಗಾರರನ್ನಾಗಿ ನೇಮಿಸಲಾಗಿದೆ. ಹಾಗೂ, ಸದರಿ ಸ್ಥಾನವು ಸರ್ಕಾರಿ ಆದೇಶ ಸಂಖ್ಯೆ: ಜಸಂಇ 18 ಅಭಯೋ 2006 ಬೆಂಗಳೂರು, ದಿ: 28-05-2007 ರಲ್ಲಿ ಸೂಚಿಸಲಾಗಿರುವ ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಹೆಚ್. ಪರಶುರಾಮ್
ಸರ್ಕಾರದ ಉಪ ಕಾರ್ಯದರ್ಶಿ(ಕೆ.ಬಿ.ಜೆ.ಎನ್)
ಜಲ ಸಂಪನ್ಮೂಲ ಇಲಾಖೆ.

ಪಿ.ಆರ್ 2651

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ಮಾರ್ಪಾಡು ಆದೇಶ

ಸಂಖ್ಯೆ: ಐಟಿಡಿ 39 ಎಂಡಿಎ 2008 ಬೆಂಗಳೂರು, ದಿನಾಂಕ 20-10-2010.

ವಿಷಯ : ಗ್ರಾಮೀಣ ಬಿಪಿಓ ಕೇಂದ್ರಗಳನ್ನು ಸ್ಥಾಪಿಸುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಬಗ್ಗೆ.
ಉಲ್ಲೇಖ : ವ್ಯವಸ್ಥಾಪಕ ನಿರ್ದೇಶಕರು, ಕೆಬಿಟ್ಸ್ ಹಾಗೂ ಅಧ್ಯಕ್ಷರು, ಗ್ರಾ. ಬಿಪಿಓ ಸ್ಕ್ರೀನಿಂಗ್ ಕಮಿಟಿ. ಇವರ ಪತ್ರಸಂ: ಕೆಬಿಟ್ಸ್/ ಕೈ.ಉ.ಅ/ಗ್ರಾ.ಬಿ.ಪಿ.ಓ/22/2010-11 ದಿ: 20-09-2010.

ಮೇಲಿನ ವಿಷಯಕ್ಕೆ ಸಂಬಂಧಪಟ್ಟಂತೆ, ಉಲ್ಲೇಖಿತ ಪತ್ರದಲ್ಲಿನ ಪ್ರಸ್ತಾವನೆಯಂತೆ ಸರ್ಕಾರಿ ಆದೇಶ ಸಂಖ್ಯೆ ಐಟಿಡಿ 39 ಎಂಡಿಎ 2008 ದಿನಾಂಕ: 14-06-2010ರ ಆದೇಶದ ಅನುಬಂಧ-ಅ ರಲ್ಲಿನ ಕ್ರಮಸಂಖ್ಯೆ:3ನ್ನು ಈ ಕೆಳಕಂಡಂತೆ ಮಾರ್ಪಡಿಸಿದೆ:-

ಕ್ರಮ ಸಂ:	ಆಯ್ಕೆಯಾದ ಅಭ್ಯರ್ಥಿಗಳ ಹೆಸರು ಮತ್ತು ವಿಳಾಸ ಶ್ರೀ/ಶ್ರೀಮತಿ	ಬಿಪಿಓ ಕೇಂದ್ರ ತೆರೆಯಲು ಉದ್ದೇಶಿಸಿರುವ ಸ್ಥಳ
1	ಅಭಿಷೇಕ್ ಡಿ ಮಾವಿನ ಕುರ್ವೆ, ನಂ: 54 & 55, ಚಾಮುಂಡಿಪುರ, ಬೋಳಪ್ಪನಹಳ್ಳಿ ಪೋಸ್ಟ್, ಕಸಬಾ ಹೋಬಳಿ, ರಾಮನಗರ ತಾಲ್ಲೂಕು, ಜಿಲ್ಲೆ- 571511	ಚಾಮುಂಡಿಪುರ, ಬೋಳಪ್ಪನಹಳ್ಳಿ ಪೋಸ್ಟ್,ಕಸಬಾ ಹೋಬಳಿ, ರಾಮನಗರ (ತಾಲ್ಲೂಕು, ಜಿಲ್ಲೆ)- 571511

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ವಿ. ಕೃಷ್ಣಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

ಪಿ.ಆರ್ 2653

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ತಿದ್ದುಪಡಿ

ಸಂಖ್ಯೆ:ಆಕುಕ 50 ಐಎಂಎಂ 2010 ಬೆಂಗಳೂರು, ದಿನಾಂಕ: 29–09–2010

ಸರ್ಕಾರದ ಆದೇಶ ಸಂಖ್ಯೆ: ಆಕುಕ 50 ಐಎಂಎಂ2010, ದಿನಾಂಕ: 26–07–2010 ರ ಆದೇಶದ ಭಾಗದಲ್ಲಿನ 2ನೇ ಸಾಲಿನಲ್ಲಿ "ದಿನಾಂಕ: 12–12–2009 ರಿಂದ 01 ವರ್ಷದ ಅವಧಿಗೆ ಅಥವಾ ಬೆಂಗಳೂರು ವೃತ್ತ–5ರಲ್ಲಿ ಖಾಲಿಯಿರುವ ಔಷದ ಪರಿವೀಕ್ಷಕರ ಹುದ್ದೆಯನ್ನು ತುಂಬುವವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಹೆಚ್ಚುವರಿ ಪ್ರಭಾರವನ್ನು ಸಮವರ್ತಿಯಾಗಿ ನಿರ್ವಹಿಸಲು' ಎಂದು ನಮೂದಿತವಾಗಿರುವ ಬದಲಾಗಿ "ದಿನಾಂಕ:19–12–2008 ರಿಂದ ಔಷಧ ಪರಿವೀಕ್ಷಕರು, ಸಹಾಯಕ ಔಷಧ ನಿಯಂತ್ರಕರ ಕಛೇರಿ, ಬೆಂಗಳೂರು ವೃತ್ತ–5 ಇಲ್ಲಿ ಖಾಲಿಯಿರುವ ಹುದ್ದೆಯನ್ನು ನಿಯಮಾನುಸಾರ ಭರ್ತಿ ಮಾಡುವವರೆಗೆ ಸದರಿ ಔಷಧ ಪರಿವೀಕ್ಷಕರು, ಕೇಂದ್ರ ಕಛೇರಿ, ಬೆಂಗಳೂರು ಇವರನ್ನು ಸದರಿ ಹುದ್ದೆಯ ಹೆಚ್ಚುವರಿ ಪ್ರಭಾರದಲ್ಲಿ ಸಮವರ್ತಿಯಾಗಿ ಮುಂದುವರೆಸಲು" ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್ 2654

ಆರ್.ಎಸ್.ಇಟಗಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಭಾರತೀಯ ವೈದ್ಯ ಪದ್ದತಿ

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : 'ಬೆಂಗಳೂರು ಐ.ಟಿ. ಬಿಜ್ – 2010'ರ ಕಾರ್ಯಕ್ರಮದ ಅಂಗವಾಗಿ ಏರ್ಪಡಿಸಲಾಗಿರುವ ಮಾಹಿತಿ ತಂತ್ರಜ್ಞಾನದಲ್ಲಿ ಗ್ರಾಮೀಣ ವಿದ್ಯಾರ್ಥಿಗಳಿಗಾಗಿ 'ರಸಪ್ರಶ್ನೆ' ಕಾರ್ಯಕ್ರಮವನ್ನು ನಡೆಸಲು ಹೆಚ್ಚುವರಿ ಅನುದಾನ ಬಿಡುಗಡೆ ಬಗ್ಗೆ – ಆದೇಶ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ : ಮಾತಂಇ 36 ಎಂಡಿಎ 2010, ಬೆಂಗಳೂರು, ದಿನಾಂಕ : 06–09–2010

2. ಆಡಳಿತಾಧಿಕಾರಿ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯದ ಪತ್ರ ಸಂಖ್ಯೆ : ಮಾತಂನಿ/ಲೆಕ್ಕ –1/24/ಗ್ರಾ.ರಸಪ್ರಶ್ನೆ/662/2010–11 ದಿನಾಂಕ : 19–10–2010.

* * *

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ 'ಬೆಂಗಳೂರು ಐ.ಟಿ. ಬಿಜ್–2010'ರ ಮೇಳದ ಅಂಗವಾಗಿ ಮಾಹಿತಿ ತಂತ್ರಜ್ಞಾನದಲ್ಲಿ ಗ್ರಾಮೀಣ ವಿದ್ಯಾರ್ಥಿಗಳಿಗಾಗಿ 'ರಸಪ್ರಶ್ನೆ' ಕಾರ್ಯಕ್ರಮವನ್ನು ನಡೆಸಲು ಸದರಿ ಆದೇಶದ ಅನುಬಂಧದಲ್ಲಿ ತೋರಿಸಿರುವಂತೆ ರೂ. 16,42,500/– ಅನುದಾನವನ್ನು ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರಿಗೆ ಬಿಡುಗಡೆ ಮಾಡಲಾಗಿದೆ.

ಮೇಲೆ (2)ರಲ್ಲಿ ಓದಲಾದ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯದ ಪತ್ರದಲ್ಲಿ ರಾಯಚೂರು, ಕೋಲಾರ, ಚಾಮರಾಜನಗರ, ಉಡುಪಿ ಮತ್ತು ಕೊಪ್ಪಳ ಜಿಲ್ಲೆಗಳ ಸಾರ್ವಜನಿಕ ಉಪನಿರ್ದೇಶಕರುಗಳು ಗ್ರಾಮೀಣ 'ರಸಪ್ರಶ್ನೆ' ಕಾರ್ಯಕ್ರಮಕ್ಕೆ ಬಿಡುಗಡೆಯಾದ ಅನುದಾನಗಳು ಪೂರ್ತಿ ಖರ್ಚಾಗಿದ್ದು, ಪ್ರಾದೇಶಿಕ ಮಟ್ಟದ ಅಂತಿಮ ಸ್ಪರ್ಧೆಯ 3ನೇ ಸುತ್ತಿಗೆ ಹಾಗೂ ರಾಷ್ಟ್ರಮಟ್ಟದ ಅಂತಿಮ ಸ್ಪರ್ಧೆಯ 4ನೇ ಸುತ್ತಿಗೆ ಆಯ್ಕೆಯಾದ ತಂಡಗಳು ಭಾಗವಹಿಸಲು ಅನುದಾನದ ಕೊರತೆಯಾಗಿರುತ್ತದೆಂದು ತಿಳಿಸುತ್ತಾ, ಈ ಕೆಳಕಂಡ ಜಿಲ್ಲೆಗಳ ಉಪನಿರ್ದೇಶಕರುಗಳಿಗೆ ಕೆಳಕಂಡಂತೆ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಲು ಕೋರಲಾಗಿದೆ :–

1. ರಾಯಚೂರು ಜಿಲ್ಲೆ	ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ರಾಯಚೂರು ಜಿಲ್ಲೆ	ರೂ. 25,000/–
2. ಚಾಮರಾಜನಗರ	ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಚಾಮರಾಜನಗರ ಜಿಲ್ಲೆ	ರೂ. 5,000/–
3. ಉಡುಪಿ	ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಉಡುಪಿ ಜಿಲ್ಲೆ	ರೂ. 15,000/–
4. ಕೊಪ್ಪಳ	ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಕೊಪ್ಪಳ ಜಿಲ್ಲೆ	ರೂ. 15,000/–
	ಒಟ್ಟು	ರೂ. 60,000/–

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಗ್ರಾಮೀಣ ವಿದ್ಯಾರ್ಥಿಗಳಿಗಾಗಿ 'ರಸಪ್ರಶ್ನೆ' ಕಾರ್ಯಕ್ರಮದ ಪ್ರಾದೇಶಿಕ ಮಟ್ಟದ ಅಂತಿಮ ಸ್ಪರ್ಧೆಯ 3ನೇ ಸುತ್ತಿಗೆ ಹಾಗೂ ರಾಷ್ಟ್ರಮಟ್ಟದ ಅಂತಿಮ ಸ್ಪರ್ಧೆಯ 4ನೇ ಸುತ್ತಿಗೆ ಆಯ್ಕೆಯಾದ ತಂಡಗಳು ಭಾಗವಹಿಸಲು ರಾಯಚೂರು, ಚಾಮರಾಜನಗರ, ಉಡುಪಿ ಮತ್ತು ಕೊಪ್ಪಳ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರುಗಳಿಗೆ ಹೆಚ್ಚುವರಿ ಅನುದಾನಗಳನ್ನು ಬಿಡುಗಡೆ ಮಾಡಲು ರೂ. 60,000–00 ಹೆಚ್ಚುವರಿ ಅನುದಾನವನ್ನು ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ, ಇವರಿಗೆ ಬಿಡುಗಡೆ ಮಾಡಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ : ಮಾತಂಇ 36, ಎಂಡಿಎ 2010 ಬೆಂಗಳೂರು, ದಿನಾಂಕ : 23ನೇ ಅಕ್ಟೋಬರ್, 2010

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು 'ಬೆಂಗಳೂರು ಐ.ಟಿ. ಬಿಜ್–2010ರ ಮೇಳದ ಅಂಗವಾಗಿ ಗ್ರಾಮೀಣ ವಿದ್ಯಾರ್ಥಿಗಳಿಗಾಗಿ 'ರಸಪ್ರಶ್ನೆ' ಕಾರ್ಯಕ್ರಮದ ಪ್ರಾದೇಶಿಕ ಮಟ್ಟದ ಅಂತಿಮ ಸ್ಪರ್ಧೆಯ 3ನೇ ಸುತ್ತಿಗೆ ಹಾಗೂ ರಾಷ್ಟ್ರಮಟ್ಟದ ಅಂತಿಮ ಸ್ಪರ್ಧೆಯ 4ನೇ ಸುತ್ತಿಗೆ ಆಯ್ಕೆಯಾದ ತಂಡಗಳು ಭಾಗವಹಿಸಲು ರಾಯಚೂರು, ಚಾಮರಾಜನಗರ, ಉಡುಪಿ ಮತ್ತು ಕೊಪ್ಪಳ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರುಗಳಿಗೆ ಈ ಕೆಳಕಂಡಂತೆ ಹೆಚ್ಚುವರಿ ಅನುದಾನಗಳನ್ನು ಬಿಡುಗಡೆ ಮಾಡಲು ರೂ. 60,000–00 (ರೂ. ಅರವತ್ತು

ಸಾವಿರಗಳು ಮಾತ್ರ) ಹೆಚ್ಚುವರಿ ಅನುದಾನವನ್ನು ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ, ಇವರಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ :-

1. ರಾಯಚೂರು ಜಿಲ್ಲೆ	ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ರಾಯಚೂರು ಜಿಲ್ಲೆ	ರೂ. 25,000/-
2. ಚಾಮರಾಜನಗರ	ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಚಾಮರಾಜನಗರ ಜಿಲ್ಲೆ	ರೂ. 5,000/-
3. ಉಡುಪಿ	ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಉಡುಪಿ ಜಿಲ್ಲೆ	ರೂ. 15,000/-
4. ಕೊಪ್ಪಳ	ಉಪನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ ಕೊಪ್ಪಳ ಜಿಲ್ಲೆ	ರೂ. 15,000/-
	ಒಟ್ಟು	ರೂ. 60,000/-

ಈ ವೆಚ್ಚವನ್ನು 2010-11ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ "3451-00-090-2-01 ಮಾಹಿತಿ ತಂತ್ರಜ್ಞಾನ ಉನ್ನತೀಕರಣ ಮತ್ತು ಅಭಿವೃದ್ಧಿ - 059 - ಇತರೆ ಖರ್ಚು (ಯೋಜನೆ)" ಇದರಡಿಯಲ್ಲಿ ಒದಗಣೆ ಮಾಡಲಾದ ಅನುದಾನದಿಂದ ಭರಿಸತಕ್ಕದ್ದು.

ಸದರಿ ಅನುದಾನವನ್ನು ಆಡಳಿತಾಧಿಕಾರಿಗಳು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ, ಇವರು ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ, ಇವರ ಮೇಲು ಸಹಿ ಪಡೆದು ಖಜಾನೆಯಿಂದ ಸದರಿ ಅನುದಾನವನ್ನು ಡ್ರಾ ಮಾಡಿ ವಿತರಿಸತಕ್ಕದ್ದು.

ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಇವರು ಈ ಅನುದಾನದ ಬಳಕೆಯ ಬಗ್ಗೆ ಉಪಯೋಗಿತಾ ದೃಢೀಕರಣ ಪತ್ರಗಳನ್ನು ಸಂಬಂಧಪಟ್ಟ ರಾಜ್ಯದ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರುಗಳಿಂದ ಪಡೆದು ಈ ಆರ್ಥಿಕ ವರ್ಷದೊಳಗಾಗಿ ಸರ್ಕಾರಕ್ಕೆ ಒದಗಿಸತಕ್ಕದ್ದು.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ : ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ : 16-05-2008ರನ್ವಯ ಆರ್ಥಿಕ ಇಲಾಖೆಯ ಸಹಮತಿಯನ್ನು ಪರಿಭಾವಿಸಿ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ವಿ. ಕೃಷ್ಣಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ

ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಪಿ.ಆರ್. 2660

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯು ಅಪೆಕ್ಸ್ ಬ್ಯಾಂಕಿನಿಂದ ಸಾಲ ಪಡೆಯಲು ಸರ್ಕಾರದ ಖಾತರಿ ನೀಡುವ ಬಗ್ಗೆ.

ಓದಲಾಗಿದೆ : 1. ದಿನಾಂಕ : 29-04-2010 ರಂದು ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರ ಮನವಿ

2. ಕಬ್ಬು ಅಭಿವೃದ್ಧಿ ಆಯುಕ್ತರು ಮತ್ತು ಸಕ್ಕರೆ ನಿರ್ದೇಶಕರ ದಿನಾಂಕ : 19-05-2010ರ ಡಿಎಸ್‌ಕೆ/ಎಫ್‌ಐಎನ್/13/10-11ನೇ ಸಂಖ್ಯೆಯ ಪತ್ರ.

* * *

ಪ್ರಸ್ತಾವನೆ :

ಬೀದರ್ ಜಿಲ್ಲೆಯ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯು 2010-11ನೇ ಸಾಲಿನಲ್ಲಿ ಕಬ್ಬು ನುರಿಸುವ ಹಂಗಾಮನ್ನು ಪ್ರಾರಂಭಿಸಲು ಯಂತ್ರೋಪಕರಣಗಳ ದುರಸ್ತಿ, ಯಂತ್ರೋಪಕರಣಗಳ ಬಿಡಿ ಭಾಗಗಳ ಖರೀದಿ/ ಬದಲಾವಣೆ, ರೈತರಿಗೆ ಸುಧಾರಿತ ತಳಿಗಳ ಬಿತ್ತನೆ ಬೀಜಗಳನ್ನು ಒದಗಿಸುವುದು, ಇತ್ಯಾದಿ ಪೂರ್ವ ಸಿದ್ಧತಾ ವೆಚ್ಚಗಳನ್ನು ಭರಿಸುವ ಸಲುವಾಗಿ ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನಿಂದ ಕಾರ್ಖಾನೆಯು ರೂ. 30.00 ಕೋಟಿಗಳ ಸಾಲ ಪಡೆಯಲು ಸರ್ಕಾರದ ಖಾತರಿಯನ್ನು ನೀಡುವಂತೆ ಕೋರಿ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರು ದಿನಾಂಕ : 29-04-2010ರಂದು ಸರ್ಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ.

2010-11ನೇ ಸಾಲಿನ ಹಂಗಾಮನ್ನು ಪ್ರಾರಂಭಿಸುವ ಸಲುವಾಗಿ ಕಬ್ಬು ಕಟಾವು ಗ್ಯಾಂಗುಗಳ, ಎತ್ತಿನ ಬಂಡಿಗಳ, ಯಂತ್ರೋಪಕರಣಗಳ ಬಿಡಿ ಭಾಗಗಳ ಖರೀದಿ/ಬದಲಾವಣೆ/ದುರಸ್ತಿ, ಸುಧಾರಿತ ತಳಿಗಳ ಬಿತ್ತನೆ ಬೀಜಗಳನ್ನು ರೈತರಿಗೆ ಪೂರೈಕೆ ಇತ್ಯಾದಿ ಖರ್ಚುಗಳನ್ನು ಭರಿಸುವ ಸಲುವಾಗಿ ಕಾರ್ಖಾನೆಯು ಅಪೆಕ್ಸ್ ಬ್ಯಾಂಕಿನಿಂದ ಸಾಲ ಪಡೆಯಲು ಉದ್ದೇಶಿಸಿರುವುದಾಗಿ ತಿಳಿಸುತ್ತಾ, ಈ ಸಾಲಕ್ಕೆ ಸರ್ಕಾರದ ಖಾತರಿಯನ್ನು ಕೆಲವು ಷರತ್ತುಗಳೊಂದಿಗೆ ನೀಡಬಹುದೆಂದು ಕಬ್ಬು ಅಭಿವೃದ್ಧಿ ಆಯುಕ್ತರು ದಿನಾಂಕ : 19-05-2010ರ ಪತ್ರದ ಮೂಲಕ ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ, 2010-2011ನೇ ಸಾಲಿನಲ್ಲಿ ಕಬ್ಬು ನುರಿಸುವ ಹಂಗಾಮನ್ನು ಪ್ರಾರಂಭಿಸಲು ಅವಶ್ಯವಿರುವ ಪೂರ್ವ ಸಿದ್ಧತಾ ವೆಚ್ಚಗಳನ್ನು ಭರಿಸುವ ಸಲುವಾಗಿ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನಿಂದ ರೂ. 15.00 ಕೋಟಿಗಳ ಸಾಲವನ್ನು ಪಡೆಯಲು ಸರ್ಕಾರದ ಖಾತರಿಯನ್ನು ನೀಡಲು ನಿರ್ಧರಿಸಿ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ :-

ಸರ್ಕಾರದ ಆದೇಶ ಸಂಖ್ಯೆ : ವಾಕೈ 47 ಸಸಕಾ 2010, ಬೆಂಗಳೂರು, ದಿನಾಂಕ : 23 ನೇ ಅಕ್ಟೋಬರ್ 2010

ಪ್ರಸ್ತಾವನೆಯಲ್ಲಿ ವಿವರಣೆಗಳ ಹಿನ್ನೆಲೆಯಲ್ಲಿ, 2010-2011ನೇ ಸಾಲಿನಲ್ಲಿ ಕಬ್ಬು ನುರಿಸುವ ಹಂಗಾಮನ್ನು ಪ್ರಾರಂಭಿಸಲು ಅವಶ್ಯವಿರುವ ಪೂರ್ವ ಸಿದ್ಧತಾ ವೆಚ್ಚಗಳಿಗಾಗಿ ಬೀದರ್ ಜಿಲ್ಲೆಯ ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯು ಕರ್ನಾಟಕ ರಾಜ್ಯ ಸಹಕಾರಿ ಅಪೆಕ್ಸ್ ಬ್ಯಾಂಕಿನಿಂದ ರೂ. 15.00 ಕೋಟಿಗಳ ಸಾಲವನ್ನು ಪಡೆಯಲು ಸರ್ಕಾರದ ಖಾತರಿಯನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನೀಡಲು ಆದೇಶಿಸಲಾಗಿದೆ :-

1. ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯು, 2010-11ನೇ ಸಾಲಿನ ಮಾರಾಟದಿಂದ ಬಂದ ಮೊತ್ತದಿಂದ Sugar Development Fund ಸಾಲ ಮತ್ತು ಅಪೆಕ್ಸ್ ಬ್ಯಾಂಕಿನ ಸಾಲವನ್ನು, ಆದ್ಯತೆಯ ಮೇರೆಗೆ ಮರುಪಾವತಿಸತಕ್ಕದ್ದು ;

2. ಸಾಲವನ್ನು ಮರು ಪಾವತಿ ಮಾಡಿರುವ ಬಗ್ಗೆ ಮತ್ತು ಕಾರ್ಖಾನೆಯ ನಿರ್ವಹಣೆಯ ಬಗ್ಗ ಕಬ್ಬು ಅಭಿವೃದ್ಧಿ ಆಯುಕ್ತರು ಮತ್ತು ಸಕ್ಕರೆ ನಿರ್ದೇಶಕರು ತ್ರೈಮಾಸಿಕ ಸಭೆನಡೆಸಿ ಪರಿಶೀಲಿಸತಕ್ಕದ್ದು ಹಾಗೂ ಕಾರ್ಖಾನೆಯು ಏನಾದರೂ ಸುಸ್ತಿಯಾಗಿದ್ದರೆ (default) ವಿಷಯವನ್ನು ಆಡಳಿತ ಇಲಾಖೆಯ ಹಾಗೂ ಆರ್ಥಿಕ ಇಲಾಖೆಯ ಗಮನಕ್ಕೆ ತರುವುದು ;
3. ರೂ. 15.00 ಕೋಟಿಗಳಿಗೆ ಸರ್ಕಾರವು ನೀಡಿರುವ ಖಾತರಿಗೆ ಕ್ರಮಬದ್ಧವಾಗಿ ಶೇ. 1 ರಷ್ಟು ಖಾತರಿ ದಳ್ಳಾಳಿ (Guarantee Commission) ಯನ್ನು ಬೀದರ್ ಸಹಕಾರಿ ಸಕ್ಕರೆ ಕಾರ್ಖಾನೆಯು ಪಾವತಿಸತಕ್ಕದ್ದು ;
4. ಕಾರ್ಖಾನೆಯನ್ನು, ಕಬ್ಬು ನುರಿಸುವ ಹಂಗಾಮಿನ 2011–12ನೇ ಸಾಲಿನಿಂದ ಸ್ಪರ್ಧಾತ್ಮಕವಾಗಿ ಆಯ್ದೆಯಾಗುವ ಗುತ್ತಿಗೆದಾರರಿಗೆ ದೀರ್ಘಾವಧಿ ಅವಧಿಗೆ ಗುತ್ತಿಗೆಗೆ ನೀಡತಕ್ಕದ್ದು ;
5. ಕಾರ್ಖಾನೆ ರೈತರಿಗೆ ಸುಧಾರಿತ ತಳಿಗಳ ಬಿತ್ತನೆ ಬೀಜ ಪೂರೈಕೆಗೆ ಒದಗಿಸುವ ಸಾಲದ ಮೊತ್ತವನ್ನು ರೈತರು ಕಬ್ಬು ಸರಬರಾಜು ಮಾಡಿದ ಕಬ್ಬಿನ ಬಿಲ್ಲಿನಲ್ಲಿ ವಸೂಲು ಮಾಡಿಕೊಳ್ಳುವುದು ;
6. 250 ಕಬ್ಬು ಕಟಾವು ಗ್ಯಾಂಗುಗಳಿಗೆ ತಲಾ ರೂ. 3.00 ಲಕ್ಷದಂತೆ ರೂ. 750.00 ಲಕ್ಷಗಳು ಹಾಗೂ 800 ಎತ್ತಿನ ಬಂಡಿಗಳಿಗೆ ತಲಾ ರೂ. 25,000/– ದಂತೆ ರೂ. 200.00 ಲಕ್ಷಗಳು ಸೇರಿ ಒಟ್ಟು ರೂ. 950.00 ಲಕ್ಷ ಮುಂಗಡ ನೀಡಲು ಅಂದಾಜಿಸಿದ್ದು, ಅವಶ್ಯಕತೆಗೆ ಅನುಗುಣವಾಗಿ ಸೂಕ್ತ ಭದ್ರತೆ ಪಡೆದುಕೊಂಡು, ಮುಂಗಡ ನೀಡಲು ಹಾಗೂ ರೂ. 950.00 ಲಕ್ಷ ಮುಂಗಡವನ್ನು ಕಬ್ಬಿನ ಬಿಲ್ಲಿನಿಂದ/ ಕಬ್ಬು ಕಟಾವು ಗ್ಯಾಂಗ್‌ನಿಂದ 2010–2011ನೇ ಹಂಗಾಮಿನಿಂದ ಹೊಂದಾಣಿಕೆ ಮಾಡಿಕೊಳ್ಳುವುದು ; ಮತ್ತು
7. ಕಾರ್ಖಾನೆಗೆ ಯಾವುದೇ ರೀತಿಯ ನಷ್ಟವಾಗದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಕಾರ್ಖಾನೆಯ ಆಡಳಿತ ಮಂಡಳಿಗೆ ವಹಿಸುವುದು ;

ಈ ಆದೇಶವನ್ನು ಆರ್ಥಿಕ ಇಲಾಖೆಯು ದಿನಾಂಕ 19–08–2010ರ ಆಇ 305 ವೆಚ್ಚ–2/10ರ ಅನಧಿಕೃತ ಟಿಪ್ಪಣಿ ಮೂಲಕ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಿ. ಶ್ರೀನಿವಾಸ್
ಸರ್ಕಾರದ ಅಧೀನ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸಹಕಾರಿ ಸಕ್ಕರೆ)

ಪಿ.ಆರ್. 2661

ಇಂಧನ ಸಚಿವಾಲಯ

ವಿಷಯ : ಮೆ : ಚಿತ್ರದುರ್ಗ ವಿಂಡ್ ಪವರ್ ಪ್ರೈವೇಟ್ ಲಿಮಿಟೆಡ್ ಇವರ ಪವನ ವಿದ್ಯುತ್ ಯೋಜನೆಗಳ ಅನುಷ್ಠಾನಕ್ಕಾಗಿ ಕಾಲಾವಕಾಶವನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ :
1. ಕಾರಣ ಕೇಳುವ ನೋಟೀಸ್ ಸಂಖ್ಯೆ : ಇಎನ್ 215 ಎನ್‌ಸಿಇ 2010 ದಿನಾಂಕ : 26–04–2010
2. ದಿನಾಂಕ : 03–05–2010ರಂದು ಮೆ : ಚಿತ್ರದುರ್ಗ ವಿಂಡ್ ಪವರ್ ಪ್ರೈವೇಟ್ ಲಿಮಿಟೆಡ್ ಇವರು ನೀಡಿರುವ ಉತ್ತರ.
3. ದಿನಾಂಕ : 07–08–2010ರಂದು ನಡೆದ ನಿರೂಪಣಾ ಸಭೆಯ ನಡವಳಿಗಳು.
4. ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ, ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/08/ಸಿಡಬ್ಲ್ಯುಪಿ – Vol-II /2010/2689 ದಿನಾಂಕ : 04/23–09–2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ನೋಟೀಸಿನಲ್ಲಿ ಮೆ : ಚಿತ್ರದುರ್ಗ ವಿಂಡ್ ಪವರ್ ಪ್ರೈವೇಟ್ ಲಿಮಿಟೆಡ್ ರವರು ಈ ಕೆಳಗೆ ವಿವರಿಸಿರುವ ಪವನ ವಿದ್ಯುತ್ ಯೋಜನೆಗಳನ್ನು ನಿಗಧಿತ ಅವಧಿಯೊಳಗೆ ಅನುಷ್ಠಾನ ಮಾಡಿರುವುದಿಲ್ಲವೆಂದು ಯೋಜನೆಯನ್ನು ಏಕೆ ರದ್ದುಗೊಳಿಸಬಾರದೆಂಬುದಕ್ಕೆ ಕಾರಣವನ್ನು ನೀಡಲು ಕೋರಲಾಗಿತ್ತು :–

Sl. No.	Company Name	Allotment G.O. No. and date	Capacity and location	Capacity Enhancement G.O. No. and date	Total Capacity in MW
1	M/s Chitradurga Wind Power Pvt. Ltd.	No : DE 124 NCE 2002 dated : 5-3-2003	3.00 MW Gadag District, Kappatagudda Area-2	--	3.00
2	M/s Chitradurga Wind Power Pvt. Ltd.	No : DE 124 NCE 2002 dated : 5-3-2003	21.00 MW Davangere District, Harapanahalli village	1. No. EN 31 NCE 2004 dated : 17-12-2004 2. No. EN 369 NCE 2007 dated : 15-10-2007	80.85
3	M/s Chitradurga Wind Power Pvt. Ltd.	No : DE 124 NCE 2002 dated : 5-3-2003	4.00 MW Gadag District, Kappatagudda Area-1	-	4.00

4	M/s Chitradurga Wind Power Pvt. Ltd.	No : DE 124 NCE 2002 dated : 31-5-2002	16.00 MW Chitradurga District, Jogimatti-II Village.	No. EN 31 NCE 2004 dated : 17-12-2004	57.00
5	M/s Chitradurga Wind Power Pvt. Ltd.	No : DE 124 NCE 2002 dated : 5-3-2003	4.00 MW Gadag District, Kappatagudda Area-3	No. EN 31 NCE 2004 dated : 17-12-2004	9.5
6	M/s Chitradurga Wind Power Pvt. Ltd.	No : DE 124 NCE 2002 dated : 5-3-2003	3.00 MW Gadag District, Kappatagudda Area-4	--	3.00
7	M/s Chitradurga Wind Power Pvt. Ltd.	No : DE 124 NCE 2002 dated : 5-3-2003	8.00 MW Gadag District, Kappatagudda Area-5	--	8.00
8	M/s Chitradurga Wind Power Pvt. Ltd.	No : DE 124 NCE 2002 dated : 5-3-2003	2.00 MW Gadag District, Kappatagudda Area-6	--	2.00
9	M/s Chitradurga Wind Power Pvt. Ltd.	No : DE 124 NCE 2002 dated : 5-3-2003	15.00 MW Shimoga District, Tuppadahalli village	1. No. EN 31 NCE 2004 dated : 17-12-2004 2. No. EN 369 NCE 2007 dated : 15-10-2007	57.75
10	M/s Chitradurga Wind Power Pvt. Ltd.	No : DE 124 NCE 2002 dated : 31-5-2002	12.00 MW Chitradurga District, West of Jogimatti village.	--	12.00
11	M/s Chitradurga Wind Power Pvt. Ltd.	No : DE 124 NCE 2002 dated : 31-5-2002	8.00 MW Chitradurga District, Jogimatti-III village.	No. EN 31 NCE 2004 dated : 17-12-2004	57.00
12	M/s Chitradurga Wind Power Pvt. Ltd.	No : DE 124 NCE 2002 dated : 31-5-2002	10.00 MW Chitradurga District, Jogimatti – I village.	--	10.00
				Total	304.1 MW

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿ ಕಾರಣ ಕೇಳುವ ನೋಟೀಸಿಗೆ ಮೆ : ಚಿತ್ರದುರ್ಗ ವಿಂಡ್ ಪವರ್ ಪ್ರೈವೇಟ್ ಲಿಮಿಟೆಡ್ ಇವರು ದಿನಾಂಕ : 03–05–2010 ರ ನೀಡಿರುವ ಉತ್ತರ/ಸಮಜಾಯಿಷಿಯಲ್ಲಿ ಹಂಚಿಕೆಯಾಗಿರುವ ಮೇಲ್ಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದು, ಯೋಜನೆಗಳನ್ನು ಆದಷ್ಟು ಬೇಗ ಅನುಷ್ಠಾನ ಮಾಡುವುದಾಗಿ ತಿಳಿಸಿರುತ್ತಾರೆ.

ಪ್ರಧಾನ ಕಾರ್ಯದರ್ಶಿಯವರ ಮುಂದೆ ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಮಾಡಿರುವ ಸಿದ್ಧತೆಯ ಕುರಿತಾಗಿ ನಿರೂಪಣೆಯನ್ನು ನೀಡುವಂತೆ ಕೋರಿರುವ ಹಿನ್ನೆಲೆಯಲ್ಲಿ ಅಭಿವೃದ್ಧಿದಾರರು ದಿನಾಂಕ : 07–08–2010ರಂದು ನಿರೂಪಣೆಯನ್ನು ನೀಡಿರುತ್ತಾರೆ. ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ನಿರೂಪಣಾ ಸಭೆಯಲ್ಲಿ ಈ ಕೆಳಗಿನಂತೆ ನಿರ್ಣಯವನ್ನು ಕೈಗೊಳ್ಳಲಾಗಿದೆ :–

"ಹಂಚಿಕೆಯಾಗಿರುವ 304.1 ಮೆ. ವ್ಯಾ. ಸಾಮರ್ಥ್ಯದಲ್ಲಿ 262.10 ಮೆ.ವ್ಯಾ. ಸಾಮರ್ಥ್ಯದ ಅನುಷ್ಠಾನಕ್ಕಾಗಿ ಕಾರ್ಯಕ್ರಮಗಳು ಪ್ರಗತಿಯಲ್ಲಿದ್ದು, ಆದಷ್ಟು ಬೇಗ ಅನುಷ್ಠಾನ ಮಾಡಲು ಕ್ರಮ ಕೈಗೊಳ್ಳಲಾಗುವುದೆಂದು ಅಭಿವೃದ್ಧಿದಾರರು ನಿರೂಪಣೆ ನೀಡಿರುತ್ತಾರೆ. ಈ ಬಗ್ಗೆ ಹೆಚ್ಚಿನ ಮಾಹಿತಿ/ದಾಖಲಾತಿಗಳನ್ನು ನೀಡುವಂತೆ ಅಭಿವೃದ್ಧಿದಾರರಿಗೆ ತಿಳಿಸಲಾಯಿತು ಹಾಗೂ ಅಧ್ಯರ್ಪಿಸಲಾಗಿದೆ ಎಂದು ಹೇಳಲಾಗಿರುವ ಎಲ್ಲಾ ಸಾಮರ್ಥ್ಯಕ್ಕೆ ಪ್ರತ್ಯೇಕ ಪ್ರಸ್ತಾವನೆಯನ್ನು ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರು ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದೆಂದು ಸಭೆಯಲ್ಲಿ ನಿರ್ಣಯಿಸಲಾಯಿತು".

ಮೇಲಿನ ನಿರ್ಣಯದ ಹಿನ್ನೆಲೆಯಲ್ಲಿ ಕ್ರೆಡಲ್‌ನ ವ್ಯವಸ್ಥಾಪಕ ನಿರ್ದೇಶಕರು ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಪತ್ರದಲ್ಲಿ ಪ್ರಸ್ತಾವನೆಯನ್ನು ಕಳುಹಿಸಿ ಮೆ ; ಚಿತ್ರದುರ್ಗ ವಿಂಡ್ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ದಿನಾಂಕ : 06–07–2010 ರಿಂದ ಮುಂದಿನ ಒಂದು ವರ್ಷದವರೆಗೆ ಯೋಜನೆಯ ಅನುಷ್ಠಾನಕ್ಕೆ ಕಾಲಾವಕಾಶ ವಿಸ್ತರಿಸಲು ಶುಲ್ಕ ವಸೂಲಿ ಮಾಡಲಾಗುವುದೆಂದು ತಿಳಿಸಿ ಇವರಿಗೆ ನೀಡಲಾಗಿರುವ ಕಾರಣ ಕೇಳುವ ನೋಟೀಸನ್ನು ಕೈಬಿಟ್ಟು, ಯೋಜನೆಯ ಅನುಷ್ಠಾನಕ್ಕೆ ಅನುವು ಮಾಡಿಕೊಡಬೇಕೆಂದು ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ವಿವರಿಸಿರುವ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಲಾಗಿದೆ :–

ಸರ್ಕಾರಿ ಆದೇಶ ಸಂಖ್ಯೆ : ಇಎನ್ 215 ಎನ್‌ಸಿಇ 2010, ಬೆಂಗಳೂರು, ದಿನಾಂಕ : 21 ನೇ ಅಕ್ಟೋಬರ್ 2010

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿದ ಸಂದರ್ಭದಲ್ಲಿ, ಮೆ : ಚಿತ್ರದುರ್ಗ ವಿಂಡ್ ಪವರ್ ಪ್ರೈವೇಟ್ ಲಿಮಿಟೆಡ್ ರವರು ಯೋಜನೆಯ ಅನುಷ್ಠಾನದ ನಿಟ್ಟಿನಲ್ಲಿ ಸಾಧಿಸಿರುವ ಪ್ರಗತಿಯನ್ನು ಗಣನೆಗೆ ತೆಗೆದುಕೊಂಡು ಈ ಪವನ ವಿದ್ಯುತ್ ಯೋಜನೆಗಳನ್ನು ಅನುಷ್ಠಾನಗೊಳಿಸಲು ದಿನಾಂಕ : 06–07–2010ರಿಂದ ಅನ್ವಯವಾಗುವಂತೆ ಮುಂದಿನ ಒಂದು ವರ್ಷದವರೆಗೆ ಕಾಲಾವಧಿಯನ್ನು ವಿಸ್ತರಿಸಲಾಗಿದೆ.

ಈ ಆದೇಶವನ್ನು ರದ್ದುಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸುರೇಶ್ ಬಿ. ಕೃಷ್ಣಪ್ಪನವರ್

ಸರ್ಕಾರದ ಅಧೀನ ಕಾರ್ಯದರ್ಶಿ

ಇಂಧನ ಇಲಾಖೆ

ಪಿ.ಆರ್. 2662

ENERGY SECRETARIAT

Sub: Udupi Power Corporation Limited (UPCL) – Augmentation of capacity from 1015 MW to 1200 MW and Supplementary Power Purchase Agreement.

Read: 1. G.O.No. EN 15 PPC 2005 dated : 18-06-2010

Preamble:

The Government of Karnataka had accorded approval to M/s. Nagarjuna Power Corporation Limited (NPCL) [now M/s. lUdupi Power Corporation Limited (UPCL) to establish a 1015 MW Coal based Thermal Power Plant in Nandikur village, Udupi District.

2. The Capital cost of Rs. 4299.12 crores for a capacity of 1015 MW was approved in principle by the Central Electricity Regulatory Commission (CERC) in petition No. 40/2005, vide its order dated : 25-10-2005, The Power Purchase Agreement (PPA) with M/s. Nagarjuna Power Corporation Limited (NPCL) was signed on 26-12-2005 with Central Electricity Regulatory Commission approved project cost of Rs. 4299.12 crores. The Karnataka Electricity Regulatory Commission is yet to approve the PPA entered into between the five ESCOMS and the UPCL. The Udupi Power Corporation Limited (UPCL) is the Successor to the NPCL.

3. In view of the acute power crisis in the State and the need to augment power generation, the State Government accorded in principle approval on 03-02-2009 to increase the project size from 1015 MW to 1500 MW, with certain stipulations. As against this, the UPCL obtained a clearance from the Ministry of Environment and Forest (MOEF) on 09-09-2009 for 1200 MW (2x600 MW).

4. Pursuant to the increase in capacity from 1015 MW to 1200 MW, UPCL have filed several requests with the Power Company of Karnataka Limited (PCKL) for :

i. Amendments to the Power Purchase Agreement (PPA).

ii. Increase in capital cost for the original capacity of 1015 MW amounting to Rs. 744.91 Crores.

iii. Addition to capital cost for enhanced capacity of 185 MW (i.e., from 1015 MW to 1200 MW) amounting to Rs. 681.30 Crores.

iv. In all, the total increase sought by M/s. UPCL is Rs. 1426.21 Crores over the CERC approved cost of Rs. 4299.12 Crores.

5. These requests were examined in detail by the Committee constituted by the Board of Directors of the PCKL. Following several rounds of discussions, the Managing Director, Karnataka Power Transmission Corporation Limited (KPTCL) has made recommendations vide D.O. Letter No. PCKL/A1/12/05-06 dated : 18-11-2009 on the above issues.

6. The report of the Managing Director, KPTCL was examined in detail in the Government. Subsequent to this, the State Government constituted an Official Committee vide GO No. EN 15 PPC 2005 dated : 01-01-2010 and 18-01-2010 under the Chairmanship of the Additional Chief Secretary, Energy Department and consisting of Secretary to Government (B&R), Finance Department ; Secretary, Law Department; Managing Director, KPCL or his nominee ; Managing Director, KPTCL and Managing Director, BESCOM to examine the requests of the UPCL.

7. The Official Committee after examination submitted a detailed report to the Government on 27-01-2010. As against the cost increase of Rs. 1426.21 crores claimed by UPCL, the Official Committee endorsed a net addition Rs. 131.68 crores for the total capacity of 1200 MW.

8. However M/s. UPCL again represented to the Hon'ble Chief Minister in their letter of 31-03-2010. for re-examination of the issue of enhancement of capital cost from Rs. 4299.12 crores (as capped by CERC) to Rs. 5726.00 crores. The Government was requested to look into the corresponding clauses in the PPA that put a restriction on interest charges and a cap on capital cost due to interest payments.

9. On this representation of M/s. UPCL, and in view of the difference in assessment between the recommendations of the official Committee and the stand of M/s. UPCL, Government constituted a Committee vide Government Order Read at (1) above with the following members :

i) Hon'ble Justice Sri R. Gururajan, Retired Judge, High Court of Karnataka - Chairman
ii) Smt. Bharati Rao, Retd. Deputy Managing Director State Bank of India - Member
iii) Sri. R. Krishnamurthy, Former Chairman, PFC and Former Member, CERC - Member

10. The said Committee has submitted its report to Government on 23-09-2010. The conclusion and answer to the terms of reference of the Committee are as under :

References	Findings
(i) To Examine the request of UPCL for enhancement of capital cost of Rs. 744.91 Crores from the CERC approved cap of Rs. 4299.12 Crores for 1015MW.	After examination of the request of UPCL for enhancement of capital cost of Rs. 744.91 crores from the CERC approved cap of Rs. 4299.12 crores a sum of Rs. 244.25 crores excluding IDC is granted.
(ii) To examine the request of UPCL for increase in capital cost due to enhancement of capacity from 1015 MW to 1200 MW, relating to Rs. 681.30 crores.	After examination of the request of UPCL relating to the claim of Rs. 681.30 crores a sum of Rs. 339.60 crores excluding IDC is granted due to enhancement of capacity from 1015 MW to 1200 MW.
(iii) To propose appropriate amendments to the PPAs based on the Independent Committee's determination of issues relating to b (i) & b (ii).	Amendments are suggested vide paragraph 202 above as per the reference.

11. Under the provisions of the Electricity Act. 2003, the Central Electricity Regulatory Commission (CERC) is the competent authority to determine tariffs on the basis of the filings made by M/s. UPCL CERC is the best forum to examine and determine the request for enhancement of capital cost and tariff determination. Subsequent to the approval of capital cost and tariff by CERC, the PPA between ESCOMS and M/s. UPCL has to be approved by Karnataka Electricity Regulatory Comission (KERC).

12. Government has examined the conclusions of the three members independent committee constituted vide Government Order Read at (1) above and hence this order.

Government Order No. EN 15 PPC 2005, Bangalore, Dated: 25th October 2010

Government is pleased to accord approval for the following :

a) To enhance the capacity of Udupi Power Project from 1015 MW to 1200 MW.

b) To accept the recommendation of the Justice Sri R. Gururajan Committee allowing an increase in the Capital Cost to the extent of Rs. 583.00 Crores as detailed at para No. 10 of preamble excluding IDC, subject to the final orders of the Central Electricity Regulatory Commission.

c) M/s. Udupi Power Corporation Limited has to file necessary particulars regarding Capital Cost increase and Tariff along with relevant documents, with the Central Electricity Regulatory Commission Immediately.

By Order and in the name of the Governor of Karnataka

SURESH B. KRISHNAPPANAVAR
Under Secretary to Government,
Energy Department.

P.R. No. 2663

ನಗರಾಭಿವೃದ್ಧಿ ಸಚಿವಾಲಯ

ವಿಷಯ : ರಾಮದುರ್ಗ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆಗೆ (ಪ–1) ಅನುಮೋದನೆ ನೀಡುವ ಕುರಿತು.

ಓದಲಾಗಿದೆ : (1) ಸರ್ಕಾರಿ ಆದೇಶ ಸಂಖ್ಯೆ: ನಅಇ/256/ಬೆಮಪ್ರ/2008 ದಿನಾಂಕ 14–10–2008.

(2) ರಾಮದುರ್ಗಪುರಸಭೆ ಯೋಜನಾ ಪ್ರಾಧಿಕಾರದ ಪತ್ರ ಸಂಖ್ಯೆ:ಯೋಪ್ರಾಮುಸರಾ/ಮಯೋಪ –1(ಅಂ)/2009–10/1583, ದಿನಾಂಕ: 27–3–2010

(3) ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿಯ ಏಕ ಕಡತ ಸಂಖ್ಯೆ:ನಯೋ(7) ಉನಿ(ಯೋವಿ)/ರಾಮದುರ್ಗ/ಮಯೋ/ಪ–1/ಅಂತಿಮ/10ರಲ್ಲಿ ನೀಡಿರುವ ಅಭಿಪ್ರಾಯ ದಿನಾಂಕ: 21–04–2010.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಸರ್ಕಾರಿ ಆದೇಶದಲ್ಲಿ ರಾಮದುರ್ಗ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ ಮಹಾ ಯೋಜನೆ (ಪ–1)ಗೆ ತಾತ್ಕಾಲಿಕ ಅನುಮೋದನೆ ನೀಡಲಾಗಿದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ರಾಮದುರ್ಗ ಪುರಸಭೆ ಯೋಜನಾ ಪ್ರಾಧಿಕಾರವು ರಾಮದುರ್ಗ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಮಹಾಯೋಜನೆ (ಪ–1) ಕುರಿತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(1)ರನ್ವಯ ಅಗತ್ಯ ಕ್ರಮ ಜರುಗಿಸಿ ಮಹಾ ಯೋಜನೆ ನಕ್ಷೆಗಳನ್ನು ಹಾಗೂ ವರದಿಯನ್ನು ತಯಾರಿಸಿ ಸರ್ಕಾರದ ಅಂತಿಮ ಅನುಮೋದನೆಗೆ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (3)ರ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿಯ ಕಡತದಲ್ಲಿ ರಾಮದುರ್ಗ ಪಟ್ಟಣದ ಜನಸಂಖ್ಯೆಯು 2021ನೇ ಇಸವಿಗೆ 45,000 ಗಳಷ್ಟು ಬೆಳವಣಿಗೆಯಾಗುವುದಾಗಿ ಅಂದಾಜಿಸಿ ಮಹಾ ಯೋಜನೆ (ಪ–1)ಯನ್ನು ತಯಾರಿಸಲಾಗಿದೆ. ರಾಮದುರ್ಗ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶದ 270 ಹೆಕ್ಟೇರ್ ಪ್ರದೇಶದಲ್ಲಿ 270 ಹೆಕ್ಟೇರ್ ಪೂರ್ಣ ಪ್ರದೇಶವನ್ನು ನಗರೀಕರಣದ ಎಲ್ಲೆಯೆಂದು ಪ್ರಸ್ತಾಪಿಸಿ ಯೋಜನೆಯನ್ನು ರೂಪಿಸಲಾಗಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 12 ರಲ್ಲಿನ ಅಂಶಗಳನ್ನು ಪರಿಗಣಿಸಿ ಪಟ್ಟಣದ ಮುಂದಿನ ಯೋಜಿತ ಬೆಳವಣಿಗೆಗಳಿಗಾಗಿ ಪ್ರಸ್ತಾಪಿಸಿರುವ 270 ಹೆಕ್ಟೇರ್ ಪ್ರದೇಶದಲ್ಲಿ ವಸತಿಗಾಗಿ 122.91 ಹೆಕ್ಟೇರ್ (ಶೇ. 45.52), ವಾಣಿಜ್ಯಕ್ಕಾಗಿ 16.10 ಹೆಕ್ಟೇರ್ (ಶೇ.5.96), ಕೈಗಾರಿಕೆಗಾಗಿ 17.53 ಹೆಕ್ಟೇರ್ (ಶೇ.6.49), ಸಾರ್ವಜನಿಕ/ಅರೆ ಸಾರ್ವಜನಿಕ ಉಪಯೋಗಕ್ಕೆ 19.84 ಹೆಕ್ಟೇರ್ (7.35), ಉದ್ಯಾನವನ ಮತ್ತು ಬಯಲು ಜಾಗಗಳಿಗೆ 23.03 ಹೆಕ್ಟೇರ್ (ಶೇ.8.52), ನಾಗರೀಕ ಸೌಲಭ್ಯಕ್ಕಾಗಿ 0.28 ಹೆಕ್ಟೇರ್ (ಶೇ.0.10) ಹಾಗೂ ಸಾರಿಗೆ/ಸಂಪರ್ಕ ವಲಯಕ್ಕೆ 70.31 ಹೆಕ್ಟೇರ್ (ಶೇ.26.05) ಪ್ರದೇಶವನ್ನು ನಿಗದಿಪಡಿಸಲಾಗಿದೆ. ಮಹಾ ಯೋಜನೆ (ಪ–1)ಯನ್ನು ಅನುಷ್ಠಾನಕ್ಕೆ ತರಲು ಅಗತ್ಯವಿರುವ ವಲಯ ನಿಯಮಾವಳಿಗಳನ್ನು ರೂಪಿಸಲಾಗಿದ್ದು, ಸದರಿ ಮಹಾಯೋಜನೆ (ಪ–1)ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 13(3)ರನ್ವಯ ಅಂತಿಮ ಅನುಮೋದನೆ ನೀಡಲು ಶಿಫಾರಸ್ಸು ಮಾಡಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 141 ಬೆಮಪ್ರಾ 2010 ದಿನಾಂಕ 22–09–2010

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಮದುರ್ಗ ಪಟ್ಟಣದ ಸ್ಥಳೀಯ ಯೋಜನಾ ಪ್ರದೇಶಕ್ಕೆ ರೂಪಿಸಿರುವ ಮಹಾ ಯೋಜನೆ (ಪ–1)ಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 13(3)ರನ್ವಯ ಸರ್ಕಾರವು ಅಂತಿಮ ಅನುಮೋದನೆಯನ್ನು ನೀಡಲಾಗಿದೆ. ಮಹಾ ಯೋಜನೆ (ಪ–1)ಗೆ ಅಂತಿಮ ಅನುಮೋದನೆ ನೀಡಿದ ಗುರುತಾಗಿ ವರದಿ ಹಾಗೂ ನಕ್ಷೆಗಳ ಮೇಲೆ ಸರ್ಕಾರದ ಮುದ್ರೆಯನ್ನು ಹಾಕಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ.ಎಂ. ಹಿರೇಮಠ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ರಾಮದುರ್ಗ ಪಟ್ಟಣದ ಮಹಾಯೋಜನೆ (ಪ–1) ಅಂತಿಮ ಅಂಕಿ ಅಂಶಗಳ ಸ್ಥೂಲ ನೋಟ

ಕ್ರ ಸಂ.	ಪರಿಶೀಲಿಸಬೇಕಾದ ವಿವರಗಳು	ವಿವರಣೆ
1	ಸ್ಥಳೀಯ ಯೋಜನಾ ಪ್ರದೇಶವನ್ನು ಸರ್ಕಾರವು ಘೋಷಿಸಿರುವ ವಿವರಗಳು	ಆದೇಶ ಸಂಖ್ಯೆ:ಯುಡಿಡಿ145:ಎಂಐಬಿ: 98 ದಿ: 27.05.1998.
2	ಸ್ಥಳೀಯ ಯೋಜನಾ ಪ್ರದೇಶದ ವಿಸ್ತೀರ್ಣ	270 ಹೆಕ್ಟೇರ್
3	ಕೆ.ಟಿ.ಸಿ.ಪಿ. ಕಾಯ್ದೆಯಡಿಯಲ್ಲಿ ಕಲಂ 10 ರಂತೆ ಕ್ರಮ	ಕರ್ನಾಟಕ ರಾಜ್ಯ ಪತ್ರದಲ್ಲಿ ದಿ: 21.12.2006 ರಂದು ಪ್ರಕಟಿಸಿದೆ.
4	ಕೆ.ಟಿ.ಸಿ.ಪಿ. ಕಾಯ್ದೆಯಡಿಯಲ್ಲಿ ಕಲಂ 13(1) ರಂತೆ ಕ್ರಮ	ಕರ್ನಾಟಕ ರಾಜ್ಯ ಪತ್ರದಲ್ಲಿ ದಿ: 16.7.2009 ರಂದು ಪ್ರಕಟಿಸಿದೆ.
5	2001 ಜನಗಣತಿಯಂತೆ ಸದರಿ ಪಟ್ಟಣದ ಜನಸಂಖ್ಯೆ:	31,830
6	2021ಕ್ಕೆ ಪ್ರಸ್ತಾಪಿಸಲಾದ ಜನಸಂಖ್ಯೆ	45000
7	ಪ್ರತಿ ಹೆಕ್ಟೇರಿಗೆ ಪರಿಗಣಿಸಲಾದ ಜನಸಾಂದ್ರತೆ	167 ಪಿಪಿಹೆಚ್
8	ಅಭಿವೃದ್ಧಿ ಹೊಂದಿರುವ ಒಟ್ಟು ಪ್ರದೇಶ	155 ಹೆಕ್ಟೇರ್
9	ನಗರೀಕರಣ ಎಲ್ಲೆಯೆಂದು ಪ್ರಸ್ತಾಪಿಸಲಾದ ಒಟ್ಟು ವಿಸ್ತೀರ್ಣ	270 ಹೆಕ್ಟೇರ್
10	ಸರ್ಕಾರದಿಂದ ಮಹಾ ಯೋಜನೆಗೆ ತಾತ್ಕಾಲಿಕ ಅನುಮೋದನೆಗೊಂಡಿರುವ ಬಗ್ಗೆ ವಿವರಗಳು	ಸಂಖ್ಯೆ:ನಅಇ 204 ಬೆಂರೂಪ್ರಾ 2002, ದಿ: 21.10.2002.
11	ವರದಿಯಲ್ಲಿ ಈ ಕೆಳಕಂಡ ಅಂಶಗಳ ಬಗ್ಗೆ ಮಾಹಿತಿಯನ್ನು ಅಳವಡಿಸಲಾಗಿದೆ. ಅ) ಘನ ತ್ಯಾಜ್ಯ ವಸ್ತುಗಳ ನಿವೇಶನ ಗುರ್ತಿಸುವ ಕುರಿತು. (Solid waste management and Sewage treatment plant)	ಇಲ್ಲ
	ಆ) ಭೂಕಂಪದ ಕುರಿತು. (Safety measure against earth quake)	

	ಇ) ಅಂಗವಿಕರಿಗೆ ಸೌಲಭ್ಯಗಳನ್ನು ಒದಗಿಸುವ ಕುರಿತು. (Facility for physically Handicapped)	ಅಳವಡಿಸಿದೆ
	ಈ) ಮಳೆ ನೀರು ಸಂಗ್ರಹಣೆ ಕುರಿತು. (Rain water Harvesting)	ಅಳವಡಿಸಿದೆ
	ಉ) ಸೂರ್ಯಕಿರಣಗಳಿಂದ ನೀರು ಕಾಯಿಸುವ ಕುರಿತು. (Solar water Heater)	ಅಳವಡಿಸಿದೆ
	ಊ) ಏಕ ನಿವೇಶನದ ನಿಯಮಾವಳಿಗಳನ್ನು ಅಳವಡಿಸಿದೆ	ಅಳವಡಿಸಿದೆ
	ಋ) ಐ.ಡಿ.ಎಸ್.ಎಂ.ಟಿ. ಯ ಯೋಜನೆಯ ವಿವರಗಳು	–

12 ಭೂ ಬಳಕೆ ವಿವರಗಳು (ನಕ್ಷೆಗಳನ್ನು ಲಗತ್ತಿಸಿದೆ)					
ಕ್ರ.ಸಂ.	ಭೂ ಉಪಯೋಗ	ಹಾಲಿ ಭೂ ಬಳಕೆ 2007 (ಹೆಕ್ಟೇರ್‌ಗಳಲ್ಲಿ)		ಉದ್ದೇಶಿತ ಭೂ ಬಳಕೆ–2021 (ಹೆಕ್ಟೇರ್‌ಗಳಲ್ಲಿ)	
		ವಿಸ್ತೀರ್ಣ (ಹೆ)	ಶೇಕಡ	ವಿಸ್ತೀರ್ಣ (ಹೆ)	ಶೇಕಡ
1	ವಸತಿ	72.80	46.98	122.91	45.52
2	ವಾಣಿಜ್ಯ	11.85	7.65	16.10	5.96
3	ಕೈಗಾರಿಕಾ	217	1.40	17.53	6.49
4	ಸಾರ್ವಜನಿಕ/ಅರೆ ಸಾರ್ವಜನಿಕ	15.45	9.96	19.84	7.35
5	ಉದ್ಯಾನವನ/ಆಟದ ಮೈದಾನ/ಬಯಲು ಪ್ರದೇಶ	6.85	4.42	23.03	8.52
6	ನಾಗರೀಕ ಸೌಲಭ್ಯ	0.28	0.18	0.28	0.10
7	ಸಾರಿಗೆ ಮತ್ತು ಸಂಚಾರ	45.58	29.41	70.31	26.05
	ಒಟ್ಟು	**154.98**	**100.00**	**270.00**	**100.00**
8	ಖಾಲಿ ಜಾಗ	–	–	–	–
9	ಜಲಾವೃತ್ತ ಪ್ರದೇಶ	–	–	–	–
10	ವ್ಯವಸಾಯದ ಜಮೀನು	–	–	–	–
	ಒಟ್ಟು	**154.98**	**100.00**	**270.00**	**100.00**

ನಅಇ 141 ಬೆಮಪ್ರಾ 2010

ಎಂ.ಎಂ. ಹಿರೇಮಠ
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ

ಪಿ.ಆರ್. 2273

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : 2010–11ನೇ ಸಾಲಿಗೆ ಕೆಬಿಟ್ಸ್ ಸಂಸ್ಥೆಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ:
1) ಸರ್ಕಾರಿ ಆದೇಶ ಸಂಖ್ಯೆ: ಮಾತಂಇ 35 ಆಡವಿ 2010ದಿ: 15–04–10.
2) ಸರ್ಕಾರಿ ಆದೇಶ ಸಂಖ್ಯೆ: ಮಾತಂಇ 54 ಆಡವಿ 2010(2)ದಿ: 7–5–2010.
3) ಸರ್ಕಾರಿ ಆದೇಶ ಸಂಖ್ಯೆ: ಮಾತಂಇ 54 ಆಡವಿ 2010 ದಿ: 15–07–2010.
4) ಸರ್ಕಾರಿ ಆದೇಶ ಸಂಖ್ಯೆ: ಮಾತಂಇ 54 ಆಡವಿ 2010 ದಿ: 11–08–2010.
5) ಅಪರ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಸೇವೆಗಳು ಇವರ ಪತ್ರ ಸಂಖ್ಯೆ : ಕೆಬಿಟ್ಸ್/ಎಸಿಟಿ/23/2009–10 ದಿನಾಂಕ 23.9.2010

ಪ್ರಸ್ತಾವನೆ:

2010–11ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ "3451–00–090–2–01 ಮಾಹಿತಿ ತಂತ್ರಜ್ಞಾನ ಉನ್ನತೀಕರಣ ಮತ್ತು ಅಭಿವೃದ್ಧಿ 059 ಇತರೆ ಖರ್ಚು [ಯೋಜನೆ]" ರಡಿಯಲ್ಲಿ ರೂ. 1000.00 ಲಕ್ಷಗಳ ಅನುದಾನವನ್ನು ಒದಗಣೆ ಮಾಡಲಾಗಿದೆ. ಅದರಲ್ಲಿ ಬೆಂಗಳೂರು ಐಟಿ–ಬಿಜ್ 2010 ಮತ್ತು ಬೆಂಗಳೂರು ಬಯೋ 2010 ಈವೆಂಟ್‌ಗಳು ಸೇರಿದಂತೆ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಉನ್ನತೀಕರಣ ಚಟುವಟಿಕೆಗಳಿಗಾಗಿ ರೂ. 300.00 ಲಕ್ಷಗಳನ್ನು ಮೇಲೆ [1] ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಹಂಚಿಕೆ ಮಾಡಲಾಗಿದೆ.

ಮೇಲೆ (2), (3) ಮತ್ತು (4)ರಲ್ಲಿ ಓದಲಾದ ದಿನಾಂಕ 07–05–2010, 15–07–2010 ಮತ್ತು 11–08–2010ರ ಸರ್ಕಾರಿ ಆದೇಶಗಳಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಉನ್ನತೀಕರಣ ಚಟುವಟಿಕೆಗಳಿಗಾಗಿ ಅನುಕ್ರಮವಾಗಿ ರೂ. 75.00 ಲಕ್ಷ, ರೂ. 100.00 ಲಕ್ಷ ಮತ್ತು ರೂ. 100.00 ಲಕ್ಷ ಹೀಗೆ ಒಟ್ಟು ರೂ. 275.00 ಲಕ್ಷಗಳ ಅನುದಾನವನ್ನು 2010–11ನೇ ಸಾಲಿನಲ್ಲಿ ಕರ್ನಾಟಕ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಸೇವೆಗಳು [ಕೆಬಿಟ್ಸ್] ಸಂಸ್ಥೆಗೆ ಬಿಡುಗಡೆ ಮಾಡಲಾಗಿದೆ.

ಅಪರ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಸೇವೆಗಳು ಇವರು ಮೇಲೆ (4) ರಲ್ಲಿ ಓದಲಾದ ಪತ್ರದಲ್ಲಿ 2010–11ನೇ ಸಾಲಿನ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಉನ್ನತೀಕರಣ ಚಟುವಟಿಕೆಗೆ ಸಂಬಂಧಿಸಿದಂತೆ ಸೆಪ್ಟೆಂಬರ್ 2010ರಿಂದ ಮಾರ್ಚ್ 2011ರ ವರೆಗೆ ಹಮ್ಮಿಕೊಳ್ಳುವ ಕಾರ್ಯಕ್ರಮಗಳ ವಸ್ತು ಪ್ರದರ್ಶನದ ಜಾಹೀರಾತುಗಳ ಬಿಡುಗಡೆ ಹಾಗೂ ಬ್ರೋಚರ್/ಸಿಡಿಗಳ ತಯಾರಿಕೆ ವೆಚ್ಚಗಳನ್ನು, ಅಕ್ಟೋಬರ್ 28–30, 2010ರ ವರೆಗೆ ನಡೆಯಲಿರುವ ಬೆಂಗಳೂರು ಐಟಿ–ಬಿಜ್ ಕಾರ್ಯಕ್ರಮದ ಸಲುವಾಗಿ ರೂ. 45.00 ಲಕ್ಷಗಳನ್ನು ಬಿಡುಗಡೆ ಮಾಡಬೇಕಾಗಿರುತ್ತದೆಂದು ತಿಳಿಸುತ್ತಾ, ಸದರಿ ವೆಚ್ಚಗಳನ್ನು ಭರಿಸಲು ರೂ. 100.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ರೂ.50.00 ಲಕ್ಷಗಳ ಅನುದಾನವನ್ನು ಕೆಬಿಟ್ಸ್ ಸಂಸ್ಥೆಗೆ ಬಿಡುಗಡೆ ಮಾಡಲು ನಿರ್ಧರಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಮಾತಂಇ 54 ಅಡವಿ 2010, ಬೆಂಗಳೂರು, ದಿನಾಂಕ: 25–10–2010.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸೆಪ್ಟೆಂಬರ್ 2010ರಿಂದ ಮಾರ್ಚ್ 2011ರವರೆಗೆ ಹಮ್ಮಿಕೊಳ್ಳುವ ಕಾರ್ಯಕ್ರಮಗಳ ವಸ್ತು ಪ್ರದರ್ಶನದ ಜಾಹೀರಾತುಗಳ ಬಿಡುಗಡೆ ಹಾಗೂ ಬ್ರೋಚರ್/ಸಿಡಿಗಳ ತಯಾರಿಕೆ ವೆಚ್ಚಗಳನ್ನು, ಹಾಗೂ ಅಕ್ಟೋಬರ್ 28–30, 2010ರವರೆಗೆ ನಡೆಯಲಿರುವ ಬೆಂಗಳೂರು ಐಟಿ–ಬಿಜ್ ಕಾರ್ಯಕ್ರಮಗಳ ಉದ್ದೇಶಕ್ಕಾಗಿ ರೂ. 50.00 ಲಕ್ಷಗಳನ್ನು (ರೂ. ಐವತ್ತು ಲಕ್ಷಗಳು ಮಾತ್ರ) ಕೆಬಿಟ್ಸ್ ಸಂಸ್ಥೆಗೆ ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರ ಮೂಲಕ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಿದೆ.

ಸದರಿ ಅನುದಾನವನ್ನು ಆಡಳಿತಾಧಿಕಾರಿಗಳು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರು ನಿರ್ದೇಶಕರು ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ ಇವರ ಮೇಲು ಸಹಿ ಪಡೆದು ಖಜಾನೆಯಿಂದ ಸದರಿ ಅನುದಾನವನ್ನು ಡ್ರಾ ಮಾಡಿ ವಿತರಿಸತಕ್ಕದ್ದು.

ಈ ವೆಚ್ಚವನ್ನು 2010–11ನೇ ಸಾಲಿನಲ್ಲಿ ಲೆಕ್ಕಶೀರ್ಷಿಕೆ "3451–00–090–2–01 ಮಾಹಿತಿ ತಂತ್ರಜ್ಞಾನದ ಉನ್ನತೀಕರಣ ಮತ್ತು ಅಭಿವೃದ್ಧಿ–059–ಇತರೆ ವೆಚ್ಚ (ಯೋಜನೆ)' ಇದರ ಅಡಿಯಲ್ಲಿ ಪ್ರಸಕ್ತ ಸಾಲಿನಲ್ಲಿ ಒದಗಿಸಿರುವ ರೂ. 10.00 ಕೋಟಿ ಅನುದಾನದಲ್ಲಿ ಲಭ್ಯವಿರುವ ಮೊತ್ತದಿಂದ ಭರಿಸತಕ್ಕದ್ದು.

ನಿರ್ದೇಶಕರು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ, ಇವರು ಅನುದಾನದ ಬಳಕೆಯ ಬಗ್ಗೆ ಕರ್ನಾಟಕ ಜೈವಿಕ ತಂತ್ರಜ್ಞಾನ ಮತ್ತು ಮಾಹಿತಿ ತಂತ್ರಜ್ಞಾನ ಸೇವೆಗಳು [ಕೆಬಿಟ್ಸ್] ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಿಂದ ಉಪಯೋಗಿತಾ ದೃಢೀಕರಣ ಪತ್ರವನ್ನು ವೆಚ್ಚ ಮಾಡಿದ ಅನುದಾನದ ವಿವರಗಳ ಜೊತೆಗೆ ಪಡೆದು ಈ ಆರ್ಥಿಕ ವರ್ಷದೊಳಗಾಗಿ ಸರ್ಕಾರಕ್ಕೆ ಒದಗಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 381 ವೆಚ್ಚ–2/10 ದಿನಾಂಕ: 21–10–2010ರಲ್ಲಿನ ಸಹಮತಿಯ ಮೇರೆಗೆ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಂ.ವಿ. ಕೃಷ್ಣಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

ಪಿ.ಆರ್ 2674

ENERGY SECRETARIAT

Sub : Udupi Power Corporation Limited (UPCL)- Augmentation of capacity from 1015 MW to 1200 MW and Supplementary Power Purchase Agreement.

Read : G.O. No.EN 15 PPC 2005 dated 18.06.2010

PREAMBLE:

The Government of Karnataka had accorded approval to M/s. Nagarjuna Power Corporation Limited (NPCL) [now M/s. Udupi Power Corporation Limited (UPCL)] to establish a 1015 MW Coal based Thermal Power Plant in Nandikur village, Udupi District.

2. The capital cost of Rs. 4299.12 crores for a capacity of 1015 MW was approved in principle by the Central Electricity Regulatory Commission (CERC) in petition No.40/2005, vide its order dated 25.10.2005. The Power Purchase Agreement(PPA) with M/s. Nagarjuna Power Corporation Limited (NPCL) was signed on 26.12.2005 with Central Electricity Regulatory Commission approved project cost of Rs.4299.12 crores. The Karnataka Electricity Regulatory Commission is yet to approve the PPA entered into between the five ESCOMs and the UPCL.The Udupi Power Corporation Limited (UPCL) is the Successor to the NPCL.

3.In view of the acute power crisis in the State and the need to augment power generation, the State Government accorded in principle approval on 03.02.2009 to increase the project size from1015 MW to 1500 MW, with certain stipulations. As against this, the UPCL obtained a clearance from the Ministry of Environment and Forest (MOEF) on 09.09.2009 for 1200 MW (2X 600 MW).

4. Pursuant to the increase in capacity from 1015 MW to 1200 MW, UPCL have filed several requests with the Power Company of Karnataka Limited (PCKL) for :

i. Amendments to the Power Purchase Agreement (PPA).

ii. Increase in capital cost for the original capacity of 1015 MW amounting to Rs. 744.91 Crores.

iii. Addition to capital cost for enhanced capacity of 185 MW (i.e., from 1015 MW to 1200 MW) amounting to Rs.681.30 Crores.

iv. In all the total increase sought by M/s.UPCL is Rs. 1426.21 Crores over the CERC approved cost of Rs.4299.12 Crores.

5. These requests were examined in detail by the Committee constituted by the Board of Directors of the PCKL. Following several rounds of discussions,the Managing Director, Karnataka Power Transmission Corporation limited(KPTCL) has made recommendations vide D.O letter No. PCKL/ A1/12/ 05-06 dated 18.11.2009 on the above issues.

6. The report of the Managing Director, KPTCL was examined in detail in the Government. Subsequent to this, the State Government constituted an Official Committee vide GO No. EN 15 PPC 2005 dated 01.01.2010 and 18.01.2010 under the Chairmanship of the Additional Chief Secretary, Energy Department and consisting of Secretary to Government (B&R), Finance Department; Secretary, Law Department; Managing Director, KPCL or his nominee; Managing Director, KPTCL and Managing Director, BESCOM to examine the requests of the UPCL.

7. The Official Committee after examination submitted a detailed report to the Government on 27.01.2010. As against the cost increase of Rs. 1426.21crores claimed by UPCL, the Official Committee endorsed a net addition Rs.131.68 crores for the total capacity of 1200 MW.

8. However M/s.UPCL again represented to the Hon'ble Chief Minister in their letter of 31.03.2010 for re-examination of the issue of enhancement of capital cost from Rs. 4299.12 crores (as capped by CERC) to Rs. 5726.00 crores. The Government was requested to look into the corresponding clauses in the PPA that put a restriction on interest charges and a cap on capital cost due to interest payments.

9. On this representation of M/s. UPCL, and in view of the difference in assessment between the recommendations of the Official Committee and the stand of M/s.UPCL, Government constituted a Committee vide Government Order read at (1) above with the following members:

i) Hon'ble Justice Sri. R. Gururajan,
Retired Judge, High Court of Karnataka. - Chairman

ii) Smt. Bharati Rao,
Retd.Deputy Managing Director,
State Bank of India - Member

iii) Sri. R. Krishnamurthy,
Former Chairman, PFC
And Former Member, CERC - Member

10. The said Committee has submitted its report to Government on 23.09.2010. The conclusion and answer to the terms of reference of the Committee are as under:

References	Findings
(i) To Examine the request of UPCL for enhancement of capital cost of Rs. 744.91 Crores from the CERC approved cap of Rs.4299.12Crores for 1015 MW.	After examination of the request of UPCL for enhancement of capital cost of Rs. 744.91 crores from the CERC approved cap of Rs. 4299.12 crores a sum of Rs. 244.25 crores excluding IDC is granted.
(ii) To examine the request of UPCL for increase in capital cost due to enhancement of capacity from 1015 MW to 1200 MW, relating to Rs.681.30 crores.	After examination of the request of UPCL relating to the claim of Rs. 681.30 Crores a sum of Rs.339.60 crores excluding IDC is granted due to enhancement of capacity from 1015 MW to 1200 MW.
(iii) To propose appropriate amendments to the PPAs based on the Independent Committee's determination of issues relating to b(i) & b(ii)	Amendments are suggested vide paragraph 202 above as per the reference.

11. Under the provisions of the Electricity Act 2003, the Central Electricity Regulatory Commission (CERC) is the competent authority to determine tariffs on the basis of the filings made by M/s. UPCL.CERC is the best forum to examine and determine the request for enhancement of capital cost and tariff determination.Subsequent to the approval of capital cost and tariff by CERC, the PPA between ESCOMs and M/s.UPCL has to be approved by Karnataka Electricity Regulatory Commission (KERC).

12. Government has examined the conclusions of the three members independent committee constituted vide Government Order Read at (1) above and hence this order:

GOVERNMENT ORDER No. EN 15 PPC 2005, BANGALORE DATED 25TH OCTOBER 2010

Government is pleased to accord approval for the following:

a) To enhance the capacity of Udupi Power Project from1015 MW to1200MW

b) To accept the recommendation of the Justice Sri R.Gururajan Committee allowing an increase in the Capital Cost to the extent of Rs.583.00 Crores as detailed at para No. 10 of preamble excluding IDC, subject to the final orders of the Central Electricity Regulatory Commission.

c) M/s. Udupi Power Corporation Limited has to file necessary particulars regarding Capital Cost increase and Tariff along with relevant documents, with the Central Electricity Regulatory Commission immediately.

By Order and in the name of the Governor of Karnataka

SURESH B. KRISHNAPPANAVAR

Under secretary to Government

Energy Department

P.R. 2677

ಸಹಕಾರ ಸಚಿವಾಲಯ

ವಿಷಯ : ರಾಜ್ಯದ ಸ್ವಸಹಾಯ ಗುಂಪುಗಳಿಗೆ ಪತ್ತಿನ ಸಹಕಾರಿ ಸಂಸ್ಥೆಗಳ ಮೂಲಕ ಶೇಕಡಾ 4ರ ಬಡ್ಡಿ ದರದಲ್ಲಿ ಸಾಲ ನೀಡುವ ಬಗ್ಗೆ.

ಓದಲಾಗಿದೆ:
1) ಸರ್ಕಾರಿ ಆದೇಶ ಸಂಖ್ಯೆ : ಸಿಒ 68 ಸಿಎಲ್ಎಸ್ 2007 ದಿನಾಂಕ: 02.06.2007.
2) ಸರ್ಕಾರಿ ಆದೇಶ ಸಂಖ್ಯೆ : ಸಿಒ 68 ಸಿಎಲ್ಎಸ್ 2007 ದಿನಾಂಕ: 23.01.2008.
3) ಸರ್ಕಾರಿ ಆದೇಶ ಸಂಖ್ಯೆ : ಸಿಒ 68 ಸಿಎಲ್ಎಸ್ 2007 ದಿನಾಂಕ: 27.03.2008.
4) ಸರ್ಕಾರಿ ಆದೇಶ ಸಂಖ್ಯೆ : ಸಿಒ 68 ಸಿಎಲ್ಎಸ್ 2007 ದಿನಾಂಕ: 05.09.2008.
5) ಸರ್ಕಾರಿ ಆದೇಶ ಸಂಖ್ಯೆ : ಸಿಒ 68 ಸಿಎಲ್ಎಸ್ 2007 ದಿನಾಂಕ: 25.02.2009.
6) ಸರ್ಕಾರಿ ಆದೇಶ ಸಂಖ್ಯೆ : ಸಿಒ 68 ಸಿಎಲ್ಎಸ್ 2007 ದಿನಾಂಕ: 19.03.2009.
7) ಸರ್ಕಾರಿ ಆದೇಶ ಸಂಖ್ಯೆ : ಸಿಒ 68 ಸಿಎಲ್ಎಸ್ 2007 ದಿನಾಂಕ: 25.06.2009.
8) ಸರ್ಕಾರಿ ಆದೇಶ ಸಂಖ್ಯೆ : ಸಿಒ 68 ಸಿಎಲ್ಎಸ್ 2007 ದಿನಾಂಕ: 21.08.2009.
9) ಸರ್ಕಾರಿ ಆದೇಶ ಸಂಖ್ಯೆ : ಸಿಒ 68 ಸಿಎಲ್ಎಸ್ 2007 ದಿನಾಂಕ: 14.12.2009.
10) ಸಹಕಾರ ಸಂಘಗಳ ನಿಬಂಧಕರ ಪತ್ರಸಂಖ್ಯೆ: ಸಿಆರ್‌ಡಿ/ ಕೆಎಂಇ–8/40/2007–08 ದಿನಾಂಕ: 03.03.2010.
11) ಸಹಕಾರ ಸಂಘಗಳ ನಿಬಂಧಕರ ಪತ್ರಸಂಖ್ಯೆ: ಸಿಆರ್‌ಡಿ/ಕೆಎಂಇ–8/40/2010–11 ದಿನಾಂಕ: 30.08.2010.

ಪ್ರಸ್ತಾವನೆ:

ಮೇಲೆ ಓದಲಾದ (1) ಮತ್ತು (2) ರ ಆದೇಶಗಳಲ್ಲಿ ಸಹಕಾರ ಕೃಷಿ ಪತ್ತಿನ ಸಂಸ್ಥೆಗಳು ರಾಜ್ಯದ ಸ್ವಸಹಾಯ ಗುಂಪುಗಳಿಗೆ ಶೇಕಡಾ 4ರ ಬಡ್ಡಿ ದರದಲ್ಲಿ ಸಾಲಗಳನ್ನು ಕೆಲವು ಷರತ್ತುಗಳಿಗೊಳಪಟ್ಟು ಒದಗಿಸಲು ಮಂಜೂರಾತಿ ನೀಡಲಾಗಿರುತ್ತದೆ. ಮೇಲೆ ಓದಲಾದ (3)ರ ಆದೇಶದಲ್ಲಿ 2007–08ನೇ ಸಾಲಿನಲ್ಲಿ ಸಹಕಾರ ಕೃಷಿ ಪತ್ತಿನ ಸಂಸ್ಥೆಗಳು ರಾಜ್ಯದ ಸ್ವಸಹಾಯ ಗುಂಪುಗಳಿಗೆ ಶೇಕಡಾ 4ರ ಬಡ್ಡಿ ದರದಲ್ಲಿ ಸಾಲಗಳನ್ನು ಒದಗಿಸಲು ಅನುವಾಗುವಂತೆ ಬಡ್ಡಿ ಸಹಾಯಧನದ ಬಾಬ್ತು ರೂ.2.64 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಮೇಲೆ ಓದಲಾದ (4)ರ ಆದೇಶದಲ್ಲಿ 2007–08ನೇ ಸಾಲಿನಲ್ಲಿ ಸಹಕಾರ ಕೃಷಿ ಪತ್ತಿನ ಸಂಸ್ಥೆಗಳು ರಾಜ್ಯದ ಸ್ವಸಹಾಯ ಗುಂಪುಗಳಿಗೆ ಶೇಕಡಾ 4ರ ಬಡ್ಡಿ ದರದಲ್ಲಿ ಸಾಲಗಳನ್ನು ಒದಗಿಸಿದ ಬಾಬ್ತು ಬಡ್ಡಿ ಸಹಾಯಧನದ ಮೊತ್ತ ರೂ. 510.89 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಮೇಲೆ ಓದಲಾದ (5) ರ ಆದೇಶದಲ್ಲಿ 2007–08ನೇ ಸಾಲಿನಲ್ಲಿ ಸಹಕಾರ ಕೃಷಿ ಪತ್ತಿನ ಸಂಸ್ಥೆಗಳು ರಾಜ್ಯದ ಸ್ವಸಹಾಯ ಗುಂಪುಗಳಿಗೆ ಶೇಕಡಾ 4ರ ಬಡ್ಡಿ ದರದಲ್ಲಿ ಸಾಲಗಳನ್ನು ಒದಗಿಸಿದ ಬಾಬ್ತು ಬಡ್ಡಿ ಸಹಾಯಧನದ ಮೊತ್ತ ರೂ. 289.11 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಮೇಲೆ ಓದಲಾದ (6)ರ ಆದೇಶದಲ್ಲಿ ಸಹಕಾರ ಕೃಷಿ ಪತ್ತಿನ ಸಂಸ್ಥೆಗಳು ರಾಜ್ಯದ ಸ್ವಸಹಾಯ ಗುಂಪುಗಳಿಗೆ ಶೇಕಡಾ 4ರ ಬಡ್ಡಿ ದರದಲ್ಲಿ ಸಾಲಗಳನ್ನು ಒದಗಿಸಿದ ಬಾಬ್ತು 2007–08ನೇ ಸಾಲಿಗೆ ಬಡ್ತಿ ಸಹಾಯಧನದ ಮೊತ್ತ ರೂ.273.71 ಲಕ್ಷಗಳು ಹಾಗೂ 2008–09ನೇ ಸಾಲಿಗೆ ಬಡ್ಡಿ ಸಹಾಯಧನದ ಮೊತ್ತ ರೂ.0.29 ಲಕ್ಷಗಳು ಒಟ್ಟು ರೂ.274.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಮೇಲೆ ಓದಲಾದ (7) ರ ಆದೇಶದಲ್ಲಿ ಸಹಕಾರ ಕೃಷಿ ಪತ್ತಿನ ಸಂಸ್ಥೆಗಳು ರಾಜ್ಯದ ಸ್ವಸಹಾಯ ಗುಂಪುಗಳಿಗೆ ಶೇಕಡಾ 4ರ ಬಡ್ಡಿ ದರದಲ್ಲಿ ಸಾಲಗಳನ್ನು ಒದಗಿಸಿದ ಬಾಬ್ತು 2007–08ನೇ ಸಾಲಿಗೆ ಸಂಬಂಧಪಟ್ಟಂತೆ ಬಡ್ಡಿ ಸಹಾಯಧನದ ಮೊತ್ತ ರೂ. 1.43 ಲಕ್ಷಗಳು ಹಾಗೂ 2008–09 ನೇ ಸಾಲಿಗೆ ಸಂಬಂಧಪಟ್ಟಂತೆ ಬಡ್ಡಿ ಸಹಾಯಧನದ ಮೊತ್ತ ರೂ.198.57 ಲಕ್ಷಗಳು ಒಟ್ಟು ರೂ. 200.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಮೇಲೆ ಓದಲಾದ (8) ರ ಆದೇಶದಲ್ಲಿ ಸಹಕಾರ ಕೃಷಿ ಪತ್ತಿನ ಸಂಸ್ಥೆಗಳು ರಾಜ್ಯದ ಸ್ವಸಹಾಯ ಗುಂಪುಗಳಿಗೆ ಶೇಕಡಾ 4ರ ಬಡ್ಡಿ ದರದಲ್ಲಿ ಸಾಲಗಳನ್ನು ಒದಗಿಸಿದ ಬಾಬ್ತು 2008–09 ನೇ ಸಾಲಿಗೆ ಸಂಬಂಧಪಟ್ಟಂತೆ ಬಡ್ಡಿ ಸಹಾಯಧನದ ಮೊತ್ತ ರೂ. 200.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಮೇಲೆ ಓದಲಾದ (9) ರ ಆದೇಶದಲ್ಲಿ ಸಹಕಾರ ಕೃಷಿ ಪತ್ತಿನ ಸಂಸ್ಥೆಗಳು ರಾಜ್ಯದ ಸ್ವಸಹಾಯ ಗುಂಪುಗಳಿಗೆ ಶೇಕಡಾ 4ರ ಬಡ್ಡಿ ದರದಲ್ಲಿ ಸಾಲಗಳನ್ನು ಒದಗಿಸಿದ ಬಾಬ್ತು ಬಡ್ಡಿ ಸಹಾಯಧನದ ಮೊತ್ತ ರೂ. 200.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಹಾಗೂ ಅಪೆಕ್ಸ್ ಬ್ಯಾಂಕಿನ ಅಮಾನತ್ ಖಾತೆಯಲ್ಲಿದ್ದ ರೂ.6.40 ಲಕ್ಷಗಳನ್ನು ಉಪಯೋಗಿಸಿಕೊಳ್ಳಲು ಅನುಮತಿ ನೀಡಲಾಗಿದೆ. ಮೇಲೆ ಓದಲಾದ (10) ಮತ್ತು (11) ರ ಪತ್ರಗಳಲ್ಲಿ ಸಹಕಾರ ಸಂಘಗಳ ನಿಬಂಧಕರು 2008–09ನೇ ಸಾಲಿಗೆ ರೂ. 1217.49 ಲಕ್ಷಗಳ ಸಹಾಯಧನ ಕ್ಲೇಮು ಪರಿಗಣಿಸಲು ಬಾಕಿ ಇದ್ದು ಸದರಿ ಯೋಜನೆಯಡಿ ರೂ.1400.00 ಲಕ್ಷಗಳನ್ನು ಬಿಡುಗಡೆ ಮಾಡುವಂತೆ ಕೋರಿರುತ್ತಾರೆ. ಸದರಿ ಕೋರಿಕೆಯನ್ನು ಪರಿಗಣಿಸಿ ರೂ. 300.00 ಲಕ್ಷಗಳನ್ನು ಬಿಡುಗಡೆ ಮಾಡಲು ತೀರ್ಮಾನಿಸಲಾಗಿರುತ್ತದೆ.

ಆದುದರಿಂದ ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಒ 68 ಸಿಎಲ್ಎಸ್ 2007, ಬೆಂಗಳೂರು, ದಿನಾಂಕ: 29.09.2010

ಮೇಲೆ ವಿವರಿಸಲಾದ ಪರಿಸ್ಥಿತಿಯಲ್ಲಿ 2008–09 ನೇ ಸಾಲಿನಲ್ಲಿ ಸಹಕಾರ ಕೃಷಿ ಪತ್ತಿನ ಸಂಸ್ಥೆಗಳು ರಾಜ್ಯದ ಸ್ವಸಹಾಯ ಗುಂಪುಗಳಿಗೆ ಶೇಕಡಾ 4ರ ಬಡ್ಡಿ ದರದಲ್ಲಿ ಸಾಲಗಳನ್ನು ಒದಗಿಸಿದ ಬಾಬ್ತು ಬಡ್ಡಿ ಸಹಾಯಧನದ ಮೊತ್ತ ರೂ. 300.00 ಲಕ್ಷಗಳನ್ನು ಲೆಕ್ಕಶೀರ್ಷಿಕೆ "2425–00–

107–2–45 ಸ್ವಸಹಾಯ ವರ್ಗಗಳಿಗೆ ಸಾಲಗಳ ಮೇಲಣ ಬಡ್ಡಿ ಧನಸಹಾಯ–106–ಸಹಾಯಧನ (ಯೋಜನೆ)" ಅಡಿ ಈ ಕೆಳಕಂಡ ಷರತ್ತಿಗೊಳಪಟ್ಟು ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

"The Administrative Department should verify that the claims are as per scheme guidelines and linked to repayment upto the date or actual date of repayment, whichever is earlier."

ಈ ಹಣವನ್ನು ಸಹಕಾರ ಸಂಘಗಳ ಜಂಟಿ ನಿಬಂಧಕರು (ಪತ್ತು), ಸಹಕಾರ ಸಂಘಗಳ ನಿಬಂಧಕರ ಕಛೇರಿ, ಬೆಂಗಳೂರು ಇವರು ಹಣ ಸಂದಾಯ ರಸೀದಿಯ ಮೂಲಕ ಸಹಕಾರ ಸಂಘಗಳ ನಿಬಂಧಕರ ಮೇಲು ಸಹಿ ಪಡೆದು ಖಜಾನೆಯಿಂದ ಪಡೆಯತಕ್ಕದ್ದು. ಸಹಕಾರ ಸಂಘಗಳ ನಿಬಂಧಕರು ಸದರಿ ಹಣವನ್ನು ಸಂಬಂಧಪಟ್ಟ ಸಂಸ್ಥೆಗಳಿಗೆ ಬಿಡುಗಡೆ ಮಾಡಿ ಉಪಯೋಗ ಪ್ರಮಾಣಪತ್ರಗಳನ್ನು ಸಲ್ಲಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್ ಡಿ 339 ವೆಚ್ಚ–2/2010 ದಿನಾಂಕ: 13.09.2010ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್ 2678

ಆರ್.ಎಸ್.ನೂಲಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಸಹಕಾರ ಇಲಾಖೆ.

ಜಲಸಂಪನ್ಮೂಲ ಸಚಿವಾಲಯ

ವಿಷಯ : ಜಲಕಾಯಗಳ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನ ಮಾಡಲು ರಾಜ್ಯ ಯೋಜನೆಯಡಿಯಲ್ಲಿ ಅನುಮೋದನೆಯಾಗಿರುವ ಸಣ್ಣ ನೀರಾವರಿ ಕಾಮಗಾರಿಗಳ ಅಂದಾಜುಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ: 1) ಭಾರತ ಸರ್ಕಾರದ ಆದೇಶ ಸಂಖ್ಯೆ : 7/1/2009–ಡಬ್ಲ್ಯೂ.ಬಿ ದಿನಾಂಕ: 02/03/2009.

2) ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿನಾಂಕ: 17/05/2010ರ ಪತ್ರ ಸಂಖ್ಯೆ: ಮುಸದ/ತಾಂ.ಸ.–1ಸ.ಇಂ–1/2009–10/1723.

ಪ್ರಸ್ತಾವನೆ:

ವ್ಯವಸಾಯಕ್ಕೆ ನೇರವಾಗಿ ಸಂಬಂಧಿಸಿದ ಜಲಕಾಯಗಳ ದುರಸ್ತಿ, ಜೀರ್ಣೋದ್ಧಾರ ಮತ್ತು ಪುನರುಜ್ಜೀವನಗೊಳಿಸುವ ಯೋಜನೆಯನ್ನು ರಾಷ್ಟ್ರಾದ್ಯಂತ ಅನ್ವಯವಾಗುವಂತೆ ಮೇಲೆ (1)ರಲ್ಲಿ ಓದಲಾದ ದಿನಾಂಕ:02/03/2009ರ ಭಾರತ ಸರ್ಕಾರದ ಆದೇಶದಲ್ಲಿ ಅನುಮೋದನೆ ನೀಡಿ, ಈ ಯೋಜನೆಯನ್ನು "Scheme of Repair, Renovation and Restoration of Water Bodies with Domestic Support" ಎಂದು ಅನುಷ್ಠಾನಗೊಳಿಸಲು ಮಂಜೂರಾತಿ ನೀಡಲಾಗಿದೆ.

ಈ ಕಾರ್ಯಕ್ರಮದಡಿ ಅನುಮೋದನೆಗಾಗಿ ರಾಜ್ಯ ಸರ್ಕಾರವು ಸಲ್ಲಿಸಿದ್ದ ಪ್ರಸ್ತಾವನೆಗಳ ಪೈಕಿ ಸಣ್ಣ ನೀರಾವರಿ ಇಲಾಖೆಗೆ ಸಂಬಂಧಿಸಿದ ರೂ. 237.53 ಕೋಟಿ ಅಂದಾಜು ಮೊತ್ತದ 375 ಕಾಮಗಾರಿಗಳನ್ನು ಕೈಗೊಳ್ಳಲು ಭಾರತ ಸರ್ಕಾರವು ಪತ್ರ ಸಂಖ್ಯೆ: F.No 41(3) PF-1/2009-807 ದಿನಾಂಕ: 30/03/2010ರಲ್ಲಿ ಅನುಮೋದನೆಯನ್ನು ನೀಡಿ ರೂ. 74.04 ಕೋಟಿ ಮೊತ್ತವನ್ನು ಬಿಡುಗಡೆ ಮಾಡಿರುತ್ತದೆ.

ಈ ಯೋಜನೆಯ ಅನುಷ್ಠಾನಕ್ಕಾಗಿ 2010–2011ನೇ ಸಾಲಿನ ಆಯವ್ಯಯದಲ್ಲಿ **ಲೆಕ್ಕ ಶೀರ್ಷಿಕೆ "4702–00–101–1–09–132 ಕೃಷಿಗೆ ನೇರವಾಗಿ ಸಂಬಂಧಿಸಿದ ನೀರಾವರಿ ಯೋಜನೆಗಳ ದುರಸ್ತಿ, ನವೀಕರಣ ಹಾಗೂ ಪುನರುಜ್ಜೀವನ"** ರಡಿ ರೂ. 5652.65 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.

ಈ ಯೋಜನೆಯಡಿ ಅನುಮೋದನೆಗೊಂಡಿರುವ 375 ಕಾಮಗಾರಿಗಳ ಪೈಕಿ ಈ ಕೆಳಕಂಡ ಮೂರು ಕಾಮಗಾರಿಗಳು ಸೇರಿವೆ.

ಕ್ರ. ಸಂ	ಕಾಮಗಾರಿ ಹೆಸರು	**ವಿನ್ಯಾಸಿತ ಅಚ್ಚುಕಟ್ಟು (ಹೆಕ್ಟೇರ್ ಗಳಲ್ಲಿ)**	**ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)**
1	ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕು ಪೊಕ್ಕುರ್ತಿ ಕೆರೆ ಅಭಿವೃದ್ಧಿ	1704	852.00
2	ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು ಅಯ್ಯನ ಕೆರೆ ಅಭಿವೃದ್ಧಿ	1574	1100.00
3	ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು ಹೊಸ ಮದಗದ ಕೆರೆ ಅಭಿವೃದ್ಧಿ	1582	965.00
ಒಟ್ಟು		**4860**	**2917.00**

ಮೇಲ್ಕಂಡ ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮುಖ್ಯ ಇಂಜಿನಿಯರ್. ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರು ಮೇಲೆ (2)ರಲ್ಲಿ ಓದಲಾದ ದಿನಾಂಕ:17/05/2010ರ ಪತ್ರದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮುಖ್ಯ ಇಂಜಿನಿಯರ್ ರವರ ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 26 ಕೆಜಿದು 2010 ಬೆಂಗಳೂರು, ದಿನಾಂಕ:23/10/2010

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ವ್ಯಾಪ್ತಿಯಲ್ಲಿ ಬರುವ ಪ್ರಸ್ತಾವನೆಯಲ್ಲಿ ತಿಳಿಸಿರುವ 1) ಚಿತ್ರದುರ್ಗ ಜಿಲ್ಲೆ ಮೊಳಕಾಲ್ಮೂರು ತಾಲ್ಲೂಕು ಪೊಕ್ಕುರ್ತಿ ಕೆರೆ ಅಭಿವೃದ್ಧಿ ಕಾಮಗಾರಿಯ ರೂ.852.00 (ಎಂಟುನೂರ ಐವತ್ತೆರಡು ಲಕ್ಷ ರೂಪಾಯಿಗಳು ಮಾತ್ರ). 2) ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು ಅಯ್ಯನ ಕೆರೆ ಅಭಿವೃದ್ಧಿ ಕಾಮಗಾರಿಯ ರೂ.1100.00 (ಒಂದು ಸಾವಿರದ ನೂರು ಲಕ್ಷ ರೂಪಾಯಿಗಳು ಮಾತ್ರ). ಮತ್ತು 3) ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು ಹೊಸ ಮದಗದ ಕೆರೆ ಅಭಿವೃದ್ಧಿ ಕಾಮಗಾರಿಯ ರೂ. 965.00 (ಒಂಬೈನೂರ ಅರವತ್ತೈದು ಲಕ್ಷ ರೂಪಾಯಿಗಳು ಮಾತ್ರ) ಗಳ ಅಂದಾಜುಗಳಿಗೆ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದೆ.

1) ಯೋಜನೆಯನ್ನು ಮಾರ್ಗಸೂಚಿಯಲ್ಲಿ ಭಾರತ ಸರ್ಕಾರವು ತಿಳಿಸಿರುವ ನಿಬಂಧನೆಗಳಂತೆ ಅನುಷ್ಠಾನಗೊಳಿಸತಕ್ಕದ್ದು.
2) ಕಾಮಗಾರಿಯ ವೆಚ್ಚವು ಯಾವುದೇ ಕಾರಣಕ್ಕೂ ಅನುಮೋದಿಸಿದ ಟೆಂಡರ್ ಮೊತ್ತಕ್ಕಿಂತ ಹೆಚ್ಚಾಗಬಾರದು ಹಾಗೂ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸತಕ್ಕದ್ದು.
3) ಒಂದು ವೇಳೆ ಸ್ಥಳ ಪರಿಸ್ಥಿತಿಗೆ ಅನುಗುಣವಾಗಿ ಹೆಚ್ಚಳ ನಿರೀಕ್ಷಿಸಿದಲ್ಲಿ ತಕ್ಷಣವೇ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು.
4) ಕಾಮಗಾರಿ ಪ್ರಾರಂಭಿಸುವ ಮುನ್ನ ವಿನ್ಯಾಸ ಬದಲಾವಣೆಯಿಂದಾಗಿ ಅಥವಾ ಬೇರೆ ಕಾರಣದಿಂದ ಅನುಮೋದಿಸಿದ ಅಂದಾಜು ಮೊತ್ತ ಹೆಚ್ಚಾಗುವ ಸಂಭವ ಇದ್ದಲ್ಲಿ, ತಕ್ಷಣ ಪರಿಷ್ಕೃತ ಅಂದಾಜಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಂತರ ಕಾಮಗಾರಿಯನ್ನು ಪ್ರಾರಂಭಿಸುವುದು.
5) ಕಾಮಗಾರಿಯ ಅಂದಾಜು ಪಟ್ಟಿಗೆ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿ/ ತಾಂತ್ರಿಕ ಸಮಿತಿಯ ತೀರುವಳಿ ಪಡೆಯುವುದು.
6) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಅನುಸಾರ ಟೆಂಡರ್ ಕರೆದು ತೆಗೆದುಕೊಳ್ಳತಕ್ಕದ್ದು.
7) ಕಾಮಗಾರಿ ಪೂರ್ಣಗೊಂಡ ಕೂಡಲೇ ಪಿ.ಸಿ.ಆರ್ ವರದಿಯನ್ನು ಸಲ್ಲಿಸತಕ್ಕದ್ದು ಹಾಗೂ ಅವಶ್ಯಕತೆ ಇದ್ದಲ್ಲಿ ಪರಿಷ್ಕೃತ ಅಂದಾಜು ತಯಾರಿಸಿ ಟಿ.ಸಿ.ಎ ಅನುಮೋದನೆ ಪಡೆದು ಸಂಬಂಧಿಸಿದ ಸಕ್ಷಮ ಅಧಿಕಾರಿಗಳಿಗೆ ಅನುಮೋದನೆಗಾಗಿ ಸಲ್ಲಿಸುವುದು.
8) ಕಾಮಗಾರಿಗೆ ಅಗತ್ಯವಿರುವ ಜಮೀನಿನ ಸ್ವಾಧೀನಕ್ಕಾಗಿ ನಿಯಮಾನುಸಾರ ತಕ್ಷಣ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು ಕ್ರಮ ಕೈಗೊಳ್ಳತಕ್ಕದ್ದು.
9) ಇ.ಐ.ಆರ್.ಎಲ್/ವರ್ಕ್‌ಸ್ಲಿಪ್‌ಗಳನ್ನು ಸಲ್ಲಿಸಬೇಕಾದಲ್ಲಿ ತಕ್ಷಣವೇ ಸಲ್ಲಿಸತಕ್ಕದ್ದು.
10) ತಾಂತ್ರಿಕ ಮಂಜೂರಾತಿಯನ್ನು ನೀಡುವ ಮೊದಲು ಅಂದಾಜನ್ನು ಮತ್ತೊಮ್ಮೆ ವಿವರವಾಗಿ ಪರಿಶೀಲಿಸುವುದು.
11) ಈ ಯೋಜನೆಗಳಿಗೆ ನೀರು ಬಳಕೆದಾರರ ಸಂಘವನ್ನು ಸೃಜಿಸಬೇಕು ಹಾಗೂ ನಿರ್ವಹಣೆಯನ್ನು ಸದರಿ ಸಂಘಕ್ಕೆ ವಹಿಸತಕ್ಕದ್ದು.
12) ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಬ್ಲ್ಯೂಡಿ 535 ಎಫ್ ಸಿ-1/10 ದಿನಾಂಕ: 23/07/2010 ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪಿ.ಆರ್ 2679

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ
ಜಲ ಸಂಪನ್ಮೂಲ ಇಲಾಖೆ. (ಸಣ್ಣ ನೀರಾವರಿ)

ಸಹಕಾರ ಸಚಿವಾಲಯ

ವಿಷಯ : ಕರ್ನಾಟಕ ರಾಜ್ಯ ಸಹಕಾರಿ ಗ್ರಾಹಕರ ಮಹಾಮಂಡಳಿ ನಿಯಮಿತ, ಬೆಂಗಳೂರು, ಇದಕ್ಕೆ ವಿವಿಧ ಕಾರ್ಯ ಚಟುವಟಿಕೆಗಳಿಗಾಗಿ 2010-11ನೇ ಸಾಲಿನಲ್ಲಿ ರೂ. 49.00 ಲಕ್ಷಗಳ ಸಹಾಯಧನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1. ಸರ್ಕಾರಿ ಆದೇಶ ಸಂಖ್ಯೆ: ಸಇ 63 ಸಂಮಾಸ 2010 ದಿನಾಂಕ: 14-07-2010.
2. ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ರವರ ಪತ್ರ ಸಂಖ್ಯೆ: ಬಳಕೆ/ NCF/127/2010-11 ದಿನಾಂಕ: 04-08-2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ: (1) ದಿನಾಂಕ 14-07-2010 ರಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಗ್ರಾಹಕರ ಮಹಾ ಮಂಡಳ ನಿ., ಬೆಂಗಳೂರು ಈ ಸಂಸ್ಥೆಗೆ 2010-11ನೇ ಸಾಲಿನ ಆಯವ್ಯಯದಲ್ಲಿ ಹೊಸ ಯೋಜನೆಯಡಿ ಅವಕಾಶ ಕಲ್ಪಿಸಿರುವ ರೂ. 49.00 ಲಕ್ಷ ಮಂಜೂರು ಮಾಡಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (2)ರ ಪತ್ರ ದಿನಾಂಕ 04-08-2010ರ ಪತ್ರದಲ್ಲಿ ದಿನಾಂಕ: 14-07-2010ರ ಸರ್ಕಾರಿ ಆದೇಶದ ಕಡೆ ಉಲ್ಲೇಖಿಸುತ್ತಾ ಈ ಬಗ್ಗೆ ದಿನಾಂಕ: 22-06-2010 ರಂದು ಸರ್ಕಾರದ ಹಂತದಲ್ಲಿ ಸಭೆ ನಡೆದಿದ್ದು, ಸಭೆಯ ನಿರ್ಣಯದ ಮೇರೆಗೆ ಆದೇಶ ಹೊರಡಿಸಲಾಗಿದೆ. ಆದ್ದರಿಂದ ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ಗ್ರಾಹಕರ ಮಹಾ ಮಂಡಳಕ್ಕೆ ರೂ. 49.00 ಲಕ್ಷಗಳ ಧನ ಸಹಾಯವನ್ನು ಮಂಜೂರು ಮಾಡುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಸರ್ಕಾರ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸಇ 141 ಸಂಮಾಸ 2010, ಬೆಂಗಳೂರು, ದಿನಾಂಕ : 27ನೇ ಸೆಪ್ಟೆಂಬರ್ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸಹಕಾರಿ ಗ್ರಾಹಕರ ಮಹಾ ಮಂಡಳ ನಿಯಮಿತ, ಬೆಂಗಳೂರು, ಇದಕ್ಕೆ 2010–11ನೇ ಸಾಲಿನಲ್ಲಿ ಕಾರ್ಯ ಚಟುವಟಿಕೆಗಳಿಗಾಗಿ ಇದೊಂದು ಬಾರಿ ಮಾತ್ರ ರೂ.49.00 ಲಕ್ಷ (ರೂಪಾಯಿ ನಲತ್ತೊಂಭತ್ತು ಲಕ್ಷ ಮಾತ್ರ) ಗಳನ್ನು ಧನಸಹಾಯವನ್ನು ಲೆಕ್ಕ ಶೀರ್ಷಿಕೆ "24.25–00–107–2–50–100" (ಯೋಜನೆ) ಅಡಿ ಬಿಡುಗಡೆ ಮಾಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: FD 345 Exp–2/2010 ದಿನಾಂಕ: 17–09–2010ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಆರ್.ಎಸ್. ನೂಲಿ
ವಿಶೇಷ ಕರ್ತವ್ಯಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ

ಪಿ. ಆರ್. 2680

ಇಂಧನ ಸಚಿವಾಲಯ

ವಿಷಯ : ಮೆ॥ ಸೌತ್ ವೆಸ್ಟ್ ಹೈಡ್ರೊ ಪವರ್ ಪ್ರೈವೇಟ್ ಲಿಮಿಟೆಡ್ ಇವರ 6.5 ಮೆಗಾ ವ್ಯಾಟ್ ಗೋನಾಲ್–III ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 5.00 ಮೆಗಾ ವ್ಯಾಟ್‌ಗೆ ಸೀಮಿತಗೊಳಿಸುವ ಬಗ್ಗೆ.

ಓದಲಾಗಿದೆ :
1) ಸರ್ಕಾರಿ ಆದೇಶ ಸಂಖ್ಯೆ : ಇಂಇ 277 ಎನ್‌ಸಿಇ 2005, ದಿನಾಂಕ 14–10–2005
2) ಸರ್ಕಾರಿ ಆದೇಶ ಸಂಖ್ಯೆ : ಇಎನ್ 114 ಎನ್‌ಸಿಇ 2007, ದಿನಾಂಕ 21–03–2007
3) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ : ಕೆಆರ್‌ಇಡಿ/06/ಎಸ್‌ಹೆಚ್/2010/2847, ದಿನಾಂಕ 06/08–10–2010

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಮೆ॥ ವೆನಿಕಾ ಹೈಡ್ರೊ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಗುಲ್ಬರ್ಗಾ ಜಿಲ್ಲೆಯ ಶೋರಾಪುರ ತಾಲ್ಲೂಕಿನ ನಾಗರಾಳ ಗ್ರಾಮದ ಬಳಿ ಕೃಷ್ಣ ನದಿಯ ಉಪ ನದಿಯಾದ ದೇವಪುರ ನಾಲೆಗೆ ಅಡ್ಡಲಾಗಿ 10.25 ಮೆಗಾ ವ್ಯಾಟ್ ಸಾಮರ್ಥ್ಯದ ಗೋನಾಲ್ ಕಿರು ಜಲ ವಿದ್ಯುತ್ ಯೋಜನೆಯನ್ನು ಮೂರು ಹಂತಗಳಲ್ಲಿ ಈ ಕೆಳಗಿನಂತೆ ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು:–

Project Name	Capacity	Weir		Power House	
		Longitude	Latitude	Longitude	Latitude
Gonal SHP-I	2x875 KW	$76^0$38'06"	$16^0$28'36"	$76^0$38'08"	$16^0$28'33"
Gonal SHP-II	2x1000 KW	$76^0$39'46"	$16^0$28'00"	$76^0$39'49"	$16^0$27'57"
Gonal SHP-III	2x3250 KW	$76^0$42'37"	$16^0$27'21"	$76^0$42'42"	$16^0$27'18"
Total	**10.25 MW**				

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಆದೇಶದಲ್ಲಿ ಮೆ॥ ವೆನಿಕಾ ಹೈಡ್ರೊ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಗುಲ್ಬರ್ಗಾ ಜಿಲ್ಲೆಯ ಶೋರಾಪುರ ತಾಲ್ಲೂಕಿನ ನಾಗರಾಳ ಗ್ರಾಮದ ಬಳಿ ಕೃಷ್ಣ ನದಿಯ ಉಪ ನದಿಯಾದ ದೇವಪುರ ನಾಲೆಗೆ ಅಡ್ಡಲಾಗಿ ಅನುಷ್ಠಾನ ಮಾಡಲು ಅನುಮತಿಸಲಾದ 6.5 ಮೆಗಾ ವ್ಯಾಟ್ ಸಾಮರ್ಥ್ಯದ ಗೋನಾಲ್–III ಕಿರು ಜಲ ವಿದ್ಯುತ್ ಯೋಜನೆಯನ್ನು ಮೆ॥ ಸೌತ್ ವೆಸ್ಟ್ ಹೈಡ್ರೊ ಪವರ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಹೆಸರಿನಲ್ಲಿ ವರ್ಗಾಯಿಸಿ ಅನುಷ್ಠಾನ ಮಾಡಲು ಅನುಮತಿ ನೀಡಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ॥ ಸೌತ್ ವೆಸ್ಟ್ ಹೈಡ್ರೊ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಅನುಮತಿಸಲಾಗಿರುವ 6.5 ಮೆಗಾ ವ್ಯಾಟ್ ಗೋನಾಲ್–III ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 5.00 ಮೆಗಾ ವ್ಯಾಟ್‌ಗೆ ಸೀಮಿತಗೊಳಿಸಿ ಆದೇಶ ಹೊರಡಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಈ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಗಿನಂತೆ ಆದೇಶಿಸಲಾಗಿದೆ :–

ಸರ್ಕಾರಿ ಆದೇಶ ಸಂಖ್ಯೆ: ಇಎನ್ 392 ಎನ್‌ಸಿಇ 2010, ಬೆಂಗಳೂರು, ದಿನಾಂಕ: 20–10–2010

ಮೆ॥ ಸೌತ್ ವೆಸ್ಟ್ ಹೈಡ್ರೊ ಪವರ್ ಪ್ರೈವೇಟ್ ಲಿಮಿಟೆಡ್ ಇವರಿಗೆ ಗುಲ್ಬರ್ಗಾ ಜಿಲ್ಲೆಯ ಶೋರಾಪುರ ತಾಲ್ಲೂಕಿನ ನಾಗರಾಳ ಗ್ರಾಮದ ಬಳಿ ಕೃಷ್ಣ ನದಿಯ ಉಪ ನದಿಯಾದ ದೇವಪುರ ನಾಲೆಗೆ ಅಡ್ಡಲಾಗಿ ಅನುಷ್ಠಾನ ಮಾಡಲು ಅನುಮತಿಸಲಾದ 6.5 ಮೆಗಾ ವ್ಯಾಟ್ ಗೋನಾಲ್–III ಕಿರು ಜಲ ವಿದ್ಯುತ್ ಯೋಜನೆಯ ಸಾಮರ್ಥ್ಯವನ್ನು 5.00 ಮೆಗಾ ವ್ಯಾಟ್‌ಗೆ ಸೀಮಿತಗೊಳಿಸಿ ಅನುಷ್ಠಾನ ಮಾಡಲು ಅನುಮತಿಸಲಾಗಿದೆ.

ಈ ಆದೇಶವನ್ನು ರದ್ದು ಪಡಿಸುವುದು/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಮೇಲೆ ಓದಲಾದ (1)ರ ಹಂಚಿಕೆ ಆದೇಶದ ಇತರ ನಿಬಂಧನೆಗಳು ಯಥಾವತ್ತಾಗಿ ಮುಂದುವರೆಯುತ್ತವೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸುರೇಶ್ ಬಿ. ಕೃಷ್ಣಪ್ಪನವರ್
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

ಪಿ.ಆರ್. ನಂ. 2685

ಕಂದಾಯ ಸಚಿವಾಲಯ

ವಿಷಯ : 2010ನೇ ಸಾಲಿನಲ್ಲಿ ಭಾರಿ ಮಳೆಯಿಂದ ಮೂಲಭೂತ ಸೌಕರ್ಯಗಳಿಗೆ ಆಗಿರುವ ಹಾನಿಗಳಿಗೆ ತುರ್ತು ದುರಸ್ತಿ ಕಾರ್ಯ ಕೈಗೊಳ್ಳಲು ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿ ಸಂಖ್ಯೆ : ಮುಮಕಾ/6295/2010, ದಿನಾಂಕ 23–10–2010.

ಪ್ರಸ್ತಾವನೆ :

ಮೇಲೆ ಓದಲಾದ ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಯವರ ಟಿಪ್ಪಣಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರು ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಭಾರಿ ಮಳೆಯಿಂದ ಮೂಲಭೂತ ಸೌಕರ್ಯಗಳಿಗೆ ಆಗಿರುವ ಹಾನಿಗಳಿಗೆ ತುರ್ತು ದುರಸ್ತಿ ಕಾರ್ಯ ಕೈಗೊಳ್ಳಲು ಕೂಡಲೇ ಸರ್ಕಾರದಿಂದ ತಲಾ ರೂ. 5.00 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡುವಂತೆ ಆದೇಶಿಸಿರುವುದಾಗಿ ತಿಳಿಸಿರುತ್ತಾರೆ.

ದಾವಣಗೆರೆ ಜಿಲ್ಲೆಯಲ್ಲೂ ಸಹ ಭಾರಿ ಮಳೆಯಿಂದ ಮೂಲ ಭೂತ ಸೌಕರ್ಯಗಳಿಗೆ ಹಾನಿಯಾಗಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆ ಮತ್ತು ದಾವಣಗೆರೆ ಜಿಲ್ಲೆಗಳಲ್ಲಿ ಹಾನಿಗೊಂಡಿರುವ ಮೂಲಭೂತ ಸೌಕರ್ಯಗಳಿಗೆ ದುರಸ್ತಿ ಹಾಗೂ ಇತರೆ ಪರಿಹಾರ ಕಾರ್ಯ ಕೈಗೊಳ್ಳಲು ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡಲು ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಂಇ 180 ಟಿಎನ್ಆರ್ 2010 (ಭಾಗ–1), ಬೆಂಗಳೂರು, ದಿನಾಂಕ: 25–10–2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2010ನೇ ಸಾಲಿನಲ್ಲಿ ಬಿದ್ದ ಭಾರಿ ಮಳೆಯಿಂದ ಹಾಳಾಗಿರುವ ಮೂಲಭೂತ ಸೌಕರ್ಯಗಳಿಗೆ ತುರ್ತು ದುರಸ್ತಿ ಹಾಗೂ ಇತರೆ ಪರಿಹಾರ ಕಾರ್ಯ ಕೈಗೊಳ್ಳಲು ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಈ ಕೆಳಕಂಡ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

ಕ್ರ.ಸಂ.	ಜಿಲ್ಲೆ	ಬಿಡುಗಡೆ ಮಾಡಿದ ಮೊತ್ತ (ರೂ. ಲಕ್ಷಗಳಲ್ಲಿ)	ಲೆಕ್ಕ ಶೀರ್ಷಿಕೆ
1	ದಕ್ಷಿಣ ಕನ್ನಡ	200.00	2245–01–800–1–01 (ಯೋಜನೇತರ)
2	ಉಡುಪಿ	200.00	2245–01–800–1–01 (ಯೋಜನೇತರ)
3	ದಾವಣಗೆರೆ	100.00	2245–02–110–0–01 (ಯೋಜನೇತರ)
ಒಟ್ಟು ರೂ.		**500.00**	

(ಒಟ್ಟು ರೂಪಾಯಿ ಐನೂರು ಲಕ್ಷಗಳು ಮಾತ್ರ)

ಬಿಡುಗಡೆ ಮಾಡಲಾದ ಅನುದಾನವನ್ನು ಕೇಂದ್ರ ಸರ್ಕಾರವು ಹೊರಡಿಸಿರುವ ಪ್ರಕೃತಿ ವಿಕೋಪ ಪರಿಹಾರ ಮಾರ್ಗಸೂಚಿಗಳ ಪ್ರಕಾರ ವೆಚ್ಚ ಮಾಡುವುದು ಹಾಗೂ ಕಾಲಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿ/ಆದೇಶ/ಸುತ್ತೋಲೆಗಳನ್ನು ಪಾಲಿಸುವುದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು ಪೇಯೀಸ್ ರಸೀದಿ ಬಿಲ್ಲುಗಳನ್ನು ತಯಾರಿಸಿ ಮೇಲು ರುಜು ಮಾಡಿ ಜಿಲ್ಲಾ ಖಜಾನೆಯಿಂದ ಡ್ರಾ ಮಾಡಿ ಸಿ.ಆರ್.ಎಫ್.ಪಿ.ಡಿ. ಖಾತೆಗೆ ಜಮಾ ಮಾಡಿದ ನಂತರ ಪರಿಹಾರ ಕಾರ್ಯಗಳಿಗೆ ಉಪಯೋಗಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ : ಎಫ್‌ಡಿ 347 ವೆಚ್ಚ–7/2010, ದಿನಾಂಕ 30–8–2010 ಹಾಗೂ ಅನಧಿಕೃತ ಟಿಪ್ಪಣಿ ಸಂಖ್ಯೆ : ಎಫ್‌ಡಿ 347 ವೆಚ್ಚ–7/2010, ದಿನಾಂಕ 25–9–2010ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ. ಗಂಗಾಧರ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ವಿ.ನಿ. & ಸೇವೆಗಳು–2)

ಪಿ.ಆರ್. ನಂ. 2686

ಕಂದಾಯ ಸಚಿವಾಲಯ

ವಿಷಯ : ಶ್ರೀ ಬಿ. ಹೆಚ್. ಶಿವಪ್ಪ, ವಿಶೇಷ ತಹಶೀಲ್ದಾರ್, ಬಬಲೇಶ್ವರ, ವಿಜಾಪುರ ತಾಲ್ಲೂಕು, ಬಿಜಾಪುರ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಗಳನ್ನು ನೇಮಿಸುವ ಕುರಿತು ಆದೇಶ.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ಕಂಇ 04 ಎಡಿಇ 2009, ದಿನಾಂಕ 21–5–2009
2) ಜಿಲ್ಲಾಧಿಕಾರಿಗಳು, ಬಿಜಾಪುರ ಇವರ ಪತ್ರ ಸಂಖ್ಯೆ: ಕಂ/ಸಿಬ್ಬಂದಿ/2/ವಿವ/13/2008–09, ದಿನಾಂಕ 2–7–2009.
3) ಸರ್ಕಾರದ ಕಾರಣ ಕೇಳುವ ನೋಟೀಸು ಸಂಖ್ಯೆ: ಕಂಇ 04 ಎಡಿಇ 2009, ದಿನಾಂಕ 28–10–2009.

***

ಪ್ರಸ್ತಾವನೆ :

ಶ್ರೀ ಬಿ. ಹೆಚ್. ಶಿವಪ್ಪ, ವಿಶೇಷ ತಹಶೀಲ್ದಾರ್, ಬಬಲೇಶ್ವರ, ವಿಜಾಪುರ ತಾಲ್ಲೂಕು, ಬಿಜಾಪುರ ಜಿಲ್ಲೆ ಇವರು ದಿನಾಂಕ 1–7–2008 ರಿಂದ ಕಛೇರಿಗೆ ಅನಧಿಕೃತವಾಗಿ ಗೈರು ಹಾಜರಾಗಿರುವುದರಿಂದ, ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ, ಕೂಡಲೇ ಜಾರಿಗೆ ಬರುವಂತೆ,

ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮಾವಳಿಯ ನಿಯಮ 10(1)(ಡಿ) ರನ್ವಯ, ಸೇವೆಯಿಂದ ಅಮಾನತ್ತುಗೊಳಿಸಿ ಮೇಲೆ ಓದಲಾದ ಕ್ರಮ ಸಂಖ್ಯೆ: (1)ರ ಆದೇಶದಲ್ಲಿ ಆದೇಶಿಸಲಾಗಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಜಿಲ್ಲಾಧಿಕಾರಿಗಳು, ಬಿಜಾಪುರರವರು ಶ್ರೀ ಬಿ. ಹೆಚ್. ಶಿವಪ್ಪ, ವಿಶೇಷ ತಹಶೀಲ್ದಾರ್, ಬಬಲೇಶ್ವರ, ವಿಜಾಪುರ ತಾಲ್ಲೂಕು, ಬಿಜಾಪುರ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಕುರಿತಂತೆ, ಕರಡು ದೋಷಾರೋಪಣ ಪಟ್ಟಿಯನ್ನು (ಅನುಬಂಧ 1 ರಿಂದ 4) ದಾಖಲೆಗಳೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ: (3)ರಲ್ಲಿ ಸರ್ಕಾರವು ಶ್ರೀ ಬಿ. ಹೆಚ್. ಶಿವಪ್ಪ, ವಿಶೇಷ ತಹಶೀಲ್ದಾರ್, ಬಬಲೇಶ್ವರ, ವಿಜಾಪುರ ತಾಲ್ಲೂಕು, ಬಿಜಾಪುರ ಜಿಲ್ಲೆ ಇವರಿಗೆ ಜಿಲ್ಲಾಧಿಕಾರಿಗಳು ಕಳುಹಿಸಿರುವ ದೋಷಾರೋಪಣೆ ಪಟ್ಟಿಯ ಅನುಬಂಧ 1 ರಿಂದ 4 ಗಳನ್ನು ಜಾರಿಗೊಳಿಸಿ, ಸದರಿ ನೋಟೀಸು ಸ್ವೀಕರಿಸಿದ 15 ದಿನಗಳೊಳಗೆ ಲಿಖಿತ ಹೇಳಿಕೆಯನ್ನು ಸಲ್ಲಿಸುವಂತೆ, ತಪ್ಪಿದಲ್ಲಿ ನಿಮ್ಮ ಪ್ರತಿವಾದವೇನೂ ಇಲ್ಲವೆಂದು ಭಾವಿಸಿ, ಕ.ನಾ.ಸೇ (ವ.ನಿ & ಮೇ) ನಿಯಮ 1957ರ ನಿಯಮ 11ನೇ ಮೇರೆಗೆ ಅವರ ಮೇಲೆ ಏಕಪಕ್ಷೀಯವಾಗಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಲಾಗಿರುತ್ತದೆ.

ಶ್ರೀ ಬಿ. ಹೆಚ್. ಶಿವಪ್ಪ, ಹಿಂದಿನ ವಿಶೇಷ ತಹಶೀಲ್ದಾರ್, ಬಬಲೇಶ್ವರ (ಹಾಲಿ ಅಮಾನತ್ತು) ಇವರು ದಿನಾಂಕ 1–7–2008 ರಿಂದ ಅನಧಿಕೃತವಾಗಿ ಗೈರು ಹಾಜರಾಗಿದ್ದಕ್ಕೆ ಅವರನ್ನು ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 4 ಎಡಿಇ 2009, ದಿನಾಂಕ 21–5–2009ರಲ್ಲಿ ಅಮಾನತ್ತಿನಲ್ಲಿ ಇರಿಸಲಾಗಿತ್ತು. ಸದರಿ ಅಧಿಕಾರಿಗೆ ದಿನಾಂಕ 29–11–2009 ರಂದು ದೋಷಾರೋಪಣ ಪಟ್ಟಿ ಜಾರಿ ಮಾಡಲಾಗಿದ್ದು, ಆಪಾದಿತರು ಇಲ್ಲಿಯವರೆಗೆ ಯಾವುದೇ ಹೇಳಿಕೆ ಸಲ್ಲಿಸಿರುವುದಿಲ್ಲ. ಅವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಹೆಚ್ಚುವರಿ ಜಿಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ಕಛೇರಿ, ಬಿಜಾಪುರ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು ಅದೇ ಕಛೇರಿಯ ಶಿರಸ್ತೇದಾರ್ (ಆಡಳಿತ) ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲು ತಿರ್ಮಾನಿಸಿರುವ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಂಇ 04 ಎಡಿಇ 2009, ಬೆಂಗಳೂರು, ದಿನಾಂಕ: 20–10–2010

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 11 ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಶ್ರೀ ಬಿ. ಹೆಚ್. ಶಿವಪ್ಪ, ಹಿಂದಿನ ವಿಶೇಷ ತಹಶೀಲ್ದಾರ್, ಬಬಲೇಶ್ವರ (ಹಾಲಿ ಅಮಾನತ್ತು) ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಹೆಚ್ಚುವರಿ ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ಕಛೇರಿ, ಬಿಜಾಪುರ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 11(5)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಬಿಜಾಪುರ ಜಿಲ್ಲಾಧಿಕಾರಿಗಳ ಕಚೇರಿಯ ಶಿರಸ್ತೇದಾರ (ಆಡಳಿತ) ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ.

ವಿಚಾರಣಾಧಿಕಾರಿಗಳು ಇಲಾಖಾ ವಿಚಾರಣೆಯನ್ನು ಮೇಲ್ಕಂಡ ನಿಯಮಗಳ ನಿಯಮ 11 ಮತ್ತು 11(ಎ) ರಲ್ಲಿ ವಿಧಿವಿಧಾನವನ್ನು ಅನುಸರಿಸಿ, ಜರುಗಿಸಿ, ವಿಚಾರಣಾ ವರದಿಯನ್ನು ಎರಡು ತಿಂಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್. ಬಿ. ಸಸಾಲಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು–3)

ಪಿ.ಆರ್. ನಂ. 2687

ಕಂದಾಯ ಸಚಿವಾಲಯ

ವಿಷಯ : ಶ್ರೀ ಎಂ. ಎ. ಹಾಜೀಭಾಯಿ, ಹಿಂದಿನ ತಹಶೀಲ್ದಾರ್. ತಾಲ್ಲೂಕು ಕಛೇರಿ, ಮಾನ್ವಿ, ರಾಯಚೂರು ಜಿಲ್ಲೆ (ಪ್ರಸ್ತುತ ಅಮಾನತ್ತಿನಲ್ಲಿರುವ) ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಗಳನ್ನು ನೇಮಿಸುವ ಕುರಿತು ಆದೇಶ.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ಕಂಇ 35 ಎಡಿಇ 2009, ದಿನಾಂಕ 08–12–2009
2) ಅಪರ ಜಿಲ್ಲಾಧಿಕಾರಿಗಳು, ರಾಯಚೂರು, ಪ್ರಮಾಣ ಪತ್ರ ಸಂ. ಕಂದಾಯ/ಸಿಬ್ಬಂದಿ–1:165:2009–10, ದಿನಾಂಕ 26–06–2010.
3) ಸರ್ಕಾರದ ಕಾರಣ ಕೇಳುವ ನೋಟೀಸು ಸಂಖ್ಯೆ: ಆರ್‌ಡಿ 35 ಎಡಿಇ 2009, ದಿನಾಂಕ 11–08–2010.
4) ಶ್ರೀ ಎಂ. ಎ. ಹಾಜೀಭಾಯಿ, ಹಿಂದಿನ ತಹಶೀಲ್ದಾರ್, ತಾಲ್ಲೂಕು ಕಛೇರಿ, ಮಾನ್ವಿ, ರಾಯಚೂರು ಜಿಲ್ಲೆ, ಇವರ ಲಿಖಿತ ಹೇಳಿಕೆ ದಿನಾಂಕ 09–09–2010.

***

ಪ್ರಸ್ತಾವನೆ :

ಶ್ರೀ ಎಂ. ಎ. ಹಾಜೀಭಾಯಿ, ತಹಶೀಲ್ದಾರ್. ಮಾನ್ವಿ, ರಾಯಚೂರು ಜಿಲ್ಲೆ, ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ 2009ನೇ ಸಾಲಿನಲ್ಲಿ ಪ್ರಕೃತಿ ವಿಕೋಪ ಪರಿಹಾರ ವಿತರಣೆಯಲ್ಲಿ ಅವ್ಯವಹಾರ ಎಸಗಿದ್ದಾರೆಂಬ ಆರೋಪದ ಮೇಲೆ ಕ್ರಮ ಸಂಖ್ಯೆ: (1)ರ ಓದಲಾದ ದಿನಾಂಕ: 08–12–2009ರ ಆದೇಶದಲ್ಲಿ ಶ್ರೀಯುತರನ್ನು ಅಮಾನತ್ತಿನಲ್ಲಿ ಇರಿಸಲಾಗಿದೆ. ಮೇಲೆ ಕ್ರ.ಸಂ. (2)ರಲ್ಲಿ ಓದಲಾದ ದಿನಾಂಕ 26–06–2010ರ ಪತ್ರದಲ್ಲಿ ಅಪರ ಜಿಲ್ಲಾಧಿಕಾರಿ, ರಾಯಚೂರು ಇವರು ಶ್ರೀ ಎಂ. ಎ. ಹಾಜೀಭಾಯಿ, ತಹಶೀಲ್ದಾರ್, ಮಾನ್ವಿ, ಇವರ ವಿರುದ್ಧ ಮಾಡಲಾದ ಆರೋಪಗಳಿಗೆ ಸಂಬಂಧಿಸಿದಂತೆ ಕರಡು ದೋಷಾರೋಪಣಾ ಪಟ್ಟಿಯನ್ನು ಕಳುಹಿಸಿರುತ್ತಾರೆ ಮೇಲೆ ಕ್ರ.ಸಂ. (3)ರಲ್ಲಿ ಓದಲಾದ ದಿನಾಂಕ 11–08–2010 ರಲ್ಲಿ ಶ್ರೀ ಎಂ. ಎ. ಹಾಜೀಭಾಯಿ, ತಹಶೀಲ್ದಾರ್ ಇವರಿಗೆ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿರುತ್ತದೆ. ಮೇಲೆ ಕ್ರ.ಸಂ. (4)ರಲ್ಲಿ ಓದಲಾದ ದಿನಾಂಕ 09–09–2010 ರ ರಕ್ಷಣಾ ಲಿಖಿತ ಹೇಳಿಕೆಯಲ್ಲಿ ಅವರ ವಿರುದ್ಧ ಹೊರಿಸಲಾದ ಆಪಾದನೆಗಳನ್ನು ನಿರಾಕರಿಸಿದ್ದಾರೆ. ಆದುದರಿಂದ

ದೋಷಾರೋಪಣೆಗಳಲ್ಲಿ ವಿವರಿಸಿರುವ ಆಪಾದನೆಗಳ ಸತ್ಯಾಸತ್ಯತೆಯನ್ನು ಪರಿಶೀಲಿಸಲು ವಿಚಾರಣೆ ನಡೆಸುವುದು ಅವಶ್ಯವಾಗಿದ್ದು, ನಿವೃತ್ತ ನ್ಯಾಯಾಧೀಶರಾದ ಶ್ರೀ ಜಿ. ಸಿ. ಗುಡ್ಡಕಾರ್, ಧಾರವಾಡ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು ಈಗಿರುವ ಮಾನ್ವಿ ತಹಶೀಲ್ದಾರ್ ರವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲು ತೀರ್ಮಾನಿಸಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 35 ಎಡಿಇ 2009, ಬೆಂಗಳೂರು, ದಿನಾಂಕ: 26-10-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 11ರ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸರ್ಕಾರವು ಶ್ರೀ ಎಂ. ಎ. ಹಾಜೀಭಾಯಿ, ಹಿಂದಿನ ತಹಶೀಲ್ದಾರ್, ತಾಲ್ಲೂಕು ಕಛೇರಿ, ಮಾನ್ವಿ, ರಾಯಚೂರು ಜಿಲ್ಲೆ (ಪ್ರಸ್ತುತ ಅಮಾನತ್ತಿನಲ್ಲಿರುವ) ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ನಿವೃತ್ತ ನ್ಯಾಯಾಧೀಶರಾದ ಶ್ರೀ ಜಿ. ಸಿ. ಗುಡ್ಡಾಕಾರ್, ಧಾರವಾಡ, ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 11(5)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈಗಿರುವ ಮಾನ್ವಿ ತಹಶೀಲ್ದಾರರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿದೆ.

ವಿಚಾರಣಾಧಿಕಾರಿಗಳು ಈ ಪ್ರಕರಣದ ವಿಚಾರಣೆಯನ್ನು ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ, ಇವರ ಕಛೇರಿಯ ಆವರಣದಲ್ಲಿ ಅಥವಾ ಅವರು ಗುರುತಿಸಿ, ನಿಗಧಿಪಡಿಸಿದ ಸ್ಥಳದಲ್ಲಿ ನಡೆಸತಕ್ಕದ್ದು, ಈ ಉದ್ದೇಶಕ್ಕಾಗಿ ಲಭ್ಯವಿರುವ ಕಛೇರಿಗಳಲ್ಲಿ ವಿಚಾರಣಾಧಿಕಾರಿಗಳಿಗೆ ಸ್ಥಳಾವಕಾಶವನ್ನು ಮಾಡುವುದು ಹಾಗೂ ಸಂಬಂಧಿಸಿದ ಕಛೇರಿಯಲ್ಲಿ ಲಭ್ಯವಿರುವ ಶೀಘ್ರಲಿಪಿಗಾರರ/ಬೆರಳಚ್ಚುಗಾರರ ಸಹಾಯವನ್ನು ಹಾಗೂ ಲೇಖನ ಸಾಮಗ್ರಿಗಳನ್ನು ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ, ಇವರು ಒದಗಿಸತಕ್ಕದ್ದು.

ಈ ಪ್ರಕರಣದ ವಿಚಾರಣೆಗಾಗಿ ವಿಚಾರಣಾಧಿಕಾರಿಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 22 ಸೇಇವಿ 2007, ದಿನಾಂಕ 11-04-2008ರ ಅನ್ವಯ ರೂ. 8,000/- (ಎಂಟು ಸಾವಿರ ರೂಪಾಯಿಗಳು ಮಾತ್ರ) ಗಳ ಸಂಚಿತ ಸಂಭಾವನೆಯನ್ನು ಹಾಗೂ ರೂ. 1,500/- (ಒಂದು ಸಾವಿರದ ಐನೂರು ರೂಪಾಯಿಗಳು ಮಾತ್ರ)ಗಳ ವಾಹನ ಭತ್ಯೆ (ಕನ್ವೇಯನ್ಸ್ ಅಲೋಯನ್ಸ್)ಯನ್ನು ವಿಚಾರಣಾಧಿಕಾರಿಗಳು ವಿಚಾರಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ ನಂತರ ಜಿಲ್ಲಾಧಿಕಾರಿಗಳು, ರಾಯಚೂರು ಜಿಲ್ಲೆ, ಇವರು ಪಾವತಿ ಮಾಡತಕ್ಕದ್ದು.

ವಿಚಾರಣಾಧಿಕಾರಿಗಳು ಇಲಾಖಾ ವಿಚಾರಣೆಯನ್ನು ಮೇಲ್ಕಂಡ ನಿಯಮಗಳ ನಿಯಮ 11 ಮತ್ತು 11(ಎ) ರಲ್ಲಿನ ವಿಧಿವಿಧಾನಗಳನ್ನು ಅನುಸರಿಸಿ, ಜರುಗಿಸಿ ವಿಚಾರಣಾ ವರದಿಯನ್ನು ಮೂರು ತಿಂಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್. ಬಿ. ಸಸಾಲಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು-3)

ಪಿ.ಆರ್. ನಂ. 2688

ಕಂದಾಯ ಸಚಿವಾಲಯ

ವಿಷಯ : ಶ್ರೀ ಎಂ. ಎ. ಹಾಜೀಭಾಯಿ, ಹಿಂದಿನ ತಹಶೀಲ್ದಾರ್. ಮಾನ್ವಿ, ರಾಯಚೂರು ಜಿಲ್ಲೆ (ಪ್ರಸ್ತುತ ಅಮಾನತ್ತಿನಲ್ಲಿರುವ) ಇವರ ಅಮಾನತ್ತನ್ನು ತೆರವುಗೊಳಿಸುವ ಕುರಿತು.

ಓದಲಾಗಿದೆ :
1) ಸರ್ಕಾರದ ಆದೇಶ ಸಂಖ್ಯೆ: ಕಂಇ 35 ಎಡಿಇ 2009, ದಿನಾಂಕ 08-12-2009
2) ಮಾನ್ಯ ಕರ್ನಾಟಕ ಆಡಳಿತ ಮಂಡಳಿಯ ಅರ್ಜಿ ಸಂ. 5858/2009, ದಿನಾಂಕ 04-02-2010 ರಂದು ನೀಡಿರುವ ಆದೇಶ.
3) ಸರ್ಕಾರದ ಆದೇಶ ಸಂ.: ಆರ್‌ಡಿ 35 ಎಡಿಇ 2009, ದಿನಾಂಕ 26-10-2010

***

ಪ್ರಸ್ತಾವನೆ :

ಶ್ರೀ ಎಂ. ಎ. ಹಾಜೀಭಾಯಿ, ತಹಶೀಲ್ದಾರ್. ಮಾನ್ವಿ, ರಾಯಚೂರು ಜಿಲ್ಲೆ, ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ 2009ನೇ ಸಾಲಿನಲ್ಲಿ ಪ್ರಕೃತಿ ವಿಕೋಪ ಪರಿಹಾರ ವಿತರಣೆಯಲ್ಲಿ ಅವ್ಯವಹಾರ ಎಸಗಿದ್ದಾರೆಂಬ ಆರೋಪದ ಮೇಲೆ ಕ್ರಮ ಸಂಖ್ಯೆ: (1)ರ ಓದಲಾದ ದಿನಾಂಕ: 08-12-2009ರ ಆದೇಶದಲ್ಲಿ ಶ್ರೀಯುತರನ್ನು ಅಮಾನತ್ತಿನಲ್ಲಿ ಇರಿಸಲಾಗಿದೆ.

ಶ್ರೀ ಎಂ. ಎ. ಹಾಜೀಭಾಯಿ, ಹಿಂದಿನ ತಹಶೀಲ್ದಾರ್ ತಾಲ್ಲೂಕು ಕಛೇರಿ, ಮಾನ್ವಿ, ರಾಯಚೂರು ಜಿಲ್ಲೆ ಇವರು ಕೆ.ಎ.ಟಿ.ಯಲ್ಲಿ ಅರ್ಜಿ ಸಂ. 5858/2009ನ್ನು ದಾಖಲಿಸಿದ್ದು, ಸದರಿ ಅರ್ಜಿಗೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ 04-02-2010ರ ಆದೇಶದಲ್ಲಿ ಈ ಕೆಳಗಿನಂತೆ ಆದೇಶಿಸಿದೆ.

1) Application is disposed of
2) The government is directed to review the order of suspension in terms of the circular dated 06-02-2003 and take a decision in the matter.

ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಸರ್ಕಾರದ ಆದೇಶ ದಿನಾಂಕ 26-10-2010ರಲ್ಲಿ ಶ್ರೀ ಹಾಜಿಭಾಯಿ, ಹಿಂದಿನ ತಹಶೀಲ್ದಾರ್, ಮಾನ್ವಿ, ರಾಯಚೂರು ಜಿಲ್ಲೆ (ಪ್ರಸ್ತುತ ಅಮಾನತ್ತಿನಲ್ಲಿರುವ) ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ವಿಚಾರಣಾಧಿಕಾರಿ ಹಾಗೂ ಮಂಡಣಾಧಿಕಾರಿಗಳನ್ನು ನೇಮಿಸಿ ಆದೇಶಿಸಲಾಗಿದೆ.

ಶ್ರಿ ಎಂ. ಎ. ಹಾಜೀಭಾಯಿ, ಹಿಂದಿನ ತಹಶೀಲ್ದಾರ್, ಮಾನ್ವಿ, ರಾಯಚೂರು ಜಿಲ್ಲೆ (ಪ್ರಸ್ತುತ ಅಮಾನತ್ತಿನಲ್ಲಿರುವ) ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ ಅಮಾನತ್ತನ್ನು ತೆರವುಗೊಳಿಸಲು ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 35 ಎಡಿಇ 2009, ಬೆಂಗಳೂರು, ದಿನಾಂಕ: 27-10-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀ ಎಂ. ಎ. ಹಾಜೀಭಾಯಿ, ಹಿಂದಿನ ತಹಶೀಲ್ದಾರ್, ಮಾನ್ವಿ ರಾಯಚೂರು ಜಿಲ್ಲೆ (ಪ್ರಸ್ತುತ ಅಮಾನತ್ತಿನಲ್ಲಿರುವ) ಇವರನ್ನು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳ ನಿಯಮ 10 (5) (ಸಿ)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಅವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ, ಈ ಕೂಡಲೇ ಜಾರಿ ಬರುವಂತೆ ಅಮಾನತ್ತನ್ನು ತೆರವುಗೊಳಿಸಿ ಇವರನ್ನು ಚುನಾವಣಾ ತಹಶೀಲ್ದಾರ್, ಜಿಲ್ಲಾಧಿಕಾರಿಗಳ ಕಛೇರಿ, ರಾಯಚೂರು ಇಲ್ಲಿಗೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್. ಬಿ. ಸಸಾಲಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು-3)

ಪಿ.ಆರ್. ನಂ. 2689

ಕಂದಾಯ ಸಚಿವಾಲಯ

ವಿಷಯ : ಶ್ರೀ ಎಸ್.ಆರ್. ಪಾಟೀಲ, ಹಿಂದಿನ ತಹಶೀಲ್ದಾರ್, ಸೇಡಂ ರವರ ವಿರುದ್ಧ ಶಿಸ್ತು ಕ್ರಮದ ಬಗ್ಗೆ.

ಓದಲಾಗಿದೆ:
1) ಶ್ರೀ ಡಾ. ಶರಣಪ್ರಕಾಶ ಆರ್. ಪಾಟೀಲ್, ಶಾಸಕರು, ಸೇಡಂ, ಇವರ ಪತ್ರ ದಿನಾಂಕ:27-01-2010.
2) ಅಪರ ಜಿಲ್ಲಾಧಿಕಾರಿಗಳು, ಗುಲ್ಬರ್ಗಾ, ಇವರ ಪತ್ರ ಸಂಖ್ಯೆ: ಕಂದಾಯ. ಎಂಎಜಿ/1336/2009-10, ಇವರ ನೋಟೀಸ್, ದಿ: 28-01-2010.
3) ಶ್ರೀ ಎಸ್.ಆರ್. ಪಾಟೀಲ್, ತಹಶೀಲ್ದಾರ್, ಸೇಡಂ, ಇವರ ಲಿಖಿತ ಹೇಳಿಕೆ ದಿನಾಂಕ: 05-02-2010.
ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದ, ಬೆಳಗಾವಿ ಜಿಲ್ಲೆ ರಾಮದುರ್ಗ ತಾಲ್ಲೂಕು ಗೊಡಚಿ ಗ್ರಾಮಕ್ಕೆ ಸೇರಿದ ಜನೀನುಗಳಿಗೆ ಸಿವಿಲ್ ನ್ಯಾಯಾಲಯವು ನೀಡಿದ ತೀರ್ಪಿನಂತೆ ಹಾಗೂ ಭೂಸ್ವಾಧೀನ ಕಾಯ್ದೆಯ ಅನುಸಾರ ಲೆಕ್ಕಹಾಕಿ ಪರಿಹಾರ ಮೊತ್ತ ರೂ. 17,25,526-00 (ಹದಿನೇಳು ಲಕ್ಷದ ಇಪ್ಪತ್ತೈದು ಸಾವಿರದ ಐನೂರ ಇಪ್ಪತ್ತಾರು ರೂಪಾಯಿಗಳು ಮಾತ್ರ) ಗಳನ್ನು ಈ ಕೆಳಕಂಡ ಷರತ್ತಿಗೊಳಪಟ್ಟು ನೀಡಲು ಸರ್ಕಾರವು ಅನುಮೋದನೆ ನೀಡಿದೆ.

1 ಹಣ ಪಾವತಿಗೆ ಮೊದಲು ಮತ್ತೊಮ್ಮೆ ಲೆಕ್ಕಾಚಾರ ತಃಖ್ತೆಯನ್ನು ದೃಢೀಕರಿಸಿಕೊಂಡು ಪಾವತಿಸತಕ್ಕದ್ದು, ಹಾಗೂ ಎರಡನೇ ಬಾರಿ ಪಾವತಿಯಾಗದಂತೆ ಎಚ್ಚರವಹಿಸತಕ್ಕದ್ದು.

2 ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳು ಇನ್ನೂ ಸಣ್ಣ ನೀರಾವರಿ ಇಲಾಖೆಯ ಹೆಸರಿಗೆ ವರ್ಗಾವಣೆಯಾಗದಿದ್ದಲ್ಲಿ, ಕೂಡಲೇ ಸಂಬಂಧಿಸಿದ ಸಣ್ಣ ನೀರಾವರಿ ಅಧಿಕಾರಿಗಳು ವರ್ಗಾವಣೆ ಬಗ್ಗೆ ಕ್ರಮ ಕೈಗೊಳ್ಳತಕ್ಕದ್ದು.

ಈ ವೆಚ್ಚವನ್ನು 2010-11ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ “4702-0-800-1-00 ಭೂಸ್ವಾಧೀನ ವೆಚ್ಚಗಳು ಮತ್ತು ಕ್ಲೇಂಗಳು-ಇತ್ಯರ್ಥ 132 ಬಂಡವಾಳ ವೆಚ್ಚಗಳು “ಅಡಿಯಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒದಗಿಸಿರುವ ಅನುದಾನದಿಂದ ಭರಿಸಿಕೊಳ್ಳತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2010 ದಿನಾಂಕ 20-10-10ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದ ಪ್ರತ್ಯಾಯೋಜನೆ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಗೋಪಾಲ್

ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 2739

ಜಲಸಂಪನ್ಮೂಲ ಸಚಿವಾಲಯ

ವಿಷಯ : ಧಾರವಾಡ ಜಿಲ್ಲೆ ಮುಂಡರಗಿ ತಾಲ್ಲೂಕಿನ ಮುಂಡವಾಡ ಹೊಸಕೆರೆ ನಿರ್ಮಾಣದ ಬಾಕಿ ಕಾಮಗಾರಿಯ ಗುತ್ತಿಗೆದಾರರಿಗೆ ಮಧ್ಯಸ್ಥಿಕೆ ಪ್ರಕರಣದ ಐತೀರ್ಪು ಹಾಗೂ ನ್ಯಾಯಾಲಯದ ಆದೇಶದಂತೆ ಬಾಕಿ ಮೊತ್ತ ಪಾವತಿಸುವ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ಇವರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವ ಬಿಜೆಪಿ/ಪಿಬಿ–3/2009–10/3281 ದಿನಾಂಕ: 05/06/2009.

ಪ್ರಸ್ತಾವನೆ :

ಧಾರವಾಡ ಜಿಲ್ಲೆ ಮುಂಡರಗಿ ತಾಲ್ಲೂಕಿನ ಮುಂಡವಾಡ ಹೊಸಕೆರೆ ನಿರ್ಮಾಣದ ಬಾಕಿ ಕಾಮಗಾರಿಯ ಗುತ್ತಿಗೆದಾರರಾದ ಶ್ರೀ ಆರ್.ಎನ್. ನಾಯಕ್ ಇವರಿಗೆ ಮಧ್ಯಸ್ಥಿಕೆ ಪ್ರಕರಣದ ಐತೀರ್ಪು ಹಾಗೂ ನ್ಯಾಯಾಲಯದ ಆದೇಶದಂತೆ ಬಾಕಿ ಮೊತ್ತ ಪಾವತಿಸಲು ಹಣ ಬಿಡುಗಡೆ ಮಾಡುವಂತೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಬಿಜಾಪುರ ರವರು ಮೇಲೆ ಓದಲಾದ ದಿನಾಂಕ: 05–06–2009ರ ಪತ್ರದಲ್ಲಿ ಕೋರಿರುತ್ತಾರೆ.

ಮುಂಡವಾಡ ಗ್ರಾಮದ ಬಳಿ ವಿಶ್ವ ಬ್ಯಾಂಕ್ ನೆರವಿನೊಂದಿಗೆ ಕೈಗೊಳ್ಳಲಾದ ಹೊಸಕೆರೆ ನಿರ್ಮಾಣ ಕಾಮಗಾರಿಯ ಬಾಕಿ ಕೆಲಸಗಳನ್ನು 1986–87ನೇ ಸಾಲಿನ ದರಪಟ್ಟಿಯಂತೆ ರೂ. 108.40 ಲಕ್ಷಗಳ ಟೆಂಡರ್ ಮೊತ್ತದ ಮೇಲೆ ಶೇ. 8.62 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 151.01 ಲಕ್ಷಗಳಿಗೆ ಗುತ್ತಿಗೆದಾರರಾದ ಶ್ರೀ ಆರ್.ಎನ್. ನಾಯಕ್ ಇವರಿಗೆ ದಿನಾಂಕ 30–08–1987ರಲ್ಲಿ ವಹಿಸಲಾಗಿತ್ತು. ಕಾಮಗಾರಿಯು ಪ್ರಗತಿಯಲ್ಲಿದ್ದ ಸಂದರ್ಭದಲ್ಲಿ ಗುತ್ತಿಗೆದಾರರು ಕಲವೊಂದು ಬೇಡಿಕೆಗಳನ್ನು ಮಂಡಿಸಿದಾಗ ಇಲಾಖೆ ಮತ್ತು ಗುತ್ತಿಗೆದಾರರ ಮಧ್ಯೆ ಉಂಟಾದ ವಿವಾದಗಳನ್ನು ಇತ್ಯರ್ಥಪಡಿಸಲು ದಿನಾಂಕ : 05–12–1988 ರಂದು ಏಕ ಮಧ್ಯಸ್ಥಿಕೆದಾರರನ್ನು ನೇಮಿಸಲಾಗಿತ್ತು. ಏಕ ಮಧ್ಯಸ್ಥಿಕೆದಾರರು ವಿಚಾರಣೆ ಜರುಗಿಸಿ ರೂ. 1,15,05,234–00ಗಳ ಮೊತ್ತಕ್ಕೆ ಐತೀರ್ಪನ್ನು ದಿನಾಂಕ: 06–09–1990 ರಂದು ಪ್ರಕಟಿಸಿದ್ದರು.

ಮಧ್ಯಸ್ಥಿಕೆದಾರರ ಐತೀರ್ಪು ಗದಗ್‌ನ ಸಿವಿಲ್ ನ್ಯಾಯಾಲಯದಲ್ಲಿ ಮಧ್ಯಸ್ಥಿಕೆ ದಾವೆ ಸಂಖ್ಯೆ: 1/90ರಲ್ಲಿ ದಿನಾಂಕ : 06–08–1994 ರಂದು ನ್ಯಾಯಾಜ್ಞೆ ಮತ್ತು ಡಿಕ್ರಿಯಾಗಿದೆ, ಈ ತೀರ್ಪಿನ ವಿರುದ್ಧ ಸರ್ಕಾರವು ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಎಂ.ಎಫ್.ಎ ಸಂಖ್ಯೆ: 612/95ರಲ್ಲಿ ನ್ಯಾಯಾಲಯವು ದಿನಾಂಕ: 08–02–1996 ರಂದು ನೀಡಿದ ಮಧ್ಯಂತರ ಆದೇಶದಲ್ಲಿ ಶೇ. 50ರಷ್ಟು ಐತೀರ್ಪಿನ ಮೊತ್ತ ಮತ್ತು ಬಡ್ಡಿಯನ್ನು ನ್ಯಾಯಾಲಯದಲ್ಲಿ ಠೇವಣಿ ಇಡಬೇಕೆಂಬ ಷರತ್ತಿನೊಂದಿಗೆ ಸಿವಿಲ್ ನ್ಯಾಯಾಲಯದ ತೀರ್ಪಿಗೆ ತಡೆಯಾಜ್ಞೆ ನೀಡಿತ್ತು. ಈ ಮಧ್ಯೆ ಸಿವಿಲ್ ನ್ಯಾಯಾಲಯದ ತೀರ್ಪಿನ ಜಾರಿಗಾಗಿ ಗುತ್ತಿಗೆದಾರರು ಜಾರಿ ದಾವೆ ಸಲ್ಲಿಸಿದ್ದರಿಂದ, ಕಾಮಗಾರಿಯಲ್ಲಿ ಗುತ್ತಿಗೆದಾರರು ವಾಸ್ತವಾಗಿ ನಿರ್ವಹಿಸಿದ ಕೆಲಸಗಳ ಪರಿಮಾಣ ಮತ್ತು ದರಗಳನ್ನು ಪರಿಗಣಿಸಿ, ರೂ. 53,95,178–00 ಗಳನ್ನು ದಿನಾಂಕ: 18–09–1996 ರಂದು ಠೇವಣಿ ಇಡಲಾಗಿತ್ತು.

ಸಿವಿಲ್ ನ್ಯಾಯಾಲಯದಲ್ಲಿ ಠೇವಣಿ ಮಾಡಿದ ಮೊತ್ತ ಸರಿಯಲ್ಲವೆಂದು ಮತ್ತು ಇನ್ನೂ ಹೆಚ್ಚಿನ ಮೊತ್ತವನ್ನು ಠೇವಣಿ ಇಡಬೇಕೆಂದು ಗುತ್ತಿಗೆದಾರರು ಉಚ್ಚ ನ್ಯಾಯಾಲಯದ ಎಂ.ಎಫ್.ಎ. ಗೆ ಸಲ್ಲಿಸಿದ ಪ್ರತಿ ಹೇಳಿಕೆಯನ್ನು ಪರಿಗಣಿಸಿ, ಸಿವಿಲ್ ನ್ಯಾಯಾಲಯದ ತೀರ್ಪಿನ ಪ್ರಕಾರ ಶೇ. 50ರಷ್ಟು ಅಸಲು ಮತ್ತು ಬಡ್ಡಿಯನ್ನು ಠೇವಣಿ ಇಟ್ಟ ನಂತರವೇ ಮೇಲ್ಮನವಿಯನ್ನು ವಿಚಾರಣೆಗೆ ಕೈಗೆತ್ತಿಕೊಳ್ಳುವುದಾಗಿ ದಿನಾಂಕ: 15–12–1997 ರಂದು ಆದೇಶಿಸಿದೆ. ಆದ್ದರಿಂದ ರೂ. 65,85,100–00ಗಳನ್ನು ಹೆಚ್ಚುವರಿಯಾಗಿ ದಿನಾಂಕ: 31–03–1998 ರಂದು ನ್ಯಾಯಾಲಯದಲ್ಲಿ ಠೇವಣಿ ಮಾಡಿದರೂ ಸಹ ಎಂ.ಎಫ್.ಎ ಯನ್ನು ದಿನಾಂಕ: 27–07–2000 ರಂದು ವಜಾಗೊಂಡಿದೆ. ಆದುದರಿಂದ ಗುತ್ತಿಗೆದಾರರಿಗೆ ರೂ. 1,16,25,583/–00 ಗಳನ್ನು ಪಾವತಿಸಲು ದಿನಾಂಕ: 04–02–2002ರಂದು ಸರ್ಕಾರ ಆದೇಶ ಹೊರಡಿಸಲಾಗಿತ್ತು. ಈ ಮಧ್ಯೆ ಸಿವಿಲ್ ನ್ಯಾಯಾಲಯದ ಡಿಕ್ರಿ ತಪ್ಪಾಗಿರುವುದನ್ನು ಗಮನಿಸಿ ಅದರ ತಿದ್ದುಪಡಿಗೆ ಸಿ.ಪಿ.ಸಿ. ಸೆಕ್ಷನ್ 152 ರಡಿ ಸಲ್ಲಿಸಿದ ಅರ್ಜಿಯನ್ನು ದಿನಾಂಕ: 17–06–2004 ರಂದು ವಜಾ ಮಾಡಿದೆ. ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸದಿರಲು ಕಾನೂನು ಇಲಾಖೆ ಅಭಿಪ್ರಾಯ ನೀಡಿದೆ. ಆದುದರಿಂದ ಲೆಕ್ಕಾಚಾರ ತಃಖ್ತೆ ತಯಾರಿಸಿ ರೂ. 1,16,25,583/–ಗಳ ಬದಲು ರೂ. 40,85,166/–ಗಳನ್ನು ದಿನಾಂಕ: 16–07–2005 ರಂದು ನ್ಯಾಯಾಲಯದಲ್ಲಿ ಠೇವಣಿ ಮಾಡಲಾಗಿದೆ. ದಿನಾಂಕ: 17–06–2004 ರ ಆದೇಶದ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಸಿ.ಆರ್.ಪಿ. ಸಂಖ್ಯೆ: 499/2006 ದಿನಾಂಕ: 29–03–2007 ರಂದು ವಜಾಗೊಂಡಿದೆ.

ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ ಎಂ.ಎಫ್.ಎ. ಸಂಖ್ಯೆ: 612/95 ತೀರ್ಪಿನ ವಿರುದ್ಧ ಸಲ್ಲಿಸಿದ್ದ ಪುನರ್ ಪರಿಶೀಲನಾ ಅರ್ಜಿ ಸಂಖ್ಯೆ: 221/2007 ನ್ನು ನ್ಯಾಯಾಲಯವು ದಿನಾಂಕ: 17–06–2008ರಂದು ವಜಾಗೊಳಿಸಿರುವುದರಿಂದ ಗುತ್ತಿಗೆದಾರರು ತಮಗೆ ಬರಬೇಕಾದ ಬಾಕಿ ಮೊತ್ತ ರೂ. 2,85,91,463/–ಗಳ ಲೆಕ್ಕಾಚಾರ ತಃಖ್ತೆಯನ್ನು ಸಲ್ಲಿಸಿ ಹಣ ಪಾವತಿಗಾಗಿ ಮನವಿ ಸಲ್ಲಿಸಿದ್ದಾರೆ.

ಈ ಪ್ರಕರಣದ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ಮಾನ್ಯ ಉಚ್ಚ ನ್ಯಾಯಾಲಯವು ಮಧ್ಯಂತರ ತಡೆಯಾಜ್ಞೆಯಲ್ಲಿ ನೀಡಿದ್ದ ನಿರ್ದೇಶನದಂತೆ ಠೇವಣಿ ಮಾಡಿದ್ದ ಮೊತ್ತದ ಶೇ. 50 ರಷ್ಟನ್ನು ಅಸಲು ಮೊತ್ತಕ್ಕೆ ಹಾಗೂ ಶೇ. 50ರಷ್ಟನ್ನು ಬಡ್ಡಿ ಮೊತ್ತಕ್ಕೆ ಜಮಾ ಮಾಡಿಕೊಂಡು ಉಳಿದ ಅಸಲು ಮೊತ್ತಕ್ಕೆ ಬಡ್ಡಿ ಲೆಕ್ಕ ಹಾಕಿ ರೂ. 1,72,26,000/–ಗಳನ್ನು ನ್ಯಾಯಾಲಯದಲ್ಲಿ ಠೇವಣಿ ಮಾಡಲು ನಿರ್ಧರಿಸಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸನೀಇ 24 ಡಬ್ಲ್ಯೂಟಿಎನ್ 88 ಬೆಂಗಳೂರು, ದಿನಾಂಕ: 3ನೇ ನವೆಂಬರ್, 2010

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದ, ಧಾರವಾಡ ಜಿಲ್ಲೆ ಮುಂಡರಗಿ ತಾಲ್ಲೂಕಿನ ಮುಂಡವಾಡ ಹೊಸಕೆರೆ ನಿರ್ಮಾಣದ ಬಾಕಿ ಕಾಮಗಾರಿಯ ಮಧ್ಯಸ್ಥಿಕೆ ಪ್ರಕರಣದಲ್ಲಿ ಗುತ್ತಿಗೆದಾರರಿಗೆ ಪಾವತಿಸಬೇಕಾದ ಬಾಕಿ ಮೊತ್ತ ರೂ. 1,72,26,000/–ಗಳನ್ನು (ಅಸಲು ಹಾಗೂ ಬಡ್ಡಿ ಸೇರಿದಂತೆ) ಗದಗ್ ಸಿವಿಲ್ ನ್ಯಾಯಾಲಯದಲ್ಲಿ ಠೇವಣಿ ಮಾಡಲು ಸರ್ಕಾರದ ಅನುಮೋದನೆ ನೀಡಿದೆ.

2) ಈ ವೆಚ್ಚವನ್ನು ಲೆಕ್ಕಶೀರ್ಷಿಕೆ **"4702 ಸಣ್ಣ ನೀರಾವರಿ ಮೇಲಿನ ಬಂಡವಾಳ ವೆಚ್ಚ (ಯೋಜನೆ)"** ಅಡಿ ಭರಿಸತಕ್ಕದ್ದು.

3) ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಬ್ಲ್ಯೂಡಿ 794 ಎಫ್‌ಸಿ–1/2009 ದಿನಾಂಕ: 23–10–2009ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಗೋಪಾಲ್

ಸರ್ಕಾರದ ಅಧೀನ ಕಾರ್ಯದರ್ಶಿ

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 2740

ಒಳಾಡಳಿತ ಸಚಿವಾಲಯ

ವಿಷಯ : ಶ್ರೀ ಹೆಚ್.ಎನ್. ಹೊನ್ನಪ್ಪ, ಪಿ.ಎಸ್.ಐ., ವಿನೋಬನಗರ ಪೊಲೀಸ್ ಠಾಣೆ, ಶಿವಮೊಗ್ಗ, ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ :
(1) ಶಿಸ್ತು, ಪ್ರಾಧಿಕಾರಿ ಹಾಗೂ ಪೊಲೀಸ್ ಅಧೀಕ್ಷಕರು, ದಾವಣಗೆರೆ ಜಿಲ್ಲೆ, ಇವರ ಆದೇಶ ಸಂಖ್ಯೆ: ಸಿಬ್ಬಂದಿ 5/ಇವಿ/6/2009 ಓ.ಬಿ. ಸಂ: 832/09 ದಿನಾಂಕ 06-08-2009.
(2) ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ಪೂರ್ವ ವಲಯ, ದಾವಣಗೆರೆ, ಇವರ ಆದೇಶ ಸಂಖ್ಯೆ: 22/ಅಪೀಲು/ಸಿಬ್ಬಂದಿ 2/2009-10 ಓ.ಬಿ. 206/2009-10 ದಿನಾಂಕ: 07-12-2009
(3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 20-01-2010.
(4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)78/2009-10 ದಿನಾಂಕ: 16-4-2010
(5) ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ: ಪಿಎಸ್.ಸಿ 100 ಸಿಎನ್ಎಸ್ 10 ದಿನಾಂಕ: 24-9-2010.

ಪ್ರಸ್ತಾವನೆ :

ಶ್ರೀ ಹೆಚ್.ಎನ್. ಹೊನ್ನಪ್ಪ, ಪಿ.ಎಸ್.ಐ., ಶಿವಮೊಗ್ಗ, ಇವರು ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಇವರ ವಿರುದ್ಧ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯಕ್ಕೆ ಅನಧಿಕೃತವಾಗಿ ಗೈರುಹಾಜರಾಗಿ ಅಶಿಸ್ತು ಪ್ರದರ್ಶಿಸಿದ ಕಾರಣದ ಮೇಲೆ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು 1965ರ ನಿಯಮ 6ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡ ದೋಷಾರೋಪಣೆಯನ್ನು ಹೊರಿಸಲಾಗಿತ್ತು.

ದೋಷಾರೋಪಣೆ :

"ಈ ಕಛೇರಿಯ ಆದೇಶ ಸಂ: ಸಿಬ್ಬಂದಿ-1/35/2009, ಓ.ಬಿ. ಸಂಖ್ಯೆ: 171/2009, ದಿನಾಂಕ: 24-02-2009ರಲ್ಲಿ ನಿಮ್ಮನ್ನು ಆಡಳಿತಾತ್ಮಕ ಹಿತದೃಷ್ಟಿಯಿಂದ ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆಯ ಕಾನೂನು ಮತ್ತು ಸುವ್ಯವಸ್ಥೆ ವಿಭಾಗದಿಂದ ಡಿ.ಎಸ್.ಬಿ., ವಿಭಾಗ, ಜಿಲ್ಲಾ ಪೊಲೀಸ್ ಕಛೇರಿ ದಾವಣಗೆರೆಯಲ್ಲಿ ಖಾಲಿ ಇರುವ ಪಿ.ಎಸ್.ಐ. ಹುದ್ದೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಅನ್ಯಸೇವೆಯ ಮೇಲೆ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಿದ್ದು, ಅದರಂತೆ ನೀವು ದಿನಾಂಕ: 25-2-2009 ರಂದು ಕರ್ತವ್ಯಕ್ಕೆ ವರದಿ ಮಾಡಿದಾಗ ಖುದ್ದು, ಪೊಲೀಸ್ ಅಧೀಕ್ಷಕರು, ಚುನಾವಣಾ ದಿನಾಂಕಗಳು ಘೋಷಣೆಯಾಗಿರುವುದರಿಂದ ಡಿ.ಎಸ್.ಬಿ. ವಿಭಾಗದಲ್ಲಿ ಸಾಕಷ್ಟು ಕೆಲಸ ಕಾರ್ಯಗಳಿದ್ದು, ಸದರಿ ಕರ್ತವ್ಯಗಳನ್ನು ಚಾಚೂ ತಪ್ಪದೇ ನಿರ್ವಹಿಸುವಂತೆ ಹಾಗೂ ಯಾವುದೇ ಕಾರಣಕ್ಕೂ ಅನಾವಶ್ಯಕವಾಗಿ ರಜೆಯ ಮೇಲೆ ತೆರಳಬಾರದೆಂದು ಸೂಚಿಸಿದ್ದಾಗ್ಯೂ ದಿನಾಂಕ: 25-2-2009 ರಿಂದ ದಿನಾಂಕ: 08-3-2009ರ ವರೆಗೆ ಕೇವಲ 12 ದಿನಗಳ ಕಾಲ ಸದರಿ ಡಿಎಸ್‌ಬಿ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿ ದಿನಾಂಕ: 09-3-2009 ರಂದು ಈ ಕಛೇರಿಯ ಟಪ್ಪಾಲು ಸ್ವೀಕರಿಸುವ ಶಾಖೆಯಲ್ಲಿ ನೇರವಾಗಿ, ನೀವು ಖಾಯಿಲೆ ರಜೆಯ ಮೇಲೆ ತೆರಳುತ್ತಿರುವುದಾಗಿ ಒಂದು ಮನವಿಯನ್ನು ಸಲ್ಲಿಸಿ, ನಿಯಮಾವಳಿಯಂತೆ ರಜೆಗೆ ಯಾವುದೇ ಅರ್ಜಿಯನ್ನು ಸಲ್ಲಿಸದೇ ಜಿಲ್ಲಾ ಪೊಲೀಸ್ ಕಛೇರಿಯ ಕಟ್ಟಡದಲ್ಲಿಯೇ ಇರುವ ನಿಮ್ಮ ಮೇಲಾಧಿಕಾರಿಗಳಾದ ಪೊಲೀಸ್ ಅಧೀಕ್ಷಕರರಿಗಾಗಲೀ ಅಥವಾ ಪಿ.ಐ.ಡಿ.ಎಸ್.ಬಿ. ರವರಿಗಾಗಲಿ ಯಾವುದೇ ರೀತಿಯ ಮಾಹಿತಿಯನ್ನು ನೀಡದೆ ರಜೆಯ ಮೇಲೆ ತೆರಳುತ್ತಿರುವ ಕುರಿತಾಗಲಿ ಅಥವಾ ಕೇಂದ್ರ ಸ್ಥಾನ ಬಿಡಲು ಯಾವುದೇ ಪೂರ್ವಾನುಮತಿಯನ್ನು ಪಡೆಯದೇ ಹಾಗೂ ನಿಮ್ಮ ಇರುವಿಕೆಯ ಕುರಿತು ನಿಮ್ಮ ಮೇಲಾಧಿಕಾರಿಗಳಿಗೆ ಯಾವುದೇ ಮಾಹಿತಿಯನ್ನು ನೀಡದೆ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದ ಸಮಯದಲ್ಲಿ ಕರ್ತವ್ಯಕ್ಕೆ ಗೈರುಹಾಜರಾಗಿದ್ದಲ್ಲದೇ, ಕೇಂದ್ರ ಸ್ಥಾವನ್ನು ಬಿಟ್ಟು ಬೆಂಗಳೂರಿಗೆ ಹೋಗಿ ಒಬ್ಬ ಜವಾಬ್ದಾರಿಯುತ ಪಿಎಸ್‌ಐ ರಾದ ನೀವು ಕೆ.ಸಿ.ಎಸ್. (ರಜಾ ಮಂಜೂರಾತಿ) ನಿಮವಾವಳಿಗಳನ್ನು ಹಾಗೂ ಮೇಲಾಧಿಕಾರಿಗಳ ಆದೇಶಗಳನ್ನು ಸ್ಪಷ್ಟವಾಗಿ ಉಲ್ಲಂಘಿಸಿ ಶಿಸ್ತಿನ ಇಲಾಖೆಯ ಅಧಿಕಾರಿಗೆ ಸಲ್ಲದ ಅತೀವ ದುರ್ನಡತೆಯನ್ನು ಮತ್ತು ತೀವ್ರ ಅಶಿಸ್ತನ್ನು ಪ್ರದರ್ಶಿಸಿರುತ್ತೀರಿ."

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ಅಧೀಕ್ಷಕರು, ದಾವಣಗೆರೆ, ಇವರು ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ದಿನಾಂಕ: 06-8-2009ರ ಆದೇಶದಲ್ಲಿ ಅರ್ಜಿದಾರ ವಾರ್ಷಿಕ ವೇತನ ಬಡ್ತಿಯನ್ನು ಮುಂದಿನ ವಾರ್ಷಿಕ ವೇತನ ಬಡ್ತಿಗಳಿಗೆ ದಕ್ಕೆಯಾಗದಂತೆ ಆರು ತಿಂಗಳ ಕಾಲ ಮುಂದೂಡಿ, ದಿನಾಂಕ: 09-3-09 ರಿಂದ 20-3-09ರ ವರೆಗಿನ 11 ದಿನಗಳ ಅನಧಿಕೃತ ಗೈರುಹಾಜರಿಯ ಅವಧಿಯನ್ನು ಕೆ.ಸಿ.ಎಸ್.ಆರ್. ನಿಯಮ 106(ಎ) ರೀತ್ಯಾ ವೇತನ ರಹಿತ ರಜೆಯೆಂದು ಪರಿಗಣಿಸಿ ದಿನಾಂಕ: 21-3-09 ರಿಂದ 18-5-09ರ ವರೆಗಿನ 59 ದಿನಗಳ ಅಮಾನತ್ತಿನ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಲಾಗಿದೆ.

ಈ ಆದೇಶದ ವಿರುದ್ಧ ಸಲ್ಲಿಸದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರಿ ಹಾಗೂ ಪೊಲೀಸು ಮಹಾ ನಿರೀಕ್ಷಕರು, ಪೂರ್ವ ವಲಯ, ದಾವಣಗೆರೆ, ಇವರು ಶಿಸ್ತು ಪ್ರಾಧಿಕಾರದ ದಂಡನ ಆದೇಶವನ್ನು ಭಾಗಶಃ ಮಾರ್ಪಡಿಸಿ ಇವರ ಒಂದು ವಾರ್ಷಿಕ ವೇತನ ಬಡ್ತಿಯನ್ನು ಆರು ತಿಂಗಳ ಕಾಲ ಮುಂದೂಡಿರುವುದನ್ನು ದೃಢೀಕರಿಸಿ, ಗೈರು ಹಾಜರಾದ ಅವಧಿ ದಿನಾಂಕ: 09-3-2009 ರಿಂದ 20-3-09 ರವರೆಗಿನ ಅವಧಿಯನ್ನು ಸಂಬಳರಹಿತ ರಜೆ ಎಂದು ಪರಿಗಣಿಸಿ, ಅಮಾನತ್ತಿನ ಅವಧಿಯನ್ನು ಅರ್ಹರಜೆಯೆಂದು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 07-12-2009ರಲ್ಲಿ ಆದೇಶಿಸಿದ್ದಾರೆ

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಹತೆಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಅರ್ಜಿದಾರರಿಗೆ ವಿಧಿಸಿದ ದಂಡನೆಯ ಆರೋಪಕ್ಕೆ

ಅನುಗುಣವಾಗಿಲ್ಲವೆಂದು ಪರಿಗಣಿಸಿ ಈ ಕುರಿತು ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಓದಲಾದ (5)ರ ಪತ್ರದಲ್ಲಿ ಪಡೆದು ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 16 ಪೊಸಿಅ 2010 ಬೆಂಗಳೂರು, ದಿನಾಂಕ 29–10–2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಹೆಚ್.ಎನ್. ಹೊನ್ನಪ್ಪ, ಪಿ.ಎಸ್.ಐ., ವಿನೋಬನಗರ ಪೊಲೀಸ್ ಠಾಣೆ, ಶಿವಮೊಗ್ಗ ನಗರ ಇವರಿಗೆ ಮೇಲ್ಮನವಿ ಪ್ರಾಧಿಕಾರದ ದಿನಾಂಕ: 07–12–09ರ ಆದೇಶದಲ್ಲಿ ವಿಧಿಸಿದ ದಂಡನೆಯನ್ನು ಮಾರ್ಪಡಿಸಿ "ವಾಗ್ದಂಡನೆ"ಯನ್ನು ವಿಧಿಸಲಾಗಿದೆ. ದಿನಾಂಕ 09–3–09 ರಿಂದ 20–3–09 ರವರೆಗಿನ ಅನಧಿಕೃತ ಗೈರು ಹಾಜರಿಯನ್ನು ವೇತನ ರಹಿತ ರಜೆಯೆಂದು ಹಾಗೂ ಅಮಾನತ್ತಿನಲ್ಲಿದ್ದ ಅವಧಿಯನ್ನು ಅಮಾನತ್ತೆಂದೆ ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 2751

LAW, JUSTICE AND HUMAN RIGHTS SECRETARIAT

Sub: First National Judicial Commission Recommendations in respect of employees of subordinate Judiciary- regarding..

Read:
1. Order dated 7/1/98 passed by the Hon'ble Supreme Court of India in W.P. No. 1022/1989 in the matter of All India Judges Association Vs Union of India and others.
2. Order dated 7/10/2009 passed by the Hon'ble Supreme Court of India in W.P. No. 1022/1989 in the matter of All India Judges Association Vs Union of India and others.
3. Letter Nos. LCA 1/220/96 dated 1.3.2006 and 29-6-2010 from the Registrar General of High Court of Karnataka.
4. G.O. No. LAW 128 LAC 2005 Bangalore dated 14th July 2008.

Preamble:

Hon'ble Supreme Court in their Order read at (1) above directed the F.N.J.P.C headed by Justice K. Jagannath Shetty to examine and recommend ways and means to improve the service conditions of the employees of the subordinate courts. The commission has made specific recommendations in respect of each State including Karnataka. The Registrar General. High Court of Karnataka has requested the Government vide his letters read at (3) above for early implementation of the recommendations of the Commission Hon'ble Supreme Court of India has directed implementation of the recommendations of the Shetty Commission to the employees of the sub-ordinate Courts. Further, the Hon'ble Supreme Court by its order dated 26.3.2008 has directed all the States to file affidavits on or before 15-7-2008 indicating the latest stage of implementation. In view of the directions issued by the Supreme Court of India, an affidavit about the implementation of the recommendations of the Shetty Commission has to be filed on or before the 15th July 2008.

The matter was examined by the Government and a G O bearing No LAW 128 LAC 2005 Bangalore dated 14th July 2008 was issued sanctioning certain benefits to the employees of the subordinate judiciary w.e.f. 1/7/2008.

Subsequently The Hon'ble Supreme Court vide its Order dated 7/10/2009 read at sl no. 2 above has ordered for implementation of recommendation of FNJPC w.e.f. 1/4/2003 with a modification regarding sanction of increment. The Registrar General High Court of Karnataka Bangalore vide his letter dated 29-6-2010 has requested for modification of GO read at serial No 4 above in terms of the Orders of Supreme Court.

The matter has been examined by the Government and in partial modification of the said GO read at serial No 4 above the following order is issued.

Government Order No. LAW 128 LAC 2005. Bangalore Dated 29th October, 2010

In the circumstances explained in the preamble and after careful consideration of all the aspects of the matter, Government in partial modification of G.O. No. LAW 128 LAC 2005 Bangalore dated 14th July 2008, sanctions the benefits mentioned in the said G.O. to the employees of the Sub-ordinate Judiciary with effect from 1st April 2003 instead of 1st July 2008.

Further, in partial modification of Para 1(g) of the above said Government Order one additional increment to holders of the following common category posts in the ministerial cadre other than to whom the recommendations were made to higher pay scale is admissible. This Additional increment is admissible to the new entrants and also to those who have reached stagnation.

1. Sheristedar
2. Judgment Writer
3. First Division Assistant

4. Stenographer
5. Senior Typist
6. Typist & Typist-Copyist
7. Second Division Assistant

This Order is issued with the concurrence of Finance Department vide their Note No. FD 36 SRP 2007 dated 30th June 2008 & FD 36 SRP 2010 dated 14-10-2010 and Prl.Secy. Note No. 4551 dated 18-10-2010.

By Order and in the name of the Governor of Karnataka
N. MAHALAKSHMAMMA
Under Secretary to Government
Department of Law, Justice & Human Rights.

P.R. 2752

ಶಿಕ್ಷಣ ಸಚಿವಾಲಯ

ವಿಷಯ : 2010–11ನೇ ಸಾಲಿನಲ್ಲಿ ರಾಜ್ಯ ವಲಯ ಯೋಜನೇತರ ಲೆಕ್ಕ ಶೀರ್ಷಿಕೆಯಡಿ ನಗರ ಪ್ರದೇಶದ ಸರ್ಕಾರಿ ಪ್ರೌಢ ಶಾಲೆಗಳ ಕೊಠಡಿ ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ: ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ರವರ ಪತ್ರ ಸಂಖ್ಯೆ: ಯೋ7:ಪ್ರ ಪ್ರೌ.ಶಾ.ಕೊ.ನಿ.04 (ಯೋಜನೇತರ) 2010–11. ದಿ: 29.05.2010.

ಪ್ರಸ್ತಾವನೆ:

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಓದಲಾದ ಪತ್ರದಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರು, 2010–11ನೇ ಸಾಲಿಗೆ ಯೋಜನೇತರ ಲೆಕ್ಕ ಶೀರ್ಷಿಕೆ 2202–01–053–0–01–132ರಡಿ 794.00 ಲಕ್ಷ ರೂ.ಗಳನ್ನು ಒದಗಿಸಲಾಗಿದ್ದು, ಸದರಿ ಮೊತ್ತದಲ್ಲಿ 2009–10ನೇ ಸಾಲಿಗೆ ಕೈಗೊಂಡು ಅಪೂರ್ಣವಾಗಿರುವ ಕಾಮಗಾರಿಗಳಿಗೆ ಉಳಿಕೆ 297.44 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿ, ಉಳಿಕೆ 496.56 ಲಕ್ಷಗಳಿಗೆ ಮಾತ್ರ ಕಾಮಗಾರಿಯನ್ನು ಕೈಗೆತ್ತಿಕೊಳ್ಳು ಅನುಕೂಲವಾಗುವಂತೆ ಅನುದಾನ ಬಿಡುಗಡೆ ಮಾಡಲು ಸರ್ಕಾರದ ಆದೇಶ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 147: ಯೋಸಕ 2010, ಬೆಂಗಳೂರು, ದಿನಾಂಕ: 14–10–2010
[ಇಡಿ:112:ಸ್ಕೀಮರ (ಯುನಿಕ್) 2010 ದಿನಾಂಕ: 14–10–2010]

2010–11ನೇ ಸಾಲಿಗೆ ಲೆಕ್ಕ ಶೀರ್ಷಿಕೆ 2202–01–053–0–01–132ರಡಿ ಯೋಜನೇತರದಡಿ ಒದಗಿಸಲಾದ 794.00 ಲಕ್ಷ ರೂ.ಗಳಲ್ಲಿ ಏಳುನೂರಾತೊಂಭತ್ತನಾಲ್ಕು ಲಕ್ಷ ರೂಪಾಯಿಗಳು ಮಾತ್ರ] 2009–10ನೇ ಸಾಲಿಗೆ ಬಾಕಿ 297.44 ಲಕ್ಷ ರೂ.ಗಳನ್ನು (ಇನ್ನೂರ ತೊಂಭತ್ತೇಳು ಲಕ್ಷ ನಲವತ್ತನಾಲ್ಕು ಸಾವಿರ ರೂಪಾಯಿಗಳು ಮಾತ್ರ) 2009–10ನೇ ಸಾಲಿನ ಕಾಮಗಾರಿಗಳಿಗೆ ಬದಲಾಯಿಸದೇ ಬಳಸಿಕೊಂಡು ಕಾಮಗಾರಿಗಳನ್ನು ಪೂರ್ಣಗೊಳಿಸಲು ಹಾಗೂ 2010–11ನೇ ಸಾಲಿಗೆ ನಿಗದಿಯಾಗಿರುವ ಹಣದಲ್ಲಿ ಉಳಿಕೆ 496.48 ಲಕ್ಷ ರೂ.ಗಳಲ್ಲಿ [ನಾನೂರಾತೊಂಭತ್ತಾರು ಲಕ್ಷದ ನಲವತ್ತೆಂಟು ಸಾವಿರ ರೂಪಾಯಿಗಳು ಮಾತ್ರ] ಅನುಬಂಧ 2 ರಲ್ಲಿನ ಕಾಮಗಾರಿಗಳನ್ನು ಶಾಲಾ ಅಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿ ಮೂಲಕ ಕೈಗೆತ್ತಿಕೊಳ್ಳಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರಿಗೆ ಅನುಮೋದನೆ ನೀಡಿದೆ.

ಈ ಆದೇಶವನ್ನು ಶಿಕ್ಷಣ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಅನಧಿಕೃತ ಟಿಪ್ಪಣಿ ಸಂಖ್ಯೆ: ಶಿಇ: 1113: ಐ.ಎಫ್.ಎ (ಬಿ&ಎ) 2010 ದಿ: 22.06.2010ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಐ.ಎಫ್. ಮಾಗಿ
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಯೋಜನೆ)

ಸರ್ಕಾರದ ಆದೇಶ ಸಂಖ್ಯೆ: ED/147/Yosaka 2010/ದಿನಾಂಕ 14–10–2010ಕ್ಕೆ
ಅನುಬಂಧ–2

2010–11ನೇ ಸಾಲಿನ ರಾಜ್ಯವಲಯ ಯೋಜನೇತರ ಲೆಕ್ಕಶೀರ್ಷಿಕೆಯಡಿಯಲ್ಲಿ ಸರ್ಕಾರಿ ಪ್ರೌಢಾಲೆಗಳ ಕೊಠಡಿ ನಿರ್ಮಾಣ ಲೆಕ್ಕಶೀರ್ಷಿಕೆ 2202–01–053–0–01–132

ಕ್ರ. ಸಂ.	ಜಿಲ್ಲೆಯ ಹೆಸರು		ಪ್ರೌಢಶಾಲೆಯ ಹೆಸರು	ಕೊಠಡಿಗಳ ಸಂಖ್ಯೆ	ಸಿವಿಲ್ ಕಾಮಗಾರಿ ಅನುದಾನ (ರೂ. ಲಕ್ಷಗಳಲ್ಲಿ)	ಪೀಠೋಪಕರಣ ಅನದಾನ (ರೂ. ಲಕ್ಷಗಳಲ್ಲಿ)	ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ)
1	ದಕ್ಷಿಣ ಕನ್ನಡ	1	ಸರ್ಕರಿ ಪ್ರೌಢ ಶಾಲೆ, ಕೋಣಾಜೆ	5	25.70	3.00	28.70
2	ಬೆಂಗಳೂರು ದಕ್ಷಿಣ ಜಿಲ್ಲೆ	2	ಸರ್ಕಾರಿ ಪ್ರೌಢ ಶಾಲೆ (ಬಾಲಕಿಯರ), ಆನೇಕಲ್	2	10.05	1.20	11.25
		3	ಸರ್ಕಾರಿ ಪ್ರೌಢ ಶಾಲೆ, ದೊಡ್ಡೇರಿ	3	14.85	1.80	16.65
		4	ಸರ್ಕಾರಿ ಪ್ರೌಢ ಶಾಲೆ, ಕೆಂಗೇರಿ ಉಪನಗರ	2	10.05	1.20	11.25

		5	ಸರ್ಕಾರಿ ಪ್ರೌಢ ಶಾಲೆ, ಬೇಗೂರು	2	10.05	1.20	11.25
		6	ಸರ್ಕಾರಿ ಪ್ರೌಢ ಶಾಲೆ, ಯಡಿಯೂರು	2	10.05	1.20	11.25
		7	ಸರ್ಕಾರಿ ಪ್ರೌಢ ಶಾಲೆ, ದೊಡ್ಡಬನಹಳ್ಳಿ	5	25.70	3.00	28.70
		8	ಸರ್ಕಾರಿ ಪ್ರೌಢ ಶಾಲೆ, ಸಬ್‌ಮಂಗಲ	2	10.05	1.20	11.25
		9	ಸರ್ಕಾರಿ ಉರ್ದು ಪ್ರೌಢ ಶಾಲೆ, ಯಲ್ಲಗೊಂಡನಪಾಳ್ಯ	5	25.70	3.00	28.70
		10	ಸರ್ಕಾರಿ ಪ್ರೌಢ ಶಾಲೆ, ಸರ್ಜಾಪುರ	2	10.05	1.20	11.25
3	ಬೆಂಗಳೂರು ಉತ್ತರ ಜಿಲ್ಲೆ	11	ಸರ್ಕಾರಿ ಪ್ರೌಢ ಶಾಲೆ, ಹೆಗ್ಗನಹಳ್ಳಿ	2	10.05	1.20	11.25
		12	ಸರ್ಕಾರಿ ಪ್ರೌಢ ಶಾಲೆ, ರಾಜಾನುಕುಂಟೆ	2	10.05	1.20	11.25
		13	ಸರ್ಕಾರಿ ಪ್ರೌಢ ಶಾಲೆ, ಅಬ್ಬಿಗೆರೆ	2	10.05	1.20	11.25
4	ಬೆಂಗಳೂರು ಗ್ರಾಮಾಂತರ ಜಿಲ್ಲೆ	14	ಸರ್ಕಾರಿ ಪ್ರೌಢ ಶಾಲೆ (ಬಾಲಕರು), ಹೊಸಕೋಟೆ	2	10.05	1.20	11.25
		15	ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲಾ ವಿಭಾಗ) ನೆಲಮಂಗಲ	2	10.05	1.20	11.25
		16	ಸರ್ಕಾರಿ ಪ್ರೌಢ ಶಾಲೆ, ದೊಡ್ಡಬಳ್ಳಾಪುರ	2	10.05	1.20	11.25
5	ರಾಮನಗರ	17	ಸರ್ಕಾರಿ ಪ್ರೌಢ ಶಾಲೆ, ಎಕ್ಸ್ ಮುನಿಸಿಪಲ್, ಕನಕಪುರ	2	10.05	1.20	11.25
6	ಚಿಕ್ಕಬಳ್ಳಾಪುರ	18	ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲಾ ವಿಭಾಗ) ಚಿಕ್ಕಬಳ್ಳಾಪುರ	2	10.05	1.20	11.25
		19	ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲಾ ವಿಭಾಗ) ಗುಡಿಬಂಡೆ	2	10.05	1.20	11.25
		20	ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲಾ ವಿಭಾಗ) ಶಿಡ್ಲಘಟ್ಟ	2	10.05	1.20	11.25
7	ತುಮಕೂರು	21	ಸರ್ಕಾರಿ ಪ್ರೌಢ ಶಾಲೆ, ಕ್ಯಾತಸಂದ್ರ	2	10.05	1.20	11.25
		22	ಸರ್ಕಾರಿ ಪ್ರೌಢ ಶಾಲೆ, ಹನುಮಂತಪುರ	2	10.05	1.20	11.25
		23	ಸರ್ಕಾರಿ ಪದವಿ ಪೂರ್ವ ಕಾಲೇಜು ಬಾಲಕರು (ಪ್ರೌಢ ಶಾಲಾ ವಿಭಾಗ) ತುಮಕೂರು	2	10.05	1.20	11.25
8	ಮಧುಗಿರಿ	24	ಸರ್ಕಾರಿ ಪದಬಿ ಪೂರ್ವ ಕಾಲೇಜು (ಪ್ರೌಢ ಶಾಲಾ ವಿಭಾಗ) ಪಾವಗಡ	2	10.05	1.20	11.25
		25	ಸರ್ಕಾರಿ ಉರ್ದು ಪ್ರೌಢ ಶಾಲೆ, ಎನ್.ಹೆಚ್. 4, ಶಿರಾ	2	10.05	1.20	11.25
		26	ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲಾ ವಿಭಾಗ) ಶಿರಾ	4	1920	2.40	21.60
9	ಚಿತ್ರದುರ್ಗ	27	ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲಾ ವಿಭಾಗ) ಹೊಸದುರ್ಗ	4	1920	2.40	21.60
10	ದಾವಣಗೆರೆ	28	ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲಾ ವಿಭಾಗ ದಾವಣಗೆರೆ	2	10.05	1.20	11.25
		29	ಸರ್ಕಾರಿ ಪ್ರೌಢ ಶಾಲೆ, ಎಸ್.ಬಿ.ಎಸ್.ನಗರ 2ನೇಹಂತ	2	10.05	1.20	11.25
		30	ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲಾ ವಿಭಾಗ) ಮಾಜಿ ಪುರಸಭೆ	2	10.05	1.20	11.25
		31	ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢ ಶಾಲಾ ವಿಭಾಗ) ಹರಿಹರ	2	10.05	1.20	11.25
		32	ಸರ್ಕಾರಿ ಬಾಲಕಿಯರ ಪ್ರೌಢ ಶಾಲೆ, ಹರಪನಹಳ್ಳಿ	2	10.05	1.20	11.25
11	ಶಿರಸಿ, ಶೈಕ್ಷಣಿಕ ಜಿಲ್ಲೆ	33	ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ), ನೀಲಕಣಿ, ಶಿರಸಿ ತಾಲ್ಲೂಕು	2	10.05	1.20	11.25
		34	ಸರ್ಕಾರಿ ಮಾರಿಕಾಂಬ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ), ಶಿರಸಿ	5	25.70	4.43	30.13
12	ಉತ್ತರ ಕನ್ನಡ ಜಿಲ್ಲೆ	35	ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ), ನೆಲ್ಲಿಕೇರಿ, ಕುಮಟಾ ತಾಲ್ಲೂಕು	3	14.85	1.80	16.65
			ಒಟ್ಟು	**88**			**496.48**

ಐ.ಎಫ್. ಮಾಗಿ

ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಯೋಜನೆ)

ಪಿ.ಆರ್. 2753

ಆರ್ಥಿಕ ಸಚಿವಾಲಯ

ವಿಷಯ : ಶ್ರೀ ಹೆಚ್.ಜಿ. ರಾಜಣ್ಣ, ವಾಣಿಜ್ಯ ತೆರಿಗೆ ಅಧಿಕಾರಿ, ಇವರ ವಿರುದ್ಧ ದಾಖಲಾದ ಟ್ರ್ಯಾಪ್ ಪ್ರಕರಣದ ಅಭಿಯೋಜನಾ ಮಂಜೂರಾತಿ ನೀಡುವ ಬಗ್ಗೆ ಪರಿಷ್ಕೃತ ಆದೇಶ

ಓದಲಾಗಿದೆ:
1. ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜಿ)/ಎಂ–25/ಸಿಆರ್–10/2009, ಮಂಗಳೂರು,**ದಿ:**29–07–2010
2. ತನಿಖಾಧಿಕಾರಿಯವರ ವರದಿ ದಿನಾಂಕ:22–04–2010
3. ತನಿಖಾ ದಾಖಲೆಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀಕ್ಷಕರ ವರದಿ, ಸಾಕ್ಷಿದಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳು.
4. ಸರ್ಕಾರಿ ಆದೇಶ ಸಂಖ್ಯೆ: ಆಇ 54 ವಾತೆತ 2009, ದಿನಾಂಕ 24–08–2010.
5. ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪತ್ರ ಸಂಖ್ಯೆ: ಲೋಕ್/ಐಎನ್‌ವಿ(ಜಿ)/ ಎಂ–25/ಸಿಆರ್–10/2009, ಮಂಗಳೂರು, ದಿ:11–10–2010.

ಪ್ರಸ್ತಾವನೆ :

ಶ್ರೀ ಹೆಚ್.ಜಿ. ರಾಜಣ್ಣ, ವಾಣಿಜ್ಯ ತೆರಿಗೆ ಅಧಿಕಾರಿ, ಇವರ ವಿರುದ್ಧ ಗುನ್ನೆ ಸಂಖ್ಯೆ:10/2009ರಲ್ಲಿ ಪೊಲೀಸ್ ನಿರೀಕ್ಷಕರು ಕರ್ನಾಟಕ ಲೋಕಾಯುಕ್ತ, ಮಂಗಳೂರು, ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಪ್ರಕರಣದ ತನಿಖಾಧಿಕಾರಿಯವರ ಅಂತಿಮ ವರದಿ ಮತ್ತು ತನಿಖಾ ದಾಖಲಾತಿಗಳನ್ನು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, (ಪೊಲೀಸ್ ವಿಭಾಗ), ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ಮೇಲೆ ಓದಲಾಗಿರುವ ಕ್ರಮ ಸಂಖ್ಯೆ: (1)ರ ಪತ್ರ ದಿನಾಂಕ 29–07–2010ರೊಡನೆ ಕಳುಹಿಸುತ್ತಾ, ಆಪಾದಿತ ಅಧಿಕಾರಿಯವರನ್ನು ಘನ ನ್ಯಾಯಾಲಯದಲ್ಲಿ ಅಭಿಯೋಜನೆಗೆ ಒಳಪಡಿಸಲು ಲಂಚ ನಿರೋಧಕ ಕಾಯ್ದೆ 1988ರ ಕಲಂ 19(1)(ಬಿ) ರಡಿಯಲ್ಲಿ ಮಂಜೂರಾತಿಗಾಗಿ ಸಕ್ಷಮ ಪ್ರಾಧಿಕಾರವಾದ ಸರ್ಕಾರವನ್ನು ಕೋರಿರುತ್ತಾರೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರು, (ಪೊಲೀಸ್ ವಿಭಾಗ), ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರು ದಿನಾಂಕ: 29–07–2010ರ ಪತ್ರದೊಡನೆ ಕಳುಹಿಸಿಕೊಟ್ಟ ಈ ಕೆಳಕಂಡ ದಾಖಲಾತಿಗಳನ್ನು ಪರಿಶೀಲಿಸಲಾಗಿದೆ.

1)	ಶ್ರೀ ಪದ್ಮನಾಭಗೌಡ, ವಯಸ್ಸು 33 ವರ್ಷ, ತಂದೆ ಪೂವಪ್ಪಗೌಡ, ವಾಸ: ಪದಕ ಮನೆ, ಕಾಂಚನ, ಬಜತ್ತೂರು ಗ್ರಾಮ & ಅಂಚೆ, ಪುತ್ತೂರು ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆ, ರವರ ದೂರು ದಿನಾಂಕ: 03–11–2009
2)	ಪ್ರಥಮ ವರ್ತಮಾನ ವರದಿ: ಮಂಗಳೂರು ಲೋಕಾಯುಕ್ತ ಪೊಲೀಸ್ ಠಾಣೆ ಪ್ರಕರಣದ ಸಂಖ್ಯೆ: 10/2009
3)	ಪ್ರಾಯೋಗಿಕ ಪಂಚನಾಮೆ ದಿನಾಂಕ: 03–11–2009
4)	ಟ್ರ್ಯಾಪ್ ಮಹಜರ್ ದಿನಾಂಕ:03–11–2009
5)	ರಾಸಾಯನಿಕ ಪರೀಕ್ಷಕರ ಪರೀಕ್ಷಣಾ ವರದಿ ಸಂಖ್ಯೆ: ಆರ್‌ಎಸಿಇ/ಲೋಕ್–01/2010–11 ದಿನಾಂಕ:22–01–2010
6)	ಕೃತ್ಯ ನಡೆದ ಸ್ಥಳದ ನಕಾಶೆ:

7) ಸಾಕ್ಷಿ ಹೇಳಿಕೆಗಳ ಪಟ್ಟಿ:

1)	ಶ್ರೀ ಪದ್ಮನಾಭ ಗೌಡ, ಫಿರ್ಯಾದಿ
2)	ಶ್ರೀ ಕೆ. ಸೀತಾರಾಮ, ದ್ವಿ.ದ.ಸ. ತಾಲ್ಲೂಕು ಕಛೇರಿ, ಮಂಗಳೂರು
3)	ಶ್ರೀ ಹರೀಶ್ ಕೆ., ಗ್ರಾಮಕರಣಿಕರು, ಆಹಾರ ವಿಭಾಗ, ತಾಲ್ಲೂಕು ಕಛೇರಿ, ಮಂಗಳೂರು
4)	ಶ್ರೀ ದಿವಾಕರ ಶೆಟ್ಟಿ, ಮಂಗಳೂರು
5)	ಶ್ರೀ ವಿಜಯಕುಮಾರ್, ಖಾಸಗಿ ಅಕೌಂಟೆಂಟ್, ಪುತ್ತೂರು ತಾಲ್ಲೂಕು
6)	ಶ್ರೀ ಅಬ್ಬಾಸ್ ಕೆ., ಖಾಸಗಿ ತೆರಿಗೆ ಸಲಹೆಗಾರರು, ಸೂಳ್ಯ
7)	ಶ್ರೀ ಕೆ.ತಿಮ್ಮಪ್ಪಗೌಡ, ಆರ್ಯಾಪು ಗ್ರಾಮ, ಪುತ್ತೂರು ತಾಲ್ಲೂಕು
8)	ಶ್ರೀಮತಿ ಭಾರತಿ ಬಿ.ಕೆ. ವಾಣಿಜ್ಯ ತೆರಿಗೆ ಪರಿವೀಕ್ಷಕರು, ಪುತ್ತೂರು
9)	ಶ್ರೀ ರಾಮಚಂದ್ರ ಭಟ್, ದ್ವಿ.ದ.ಸ. ವಾಣಿಜ್ಯ ತೆರಿಗೆ ಇಲಾಖೆ, ಪುತ್ತೂರು
10)	ಶ್ರೀಮತಿ ಪಾರ್ವತಿ ರಾವ್, ದ್ವಿ.ದ.ಸ., ವಾಣಿಜ್ಯ ತೆರಿಗೆ ಇಲಾಖೆ, ಪುತ್ತೂರು
11)	ಶ್ರೀ ಅಣ್ಣಪ್ಪ ಬಿ.ಕೆ., ದ್ವಿ.ದ.ಸ., ವಾಣಿಜ್ಯ ತೆರಿಗೆ ಇಲಾಖೆ, ಪುತ್ತೂರು
12)	ಶ್ರೀಮತಿ ವೀಣಾ ಪಿ.ಎಂ., ದ್ವಿ.ದ.ಸ., ವಾಣಿಜ್ಯ ತೆರಿಗೆ ಇಲಾಖೆ, ಪುತ್ತೂರು
13)	ಶ್ರೀ ಕೆ. ಬಾಬು, ಮ್ಯಾನೇಜರ್, ವಾಣಿಜ್ಯ ತೆರಿಗೆ ಇಲಾಖೆ, ಪುತ್ತೂರು
14)	ಶ್ರೀ ಉಮೇಶ, ಗ್ರೂಪ್–ಡಿ, ವಾಣಿಜ್ಯ ತೆರಿಗೆ ಇಲಾಖೆ, ಪುತ್ತೂರು
15)	ಶ್ರೀ ಶಿವರಾಮ, ಫಿರ್ಯಾದುದಾರರ ತಮ್ಮ
16)	ಶ್ರೀ ಚಂದ್ರಶೇಖರಯ್ಯ, ಜೂನಿಯರ್ ಎಂಜಿನಿಯರ್, ಲೋಕೋಪಯೋಗಿ ಇಲಾಖೆ, ಪುತ್ತೂರು ವಿಭಾಗ
17)	ಶ್ರೀ ಶಾಂತಪ್ಪ ಎಂ., ಹೆಡ್ ಕಾನ್‌ಸ್ಟೇಬಲ್, ಲೋಕಾಯುಕ್ತ ಪೊಲೀಸ್ ಠಾಣೆ, ಮಂಗಳೂರು
18)	ಶ್ರೀಮತಿ ಸುಮತಿ, ಮ.ಪಿ.ಸಿ., ಲೋಕಾಯುಕ್ತ ಪೊಲೀಸ್ ಠಾಣೆ, ಮಂಗಳೂರು
19)	ಶ್ರೀ ಲ್ಯೂಕೋಸ್ ಕೆ.ಕೆ., ಪಿ.ಸಿ., ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಮಂಗಳೂರು
20)	ಶ್ರೀ ಶಿವಪ್ರಸಾದ್ ಎಸ್.ವಿ., ಪಿ.ಸಿ., ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಮಂಗಳೂರು

21)	ಶ್ರೀ ಲಕ್ಷ್ಮೀಕಾಂತ, ಪಿ.ಸಿ., ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಮಂಗಳೂರು
22)	ಶ್ರೀ ಸುದರ್ಶನ್, ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಮಂಗಳೂರು
23)	ಶ್ರೀ ಬಾಬು, ಎ.ಪಿ.ಸಿ., ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಮಂಗಳೂರು
24)	ಶ್ರೀ ಶಿವಣ್ಣ ಎ.ಪಿ.ಸಿ., ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆ, ಮಂಗಳೂರು
25)	ಆಪಾದಿತರಾದ ಶ್ರೀ ಹೆಚ್.ಜಿ. ರಾಜಣ್ಣ, ವಾಣಿಜ್ಯ ತೆರಿಗೆ ಅಧಿಕಾರಿ, ಇವರ ಸ್ವ–ಇಚ್ಛಾ ಹೇಳಿಕೆ

ಫಿರ್ಯಾದುದಾರರು ಉಪ್ಪಿನಂಗಡಿಯಲ್ಲಿ ಬಟ್ಟೆ ಅಂಗಡಿ ಇಟ್ಟುಕೊಂಡಿದ್ದು, ಈ ಅಂಗಡಿಯ ಟಿನ್ ನಂಬರಿಗೆ ಉಪ ಶಾಖೆಯಾಗಿ ಟೀ ಪುಡಿ ವ್ಯಾಪಾರ ನಡೆಸಲು ಡೆಲಿವರಿ ನೋಟಿಗೆ ದಿನಾಂಕ 20–10–2009 ರಂದು ಪುತ್ತೂರು ವಾಣಿಜ್ಯ ತೆರಿಗೆ ಕಛೇರಿಗೆ ಅರ್ಜಿ ಹಾಗೂ ಪೂರಕ ದಾಖಲೆಗಳನ್ನು ಸಲ್ಲಿಸಿ, ಡೆಲಿವರಿ ನೋಟಿನ ಬಗ್ಗೆ ಶ್ರೀ ರಾಜಣ್ಣ, ವಾಣಿಜ್ಯ ತೆರಿಗೆ ಅಧಿಕಾರಿ, ಇವರನ್ನು ವಿಚಾರಿಸಿದಾಗ, ಈ ಸಂಬಂಧ ಸದರಿ ಆರೋಪಿ ಶ್ರೀ ರಾಜಣ್ಣ, ವಾಣಿಜ್ಯ ತೆರಿಗೆ ಅಧಿಕಾರಿ, ಇವರು ತಮಗೆ ಮತ್ತು ತಮ್ಮ ಸಿಬ್ಬಂದಿಯವರಿಗೆ ಸೇರಿ ರೂ.1,000–00 ಲಂಚದ ಹಣವನ್ನು ಕೊಡುವಂತೆ ಒತ್ತಾಯಿಸಿದ್ದು, ಫಿರ್ಯಾದಿಗೆ ಲಂಚದ ಹಣ ನೀಡಲು ಇಷ್ಟವಿಲ್ಲದ ಕಾರಣ, ಸದರಿ ಆಪಾದಿತರ ವಿರುದ್ಧ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳುವಂತೆ ಕೋರಿ ದೂರು ಅರ್ಜಿ ಸಲ್ಲಿಸಿರುತ್ತಾರೆ.

ಸದರಿ ದೂರನ್ನು ಆಧರಿಸಿ, ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಮಂಗಳೂರುರವರು ಮೇಲ್ಕಂಡ ಆರೋಪಿತ ವಿರುದ್ಧ ಲಂಚ ನಿರೋಧ ಕಾಯ್ದೆ 1988ರ ಕಲಂ 7, 13(1)(ಡಿ) ಜೊತೆಗೆ 13(2)ರ ಪ್ರಕಾರ ಮಂಗಳೂರು ಲೋಕಾಯುಕ್ತ ಠಾಣೆ ಮೊಕದ್ದಮೆ ಸಂಖ್ಯೆ:10/2009 ರಲ್ಲಿ ಪ್ರಕರಣವನ್ನು ದಾಖಲಿಸಿ, ತನಿಖೆಯನ್ನು ಕೈಗೊಂಡಿರುತ್ತಾರೆ.

ನಂತರ ಪಂಚ ಸಾಕ್ಷಿಗಳೊಂದಿಗೆ ತನಿಖಾಧಿಕಾರಿ ಮತ್ತು ಅವರ ಸಿಬ್ಬಂದಿಯವರು ದಿನಾಂಕ: 03–11–2009ರಂದು ಬೀಸಿದ ಬಲೆಯು ಯಶಸ್ವಿಯಾಗಿದ್ದು, ಆರೋಪಿತ ಸರ್ಕಾರಿ ಅಧಿಕಾರಿಯಾದ ಶ್ರೀ ಹೆಚ್.ಜಿ.ರಾಜಣ್ಣ, ವಾಣಿಜ್ಯ ತೆರಿಗೆ ಅಧಿಕಾರಿ, ಪುತ್ತೂರು ಇವರು ನೆರಳು ಸಾಕ್ಷಿದಾರರ ಸಮಕ್ಷಮ ಫಿರ್ಯಾದುದಾರರಿಂದ ಲಂಚದ ಹಣ ರೂ.1,000–00ನ್ನು ಸ್ವೀಕರಿಸಿ, ಮಂಗಳೂರು ಲೋಕಾಯುಕ್ತ ಪೊಲೀಸರ ಬಲೆಗೆ ಸಿಕ್ಕಿಬಿದ್ದಿರುತ್ತಾರೆ. ಆರೋಪಿತರ ಬಲಗೈ ಬೆರಳುಗಳನ್ನು ತೊಳೆಸಿದ ದ್ರಾವಣ ಬಣ್ಣ ಬದಲಾಗಿ ಆರೋಪಿತರು ಲಂಚದ ಹಣವನ್ನು ಸ್ವೀಕರಿಸಿರುವುದು ದೃಢಪಟ್ಟಿರುತ್ತದೆ. ಲಂಚದ ಹಣವನ್ನು ಆರೋಪಿತರ ಡೈರಿಯ ಮಧ್ಯದಿಂದ ವಶಪಡಿಸಿಕೊಳ್ಳಲಾಗಿದೆ. ನಡೆದ ಘಟನೆಯ ಬಗ್ಗೆ ಫಿರ್ಯಾದಿ ಮತ್ತು ನೆರಳು ಸಾಕ್ಷಿದಾರರು ತಮ್ಮ ಹೇಳಿಕೆಗಳಲ್ಲಿ ದೃಢಪಡಿಸಿರುತ್ತಾರೆ. ಸದರಿ ಆರೋಪಿತರನ್ನು ದಸ್ತಗಿರಿ ಮಾಡಿ, ಘನ ನ್ಯಾಯಾಲಯದ ನ್ಯಾಯಾಧೀಶರ ಮುಂದೆ ಹಾಜರುಪಡಿಸಿರುತ್ತಾರೆ.

ತನಿಖಾ ದಾಖಲೆಗಳಾದ ಫಿರ್ಯಾದು, ಪ್ರಥಮ ವರ್ತಮಾನ ವರದಿ, ಪ್ರಾಯೋಗಿಕ ಪಂಚನಾಮೆ, ಜಪ್ತಿ ಪಂಚನಾಮೆ, ಸ್ವತ್ತುಗಳ ಪಟ್ಟಿ, ರಾಸಾಯನಿಕ ಪರೀಕ್ಷಕರ ವರದಿ, ಕೃತ್ಯನಡೆದ ಸ್ಥಳದ ನಕ್ಷೆ, ಆರೋಪಿತರ ಸೇವಾ ವಿವರಗಳು, ಸಾಕ್ಷಿದಾರರ ಹೇಳಿಕೆಗಳು, ಲಂಚದ ಬೇಡಿಕೆಗೆ ಸಂಬಂಧಪಟ್ಟ ಕಡತಗಳನ್ನು ಪರಿಶೀಲಿಸಲಾಗಿದೆ. ಇದರಿಂದಾಗಿ ಶ್ರೀ ಹೆಚ್.ಜಿ. ರಾಜಣ್ಣ, ವಾಣಿಜ್ಯ ತೆರಿಗೆ ಅಧಿಕಾರಿ, ಇವರ ಮೇಲಿನ ಆರೋಪವು ಮೇಲ್ನೋಟಕ್ಕೆ ಸಾಬೀತಾಗಿರುವುದು ಕಂಡುಬರುತ್ತದೆ.

ಈ ಎಲ್ಲಾ ಕಾರಣಗಳಿಂದ ಆಪಾದಿತರು ಲಂಚ ನಿರೋಧ ಕಾಯ್ದೆ 1988ರ ಕಲಂ 7,13(1)(ಡಿ)ರ ಜೊತೆಗೆ ಓದಲಾದ ಕಲಂ 13(2)ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುವುದು ಮೇಲ್ನೋಟಕ್ಕೆ ಸಂಪೂರ್ಣವಾಗಿ ಮನವರಿಕೆಯಾಗಿದೆ. ಆದ್ದರಿಂದ ಇವರನ್ನು ಲಂಚ ನಿರೋಧ ಕಾಯ್ದೆ 7,13(1)(ಡಿ)ರ ಜೊತೆಗೆ ಓದಲಾದ ಕಲಂ 13(2)ರ ಅಡಿಯಲ್ಲಿ ಅಭಿಯೋಜನೆಗೆ ಒಳಪಡಿಸಿರುವುದು ಅವಶ್ಯವೆಂದು ಸರ್ಕಾರಕ್ಕೆ ಮನವರಿಕೆಯಾಗಿರುತ್ತದೆ. ಅದರಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (4)ರ ಸರ್ಕಾರಿ ಆದೇಶವನ್ನು ಹೊರಡಿಸಲಾಗಿತ್ತು.

ಮೇಲೆ ಓದಲಾಗಿರುವ ಕ್ರಮ ಸಂಖ್ಯೆ: (5)ರ ಅಪರ ಪೊಲೀಸ್ ಮಹಾನಿರ್ದೇಶಕರ ಪತ್ರ ದಿನಾಂಕ: 11–10–2010ರಲ್ಲಿನ ಶಿಫಾರಸ್ಸಿನ ಮೇರೆಗೆ ಪರಿಷ್ಕೃತ ಅಭಿಯೋಜನಾ ಮಂಜೂರಾತಿ ಹೊರಡಿಸುವ ಅನಿವಾರ್ಯತೆ ಉಂಟಾಗಿರುತ್ತದೆ.

ಸಕ್ಷಮ ಪ್ರಾಧಿಕಾರವಾದ ಸರ್ಕಾರವು ಆಪಾದಿತ ಅಧಿಕಾರಿಯನ್ನು ಕೆಲಸದಿಂದ ತೆಗೆದುಹಾಕುವ ಅಧಿಕಾರವನ್ನು ಹೊಂದಿರುತ್ತದೆ. ಆದ್ದರಿಂದ ಲಂಚ ನಿರೋಧ ಕಾಯ್ದೆ 1988ರ ಕಲಂ 19(1)(ಬಿ) ರಡಿಯಲ್ಲಿ ಆಪಾದಿತ ಅಧಿಕಾರಿಯಾದ ಶ್ರೀ ಹೆಚ್.ಜಿ. ರಾಜಣ್ಣ, ವಾಣಿಜ್ಯ ತೆರಿಗೆ ಅಧಿಕಾರಿಯನ್ನು ಲಂಚ ನಿರೋಧ ಕಾಯ್ದೆ 1988ರ ಕಲಂ 7 ಮತ್ತು 13(1)(ಡಿ) ಜೊತೆಗೆ 13(2) ರಡಿಯಲ್ಲಿ ಅಭಿಯೋಜನೆಗೆ ಒಳಪಡಿಸಲು ಮಂಜೂರಾತಿ ನೀಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಪರಿಷ್ಕೃತ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಅಇ 54 ವಾತೆತ 2009, ಬೆಂಗಳೂರು, ದಿನಾಂಕ: 27ನೇ ಅಕ್ಟೋಬರ್ 2010.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಮೇರೆಗೆ ಲಂಚ ನಿರೋಧಕ ಕಾಯ್ದೆ 1988ರ ಕಲಂ 19(1)(ಬಿ) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಎಂ.ಆರ್. ಚಂದ್ರಶೇಖರಾರಾಧ್ಯ, ಪೀಠಾಧಿಕಾರಿ, ಆರ್ಥಿಕ ಇಲಾಖೆ, ವಾಣಿಜ್ಯ ತೆರಿಗೆ–2 ಶಾಖೆ ಆದ ನಾನು ಆಪಾದಿತ ಅಧಿಕಾರಿಯಾದ ಶ್ರೀ ಹೆಚ್.ಜಿ. ರಾಜಣ್ಣ, ವಾಣಿಜ್ಯ ತೆರಿಗೆ ಅಧಿಕಾರಿ, ಇವರನ್ನು ಲಂಚ ನಿರೋಧಕ ಕಾಯ್ದೆ 1988ರ ಕಲಂ 7, 13(1)(ಡಿ) ಜೊತೆಯಲ್ಲಿ ಓದಲಾದ ಕಲಂ 13(2) ರಡಿಯಲ್ಲಿ ಎಸಗಿರುವ ಅಪರಾಧಕ್ಕಾಗಿ ಅಭಿಯೋಜಿಸಲು ಲೋಕಾಯುಕ್ತ ಪೊಲೀಸರಿಗೆ ಈ ಮೂಲಕ ಅನುಮತಿ ನೀಡಿದೆ.

ಕರ್ನಾಟಕ ಸರ್ಕಾರದ (ವ್ಯವಹಾರ ನಿರ್ವಹಣೆ) ನಿಯಮಗಳು, 1977ರ ನಿಯಮ 18ರ ಪ್ರಕಾರ, ಈ ಆದೇಶವನ್ನು ನನ್ನ ಕಛೇರಿಯ ಮೊಹರು ಮತ್ತು ಸಹಿಯ ಅಡಿಯಲ್ಲಿ ದಿನಾಂಕ:27–10–2010 ರಂದು ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.2754

ಎಂ. ಆರ್. ಚಂದ್ರಶೇಖರಾರಾಧ್ಯ

ಪೀಠಾಧಿಕಾರಿ,

ಆರ್ಥಿಕ ಇಲಾಖೆ (ವಾಣಿಜ್ಯ ತೆರಿಗೆ–2)

ಶಿಕ್ಷಣ ಸಚಿವಾಲಯ

ವಿಷಯ : ಡಿಪ್ಲೋಮಾ ಪ್ರವೇಶಕ್ಕೆ ಕನಿಷ್ಠ ವಿದ್ಯಾರ್ಹತೆಯಲ್ಲಿನ ಅಂಕಗಳನ್ನು ಪರಿಷ್ಕರಿಸಿ ಮಾರ್ಪಾಡು ಮಾಡುವ ಕುರಿತು.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಇಡಿ 246 ಟಿಪಿಇ 2003, ದಿನಾಂಕ:30–12–2003
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ:ಡಿಟಿಇ 153 ಎಸಿಎಂ(2), 2004/3978, ದಿನಾಂಕ:03–03–2005.
3. ಸರ್ಕಾರಿ ಆದೇಶ ಸಂಖ್ಯೆ: ಇಡಿ 106 ಟಿಪಿಇ 2005, ದಿನಾಂಕ:6–5–2005
4. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ: ಡಿಟಿಇ 21 ಎಸಿಎಂ (2) 2009/846, ದಿನಾಂಕ:26–06–2009
5. ಸರ್ಕಾರಿ ಪತ್ರ ಸಂಖ್ಯೆ: ಇಡಿ 114 ಟಿಪಿಇ 2009, ದಿನಾಂಕ:10–07–2009
6. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ: ಡಿಟಿಇ 146 ಎಸಿಎಂ (2) 2009–10/5258, ದಿನಾಂಕ:5/6–3–2010
7. ಸರ್ಕಾರಿ ಪತ್ರ ಸಂಖ್ಯೆ: ಇಡಿ 133 ಟಿಪಿಇ 2010, ದಿನಾಂಕ:21–05–2010
8. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ: ಡಿಟಿಇ 146 ಎಸಿಎಂ (2) 2009–10, ದಿನಾಂಕ:28–06–2010.
9. ಸರ್ಕಾರಿ ಪತ್ರ ಸಂಖ್ಯೆ: ಇಡಿ 206 ಟಿಪಿಇ 2010, ದಿನಾಂಕ:31–07–2010
10. ರಾಜ್ಯದಲ್ಲಿನ ಅನುದಾನಿತ/ಖಾಸಗಿ ಪಾಲಿಟೆಕ್ನಿಕ್ ಸಂಸ್ಥೆಗಳ ಮನವಿಗಳು

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ತಾಂತ್ರಿಕ ಶಿಕ್ಷಣ ಗುಣಮಟ್ಟದ ಹಿತದೃಷ್ಟಿಯಿಂದ ಪ್ರಥಮ ವರ್ಷದ ಡಿಪ್ಲೊಮಾ ಪ್ರವೇಶಕ್ಕೆ 2004–05ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ ಸರ್ಕಾರಿ ಆದೇಶ ಸಂಖ್ಯೆ: ಇಡಿ 98 ಟಿಪಿಇ 2003, ದಿನಾಂಕ: 30–05–2003ನ್ನು ಭಾಗಶ: ಮಾರ್ಪಡಿಸಿ ವಿದ್ಯಾರ್ಹತೆಯನ್ನು ನಿಗದಿಪಡಿಸಲಾಗಿತ್ತು.

ಮೇಲೆ (2)ರಲ್ಲಿ ಓದಲಾದ ದಿನಾಂಕ 3–3–2005ರ ಪತ್ರದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಸರ್ಕಾರದ ಆದೇಶ ಸಂಖ್ಯೆ: ಇಡಿ 246 ಟಿಪಿಇ 2003, ದಿನಾಂಕ 30–12–2003ರ ಆದೇಶದಲ್ಲಿ ಡಿಪ್ಲೊಮಾ ಇಂಜಿನಿಯರಿಂಗ್ ಕೋರ್ಸುಗಳಿಗೆ ಕನಿಷ್ಠ ವಿದ್ಯಾರ್ಹತೆಯನ್ನು ಮಾರ್ಪಡಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ (3) ರಲ್ಲಿ ಓದಲಾದ ಸರ್ಕಾರಿ ಆದೇಶ ದಿನಾಂಕ 6–5–2005ರ ಆದೇಶದಲ್ಲಿ ಡಿಪ್ಲೊಮಾ ಪ್ರವೇಶಾರ್ಹತೆಯಲ್ಲಿ ಒಂದು ಕನಿಷ್ಠ ಮಟ್ಟವನ್ನು ಕಾಯ್ದಿರಿಸುವ ನಿಟ್ಟಿನಲ್ಲಿ ಹಾಗೂ ಅರ್ಹತಾ ಪ್ರಮಾಣ ಪತ್ರಗಳನ್ನು ವಿತರಿಸುವ ಸಮಯದಲ್ಲಿ ಉಂಟಾಗುತ್ತಿರುವ ಸಮಸ್ಯೆಗಳನ್ನು ನಿವಾರಿಸುವ ದೃಷ್ಠಿಯಿಂದ ಡಿಪ್ಲೊಮಾ ವ್ಯಾಸಂಗಕ್ಕಾಗಿ ಪ್ರವೇಶ ಪಡೆಯುವ ಅಭ್ಯರ್ಥಿಗಳಿಗೆ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವುದಲ್ಲದೆ ಗಣಿತ ಮತ್ತು ವಿಜ್ಞಾನ ವಿಷಯಗಳೆರಡರಲ್ಲೂ ಕನಿಷ್ಠ 35 ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕೆಂಬ ವಿದ್ಯಾರ್ಹತೆಯನ್ನು ನಿಗದಿಪಡಿಸಲಾಗಿತ್ತು.

ಮೇಲೆ (4) ರಲ್ಲಿ ಓದಲಾದ ದಿನಾಂಕ 26–06–2009ರ ಪತ್ರದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ರಾಜ್ಯದ ಪಾಲಿಟೆಕ್ನಿಕ್‌ಗಳಲ್ಲಿ ಡಿಪ್ಲೊಮಾ ವ್ಯಾಸಂಗಕ್ಕಾಗಿ ಪ್ರವೇಶ ಪಡೆಯುವ ಅಭ್ಯರ್ಥಿಗಳಿಗೆ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ವಿದ್ಯಾರ್ಹತೆಯಲ್ಲಿ ಅಂದರೆ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಶೇಕಡ 35 ಅಂಕಗಳನ್ನು ಪಡೆದಿರಬೇಕೆಂಬುದನ್ನು ಸಡಿಲಿಸಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ (5)ರಲ್ಲಿ ಓದಲಾದ ದಿನಾಂಕ 10–07–2009ರ ಸರ್ಕಾರದ ಪತ್ರದಲ್ಲಿ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಗಣಿತ ಮತ್ತು ವಿಜ್ಞಾನ ಪ್ರತಿ ವಿಷಯಗಳಲ್ಲಿ ಕನಿಷ್ಠ 35 ಅಂಕಗಳನ್ನು ಪಡೆದಿರಬೇಕೆಂದು ನಿಗದಿಪಡಿಸಿರುವುದನ್ನು ಪರಿಶಿಷ್ಠ ಜಾತಿ/ಪರಿಶಿಷ್ಠ ವರ್ಗದ ವಿದ್ಯಾರ್ಥಿಗಳನ್ನೊಳಗೊಂಡಂತೆ ಎಲ್ಲಾ ವರ್ಗ ವಿದ್ಯಾರ್ಥಿಗಳನ್ನೊಳಗೊಂಡಂತೆ 2009–10ನೇ ಶೈಕ್ಷಣಿಕ ಸಾಲಿಗೆ ಅನ್ವಯವಾಗುವಂತೆ ಗಣಿತ ಮತ್ತು ವಿಜ್ಞಾನ ವಿಷಯಗಳ ಅಂಕಗಳನ್ನು ಪರಿಷ್ಕರಿಸಿ ಸರಾಸರಿ ಶೇಕಡಾವಾರು 70 ಅಂಕಗಳಿಗೆ ನಿಗದಿಪಡಿಸಲಾಗಿತ್ತು.

ಮೇಲೆ (6)ರಲ್ಲಿ ಓದಲಾದ ದಿನಾಂಕ 5/6–03–2010ರ ಪತ್ರದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಪತ್ರವನ್ನು ಬರೆದು ಒಟ್ಟಾರೆ ಕನಿಷ್ಠ ಶೇಕಡವಾರು ಅಂಕಗಳಲ್ಲಿ ಸರಾಸರಿ ಅಂಕಗಳನ್ನು ಮಾತ್ರ ಗಣನೆಗೆ ತೆಗೆದುಕೊಂಡು ತಾಂತ್ರಿಕ ಶಿಕ್ಷಣ ಗುಣಮಟ್ಟವನ್ನು ಹೆಚ್ಚಿಸುವ ದೃಷ್ಠಿಯಿಂದ ಡಿಪ್ಲೊಮಾ ಪ್ರವೇಶಕ್ಕೆ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣತೆಯ ಜೊತೆಗೆ ಗಣಿತ ಮತ್ತು ವಿಜ್ಞಾನ ವಿಷಯಗಳನ್ನು ವ್ಯಾಸಂಗ ಮಾಡಿ ಕಡ್ಡಾಯವಾಗಿ ಶೇಕಡ 35 ಅಂಕಗಳೊಂದಿಗೆ ಉತ್ತೀರ್ಣರಾಗಿ ಎರಡೂ ವಿಷಯಗಳನ್ನು ಸೇರಿ ಕನಿಷ್ಠ ಶೇಕಡ 40 ರಷ್ಟು ಅಂಕಗಳನ್ನು ಪಡೆದಿರಬೇಕು (ಗ್ರೇಸ್ ಅಂಕಗಳನ್ನು ಹೊರತುಪಡಿಸಿ) ಎಂದು ಪರಿಷ್ಕರಿಸಲು ಪ್ರಸ್ತಾವನೆಯನ್ನು ಸಲ್ಲಿಸಿದ್ದರು.

ಮೇಲೆ (7)ರಲ್ಲಿ ಓದಲಾದ ದಿನಾಂಕ 10–07–2009ರ ಸರ್ಕಾರದ ಪತ್ರದಲ್ಲಿ ಡಿಪ್ಲೊಮಾ ವ್ಯಾಸಂಗಕ್ಕಾಗಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಇಡಿ 106 ಟಿಪಿಇ 2005, ದಿನಾಂಕ:6–5–2005ರಲ್ಲಿ ನಿಗದಿಪಡಿಸಿರುವ ಕನಿಷ್ಠ ವಿದ್ಯಾರ್ಹತೆಯನ್ನು 2010–11ನೇ ಸಾಲಿಗೆ ಮುಂದುವರೆಸಲು ತಿಳಿಸಲಾಗಿತ್ತು.

ಮೇಲೆ (8)ರಲ್ಲಿ ಓದಲಾದ ದಿನಾಂಕ 28–06–2010ರ ಪತ್ರದಲ್ಲಿ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಕರ್ನಾಟಕ ಅನುದಾನರಹಿತ ಖಾಸಗಿ ಪಾಲಿಟೆಕ್ನಿಕ್ ಒಕ್ಕೂಟ, ಖಾಸಗಿ ಪಾಲಿಟೆಕ್ನಿಕ್ ಪ್ರಾಂಶುಪಾಲರುಗಳ ಮನವಿ ಪತ್ರ ಹಾಗೂ ಇತರೆ ಗಣ್ಯರ ಮನವಿ ಪತ್ರಗಳಲ್ಲಿನ ಕೋರಿಕೆಯಂತೆ ತಾಂತ್ರಿಕ ಶಿಕ್ಷಣ ಗುಣಮಟ್ಟಕ್ಕೆ ಅಡಚಣೆಯಾಗದಂತೆ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ, ಹಿಂದುಳಿದ ಹಾಗೂ ಗ್ರಾಮೀಣ ಅಭ್ಯರ್ಥಿಗಳಿಗೆ ತಾಂತ್ರಿಕ

ಶಿಕ್ಷಣವನ್ನು ವಿಸ್ತರಿಸುವ ದೃಷ್ಟಿಯಿಂದ ಡಿಪ್ಲೊಮಾ ಪ್ರವೇಶಕ್ಕೆ ಇರುವ ಪ್ರವೇಶಾರ್ಹತೆಯಲ್ಲಿನ ಕನಿಷ್ಠ ಅಂಕಗಳನ್ನು ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೂ ಅನ್ವಯವಾಗುವಂತೆ ಪರಿಷ್ಕರಿಸಲು ಪ್ರಸ್ತಾವನೆಯನ್ನು ಸಲ್ಲಿಸಿದ್ದರು.

ಮೇಲೆ (9)ರಲ್ಲಿ ಓದಲಾದ ದಿನಾಂಕ 31–07–2010ರ ಸರ್ಕಾರದ ಪತ್ರದಲ್ಲಿ ಡಿಪ್ಲೊಮಾ ವ್ಯಾಸಂಗಕ್ಕಾಗಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಇಡಿ 106 ಟಿಪಿಇ 2005, ದಿನಾಂಕ 6–5–2005ರಲ್ಲಿ ನಿಗದಿಪಡಿಸಿರುವ ಕನಿಷ್ಠ ವಿದ್ಯಾರ್ಹತೆಯನ್ನು 2010–11ನೇ ಸಾಲಿಗೆ ಮುಂದುವರೆಸಲು ಪುನಃ ತಿಳಿಸಲಾಗಿತ್ತು.

ಮೇಲೆ (10)ರಲ್ಲಿ ಓದಲಾದ ಮನವಿಗಳಲ್ಲಿ 2010–11ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಫಲಿತಾಂಶ ಇಳಿಮುಖವಾಗಿದ್ದು ಅದರಲ್ಲೂ ಗ್ರಾಮೀಣ ಪ್ರವೇಶ ಹಾಗೂ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ವಿದ್ಯಾರ್ಥಿಗಳು ಗಣಿತ ಹಾಗೂ ವಿಜ್ಞಾನ ವಿಷಯಗಳಲ್ಲಿ 35 ಅಂಕಗಳಿಗಿಂತ ಕಡಿಮೆ ಅಂಕ ಪಡೆದಿದ್ದು ಇತರೆ ವಿಷಯಗಳಲ್ಲಿ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾಗಿರುವುದಾಗಿಯೂ ಅಲ್ಲದೆ ಖಾಸಗಿ ಪಾಲಿಟೆಕ್ನಿಕ್‌ಗಳಲ್ಲಿ ಪ್ರವೇಶ ಸಂಖ್ಯೆ ಇಳಿಮುಖವಾಗಿರುವ ಹಿನ್ನೆಲೆಯಲ್ಲಿ ಹಲವು ಪಾಲಿಟೆಕ್ನಿಕ್‌ಗಳು ಕಳೆದ ಸಾಲಿನಲ್ಲಿ ಅನುಮತಿಸಿರುವಂತೆ ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ ಸರಾಸರಿ 70 ಅಂಕಗಳನ್ನು ಪಡೆದವರನ್ನು ಪ್ರವೇಶಾತಿ ಮಾಡಿಕೊಂಡಿರುವುದಾಗಿ ತಿಳಿಸಿ ಮಾನವೀಯತೆಯ ನೆಲೆಯಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿಗೆ ಅನುಕೂಲ ಮಾಡಿಕೊಡಲು ಮನವಿಯನ್ನು ಸಲ್ಲಿಸಿದ್ದರು.

ಈ ಬಗ್ಗೆ ಪರಿಶೀಲಿಸಿ ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 206 ಟಿಪಿಇ 2010 ಬೆಂಗಳೂರು, ದಿನಾಂಕ: 28ನೇ ಅಕ್ಟೋಬರ್ 2010

ಮೇಲಿನ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ರಾಜ್ಯದಲ್ಲಿನ ಗ್ರಾಮೀಣ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳನ್ನೊಳಗೊಂಡಂತೆ ಎಲ್ಲಾ ವರ್ಗದ ವಿದ್ಯಾರ್ಥಿಗಳು ಡಿಪ್ಲೊಮಾ ಕೋರ್ಸುಗಳ ಪ್ರವೇಶಾರ್ಹತೆಯಲ್ಲಿನ ಅಂಕಗಳಲ್ಲಿ ಈ ಕೆಳಕಂಡಂತೆ ಪರಿಷ್ಕರಣೆ ಮಾಡಿ 2010–11ನೇ ಶೈಕ್ಷಣಿಕ ಸಾಲಿನಿಂದಲೇ ಜಾರಿಗೆ ಬರುವಂತೆ ಸರ್ಕಾರವು ಆದೇಶಿಸಿದೆ.

ಕೋರ್ಸು	ಪ್ರಸ್ತುತ ಜಾರಿಯಲ್ಲಿರುವ ವಿದ್ಯಾರ್ಹತೆ	ಮಾರ್ಪಾಡು ಮಾಡಿರುವ ವಿದ್ಯಾರ್ಹತೆ
ಡಿಪ್ಲೊಮಾ ಇಂಜಿನಿಯರಿಂಗ್ ಕೋರ್ಸು	<u>ಎಲ್ಲಾ ವರ್ಗದ ಅಭ್ಯರ್ಥಿಗಳಿಗೆ ಅನ್ವಯವಾಗುವಂತೆ</u> ಕರ್ನಾಟಕ ಅಥವಾ ಇತರೆ ರಾಜ್ಯದ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವುದಲ್ಲದೆ ಕೆಳಕಂಡ ಪ್ರತಿ ವಿಷಯಗಳಲ್ಲೂ ಸಹ ಕನಿಷ್ಠ 35 ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು 1. ಗಣಿತ 2. ವಿಜ್ಞಾನ	<u>ಎಲ್ಲಾ ವರ್ಗದ ವಿದ್ಯಾರ್ಥಿಗಳಿಗೆ ಅನ್ವಯವಾಗುವಂತೆ</u> ಕರ್ನಾಟಕ ಅಥವಾ ಇತರೆ ರಾಜ್ಯದ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಕನಿಷ್ಠ ಒಟ್ಟು 70 ಅಂಕಗಳನ್ನು ಪಡೆದು ಉತ್ತೀರ್ಣರಾಗಿರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್.2755

ಬಿ.ಎನ್. ಜಗದೀಶ್
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : 2010–11ನೇ ಶೈಕ್ಷಣಿಕ ಸಾಲಿಗೆ ರಾಜ್ಯದಲ್ಲಿನ 01 ಅನುದಾನಿತ ಮತ್ತು 01 ಅನುದಾನರಹಿತ (ಒಟ್ಟು 02) ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಕ್ಕೆ ಸೀಟ್ ಮ್ಯಾಟ್ರಿಕ್ಸ್ ಹಾಗೂ ರೋಸ್ಟರ್ ಪಾಯಿಂಟ್ಸ್‌ಗಳನ್ನು ನಿಗದಿಗೊಳಿಸುವ ಬಗ್ಗೆ.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ: ಆಕುಕ 107 ಪಿಟಿಡಿ 2010, ದಿನಾಂಕ:23–09–2010
2. ನಿರ್ದೇಶಕರು, ಆಯುಷ್ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ: ಆಯುಷ್/80/ಅಭಿವೃದ್ಧಿ(1)/2009–10, ದಿನಾಂಕ:25–09–2010

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿನ ಸರ್ಕಾರಿ ಆದೇಶದಲ್ಲಿ, 2010–11ನೇ ಸಾಲಿನಲ್ಲಿ ರಾಜ್ಯದ 03 ಸರ್ಕಾರಿ/03ಅನುದಾನಿತ ಹಾಗೂ 05 ಅನುದಾನರಹಿತ (ಒಟ್ಟು 11) ಆಯುರ್ವೇದ ಮಹಾವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಸೀಟ್ ಮ್ಯಾಟ್ರಿಕ್ಸ್‌ನ್ನು ನಿಗದಿಪಡಿಸಿ ಆದೇಶಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ರಲ್ಲಿನ ಆಯುಷ್ ನಿರ್ದೇಶಕರ ಪ್ರಸ್ತಾವನೆಯಲ್ಲಿ ಕೇಂದ್ರ ಸರ್ಕಾರವು ರಾಜ್ಯದಲ್ಲಿನ 01 ಅನುದಾನಿತ–ಬಿ.ಎಂ.ಕೆ. ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಬೆಳಗಾಂ ಮತ್ತು 01 ಅನುದಾನರಹಿತ–ಎಸ್.ಡಿ.ಎಂ. ಆಯುರ್ವೇದ ವೈದ್ಯಕೀಯ ಮಾಹಾವಿದ್ಯಾಲಯ, ಹಾಸನ ಈ ಮಹಾವಿದ್ಯಾಲಯಗಳಿಗೆ ಪ್ರಸಕ್ತ ಸಾಲಿಗೆ ಮಾನ್ಯತೆ ನೀಡಿದ್ದು, ಸದರಿ ಮಹಾವಿದ್ಯಾಲಯಗಳಲ್ಲಿ ಲಭ್ಯವಿರುವ ತಜ್ಞತೆಗಳ ಸೀಟುಗಳ ಪಟ್ಟಿಯನ್ನು ಪ್ರವೇಶ ಸಂಖ್ಯೆಯೊಂದಿಗೆ ಕಳುಹಿಸಿ, 2010–11ನೇ ಶೈಕ್ಷಣಿಕ ಸಾಲಿಗೆ ಮೇಲಿನ 02 ಮಹಾವಿದ್ಯಾಲಯಗಳಲ್ಲಿ ಸೀಟ್ ಮ್ಯಾಟ್ರಿಕ್ಸ್ ಹಾಗೂ ರೋಸ್ಟರ್ ಪಾಯಿಂಟ್ಸ್‌ಗಳನ್ನು ಅನುಬಂಧ–1 ಮತ್ತು 2 ರಲ್ಲಿಯೂ ನಿಗದಿಗೊಳಿಸಿ ಆದೇಶ ಹೊರಡಿಸುವಂತೆ ಶಿಫಾರಸ್ಸು ಮಾಡಿದ್ದಾರೆ.

ಸರ್ಕಾರವು ಈ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 107 ಪಿಟಿಡಿ 2010 ಬೆಂಗಳೂರು, ದಿನಾಂಕ: 27ನೇ ಸೆಪ್ಟೆಂಬರ್ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಯಲ್ಲಿ, 2010–11ನೇ ಸಾಲಿನ ರಾಜ್ಯದಲ್ಲಿನ 01 ಅನುದಾನಿತ–ಬಿ.ಎಂ.ಕೆ. ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಬೆಳಗಾಂ ಮತ್ತು 01 ಅನುದಾನರಹಿತ–ಎಸ್.ಡಿ.ಎಂ. ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಹಾಸನ ಈ

ಮಹಾವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಸೀಟ್ ಮ್ಯಾಟ್ರಿಕ್ಸ್ ಹಾಗೂ ರೋಸ್ಟರ್ ಪಾಯಿಂಟ್ಸ್‌ಗಳನ್ನು ಈ ಕೆಳಕಂಡ ಅನುಬಂಧಗಳಲ್ಲಿ ವಿವರಿಸಿದಂತೆ ನಿಗದಿಪಡಿಸಿ ಆದೇಶಿದೆ.

ಅನುಬಂಧ–I – ಆಯುರ್ವೇದ ಕಾಲೇಜುಗಳಲ್ಲಿ ಲಭ್ಯವಿರುವ ಸೀಟುಗಳ ವಿವರ

ಅನುಬಂಧ– II – ರೋಸ್ಟರ್ ಬಿಂದುಗಳ ವರ್ಗೀಕರಣ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಆರ್.ಎಸ್. ಇಟಗಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
(ಭಾರತೀಯ ವೈದ್ಯ ಪದ್ಧತಿ)

ANNEXURE-I

STATEMENT SHOWING THE POST GRADUATE SEATS IN AIDED/UN-AIDED PRIVATE AYURVEDIC MEDICAL COLLEGES FOR THE ACADEMIC YEAR 2010-11

SL.No.	SUBJECT	BMK AMC BELGAUM			SDM AMC HASSAN		
1	2	3			4		
		TS	MS	GS	TS	MS	GS
1	DRAVYAGUNA	5	4	1	0	0	0
2	PANCHAKARMA	0	0	0	4	3	1
3	SHALYATANTRA	0	0	0	5	4	1
4	KAYACHIKITSA	0	0	0	0	0	0
5	SHALAKYATANTRA	0	0	0	4	3	1
6	RASASHASTRA	5	4	1	0	0	0
7	AYURVEDASIDDHANTA	0	0	0	0	0	0
8	RACHANA SHAREERA	0	0	0	0	0	0
9	ROGA NIDHANA	0	0	0	0	0	0
10	BHAISHAJYA KALPANA	0	0	0	0	0	0
11	PRASOOTI TANTRA	0	0	0	0	0	0
12	SWASTHA VRITHA	0	0	0	4	3	1
13	SAMHITHA	0	0	0	0	0	0
14	KAUMARA BHRITYA	0	0	0	5	4	1
15	BASIC PRINCIPLES	0	0	0	0	0	0
16	MANASA ROGA	0	0	0	2	2	0
	TOTAL	**10**	**8**	**2**	**24**	**19**	**5**

NOTE:TS;TOTAL SEATS / MS : MANAGEMENT SEATS /
GS: GOVERNMENT SEATS

R.S. ITAGI
Under Secretary to Government
Health and Family Welfare Department

ANNEXURE-II

Statement showing the details of seats available for candidates who are born in Karnataka & obtained degree in Karnataka & classification of roaster points as per Govt. Order No. DPAR/8/SAHI/MA/95, Dated 20-06-1995 During the academic year 2010-11 in respect of Post Graduate Course in AYURVEDA

Sl.No.	Subjects	Seats available for candidate who are born and obtained degree in Karnataka	Last roaster point of 2009-10	Roaster point of 2010-11	Name of the colleges & No. of seats available	Remarks
01	02	03	04	05	06	07
1.	DRAVYAGUNA	ONE SEAT	-	25-II(A)	BMK AMC, BELGAUM 01	
					TOTAL SEATS 01	
2.	PANCHAKARMA	ONE SEAT	-	48 – GM	SDM AMC HASSAN 01	
					TOTAL SEATS 01	
3.	SHALYATANTRA	ONE SEAT	-	33-SC	SDM AMC HASSAN 01	
					TOTAL SEATS 01	
4.	SHALAKYATANTRA	ONE SEAT	-	83-III(B)	SDM AMC HASSAN 01	
					TOTAL SEATS 01	
5	RASA SHASTRA	ONE SEAT	-	1-SC	BMK AMC, BELGAUM 01	
					TOTAL SEATS 01	
6	SWASTHA VRITHA	ONE SEAT	8-GM	9-SC	SDM AMC HASSAN 01	
					TOTAL SEATS 01	
7	KOUMARA BRITHYA	ONE SEAT	-	9-SC	SDM AMC HASSAN 01	
					TOTAL SEATS 01	

R.S. ITAGI
Under Secretary to Government
Health and Family Welfare Department

ಪಿ.ಆರ್.2756

COMMERCE AND INDUSTRIES SECRETARIAT

Sub : Deputation of Officers to Kaula Lumpur, Malaysia to attend GBLF Conference on 22nd and 23rd November 2010.

Ref : Invitation from Director General of Commonwealth Business Council, dated 11th November 2010.

***

PREAMBLE:

Commonwealth Business Council has organized a Global Business Leaders Forum's Conference on 22nd and 23rd November 2010 in Kaula Lumpur.

The theme of the conference is Global growth through Emerging Markets: Asia and Commonwealth and will focus on building new partnerships. The important role played by theG20 group of countries in the global economic management reflects this new global context. Considering the importance of the opportunity for projecting the investment opportunities in Karnataka, Hon'ble Chief Minister of Karnataka desires that a delegation lead by Hon'ble Minister for Medium and Large Industries consisting of following officers take part in the Conference Hence this Order.

Government Order No. CI 474 SPI 2010, Dated : 15.11.2010

Under the circumstances explained above, sanction is hereby accorded for the deputation of following officers to Kuala Lampur, Malaysia to attend the Conference of Global Business Leaders Forum on 22nd and 23rd November 2010. The expenditure towards making necessary arrangements for accommodation and transportation for this purpose shall be met out of the funds of Karnataka Udyog Mitra.

1. V. P. Baligar IAS, Principal Secretary, C & I Dept. GOK
2. Gurunath S. Kulkarni, Director (Tech), C & I Dept.
3. Smt. Swaroopa, Joint Director, KUM

This issues with the approval of DPAR vide U.O. Note DPAR 231 SME 2010 dated 15-11-2010.

By Order and in the name of the Governor of Karnataka
A.V. Srinivasa Dikshit
Desk Officer (Tech Cell)
Commerce and Industries Department

PR. No. 2798

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಡಾ॥ ಆರ್. ಎನ್. ಮಲವೇಗೌಡ, ಮೂಳೆ ತಜ್ಞರು, ಸಾರ್ವಜನಿಕ ಆಸ್ಪತ್ರೆ, ಚನ್ನಪಟ್ಟಣ, ರಾಮನಗರ ಜಿಲ್ಲೆ ಇವರ ರಾಜೀನಾಮೆಯನ್ನು ಅಂಗೀಕರಿಸುವ ಬಗ್ಗೆ.

ಓದಲಾಗಿದೆ : ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರ ಪತ್ರ ಸಂಖ್ಯೆ: ಜೆ. ಆರ್. ಓ(1ಎ)25/09–10, ದಿನಾಂಕ 06–11–2009.

***

ಪ್ರಸ್ತಾವನೆ :

ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರು ಮೇಲೆ ಓದಲಾದ ಪತ್ರದಲ್ಲಿ ಡಾ॥ ಆರ್. ಎನ್. ಮಲವೇಗೌಡ, ಮೂಳೆ ತಜ್ಞರು, ಸಾರ್ವಜನಿಕ ಆಸ್ಪತ್ರೆ, ಚನ್ನಪಟ್ಟಣ, ರಾಮನಗರ ಜಿಲ್ಲೆ ಇವರು 1997ನೇ ಸಾಲಿನಲ್ಲಿ ಸೇವೆಗೆ ಸೇರಿದ್ದು, ವೈಯಕ್ತಿಕ ಕಾರಣಗಳಿಂದ ದಿನಾಂಕ 01–05–2009 ರಿಂದ ಅನ್ವಯವಾಗುವಂತೆ ರಾಜೀನಾಮೆ ಸಲ್ಲಿಸಿ ಅಂಗೀಕರಿಸುವಂತೆ ಕೋರಿರುತ್ತಾರೆ. ಇವರ ವಿರುದ್ಧ ಯಾವುದೇ ಇಲಾಖಾ ವಿಚಾರಣೆ ಹಾಗೂ ಸರ್ಕಾರಕ್ಕೆ ಯಾವುದೇ ಬೇಬಾಕಿ ಇರುವುದಿಲ್ಲವೆಂದು ಹಾಗೂ ಇವರು ಬಾಂಡ್ ಅವಧಿಯಲ್ಲಿ ಇರುವುದಿಲ್ಲವಾದ್ದರಿಂದ ದಿನಾಂಕ 01–05–2009 ರಿಂದ ಜಾರಿಗೆ ಬರುವಂತೆ ರಾಜೀನಾಮೆಯನ್ನು ಅಂಗೀಕರಿಸುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಆಕುಕ 305 ಹೆಚ್ಎಸ್‌ಹೆಚ್ 2010, ಬೆಂಗಳೂರು, ದಿನಾಂಕ: 11–11–2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಡಾ॥ ಆರ್. ಎನ್. ಮಲವೇಗೌಡ, ಮೂಳೆ ತಜ್ಞರು, ಸಾರ್ವಜನಿಕ ಆಸ್ಪತ್ರೆ, ಚನ್ನಪಟ್ಟಣ, ರಾಮನಗರ ಜಿಲ್ಲೆ ಇವರು ವೈಯಕ್ತಿಕ ಕಾರಣದಿಂದ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗೆ ನೀಡಿರುವ ರಾಜೀನಾಮೆಯನ್ನು ದಿನಾಂಕ 01–05–2009 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಅಂಗೀಕರಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಚಿಕ್ಕೇಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಸೇವೆಗಳು)

ಪಿ.ಆರ್. 2799

ಸಹಕಾರ ಸಚಿವಾಲಯ

ವಿಷಯ : ಆಲ್ ಮಿಝಾನ್ ಎಜುಕೇಷನ್ ಮತ್ತು ಸೋಷಿಯಲ್ ವೆಲ್‌ಫೇರ್ ಸೊಸೈಟಿ, ಬಾಗಲಕೋಟೆ ಸಂಸ್ಥೆಗೆ ಆಡಳಿತಾಧಿಕಾರಿಯನ್ನು ನೇಮಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ: ಕಂಇ 03 ಮುಸೋಸೋ 2007, ದಿನಾಂಕ 18–03–2008
2) ಸಹಕಾರ ಸಂಘಗಳ ಸಂಯುಕ್ತ ನಿಬಂಧಕರು, ಬೆಂಗಳೂರು ಪ್ರಾಂತ, ಬೆಂಗಳೂರು ಇವರ ಪತ್ರ ಸಂಖ್ಯೆ: ಆರ್‌ಸಿಎಸ್/ಎಡಿಎಂ/323/ಎಸ್‌ಓಆರ್/2008–09, ದಿನಾಂಕ 05–06–2010.

***

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ: (1) ದಿನಾಂಕ 18–03–2008ರ ಆದೇಶದಲ್ಲಿ ಆಲ್ ಮಿಝಾನ್ ಎಜುಕೇಷನ್ ಮತ್ತು ಸೋಷಿಯಲ್ ವೆಲ್‌ಫೇರ್ ಸೊಸೈಟಿ, ಬಾಗಲಕೋಟೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960 ರ ಕಲಂ 27ಎ ಪ್ರಕಾರ ಸರ್ಕಾರಕ್ಕೆ ವಿಹಿತವಾದ ಅಧಿಕಾರವನ್ನು ಚಲಾಯಿಸಿ, ಸಂಘದ ಹಿತದೃಷ್ಟಿಯಿಂದ ತಹಶೀಲ್ದಾರ್, ಬಾಗಲಕೋಟೆ ಇವರನ್ನು ಆಡಳಿತಾಧಿಕಾರಿಯಾಗಿ ಆರು ತಿಂಗಳ ಅವಧಿಗೆ ಅಥವಾ ಸಂಸ್ಥೆಗೆ ಚುನಾವಣೆ ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರವನ್ನು ಹಸ್ತಾಂತರಿಸುವವರೆಗೆ ಇದರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ನೇಮಿಸಿ, ಆದೇಶಿಸಿದೆ. ತದನಂತರ, ಸದರಿ ಅವಧಿಯನ್ನು ಕಾಲ ಕಾಲಕ್ಕೆ ವಿಸ್ತರಿಸಲಾಗುತ್ತಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2) ದಿನಾಂಕ 05-06-2010ರ ಪತ್ರದಲ್ಲಿ ಸಹಕಾರ ಸಂಘಗಳ ನಿಬಂಧಕರು, ಬೆಂಗಳೂರು ಇವರು ಸಹಕಾರ ಸಂಘಗಳ ಉಪ ನಿಬಂಧಕರು, ಬಾಗಲಕೋಟೆ ಇವರು ಪ್ರಸ್ತುತ ಆಡಳಿತಾಧಿಕಾರಿಯ ಅವಧಿಯು ಆರು ತಿಂಗಳು ಪೂರ್ಣಗೊಂಡಿದ್ದು, ಆದಾಗ್ಯೂ ಚುನಾವಣೆ ಜರುಗಿಸುವ ಕಾರ್ಯ ಪೂರ್ಣಗೊಂಡಿಲ್ಲವಾದ್ದರಿಂದ, ಅವಧಿ ವಿಸ್ತರಣೆಗಾಗಿ ಮನವಿ ಮಾಡಿರುತ್ತಾರೆ. ನಿರ್ದಿಷ್ಟ ಅವಧಿ ನಿಗದಿ ಪಡಿಸಲು ಹಾಗೂ ಸದರಿ ಅವಧಿಯೊಳಗಾಗಿ ಚುನಾವಣೆ ಜರುಗಿಸಲು ನಿರ್ದೇಶಿಸಿ ಆಡಳಿತಾಧಿಕಾರಿಯ ಅವಧಿಯನ್ನು ವಿಸ್ತರಿಸಬಹುದೆಂದು ದಿನಾಂಕ 30-04-2010ರ ಸಹಕಾರ ಸಂಘಗಳ ಉಪ ನಿಬಂಧಕರ ಪತ್ರದಲ್ಲಿ ಅಭಿಪ್ರಾಯವನ್ನು ಸಲ್ಲಿಸಿರುತ್ತಾರೆ. ಸದರಿ ಅಭಿಪ್ರಾಯವನ್ನು ಪರಿಗಣಿಸಿ ಮೇಲ್ಕಂಡ ಸಂಸ್ಥೆಯ ಆಡಳಿತಾಧಿಕಾರಿಯ ಅವಧಿಯನ್ನು ದಿನಾಂಕ 31-07-2010ರ ವರೆಗೆ ವಿಸ್ತರಿಸಿ, ಆ ದಿನಾಂಕದೊಳಗೆ ಆಡಳಿತ ಮಂಡಳಿಗೆ ಚುನಾವಣೆ ಜರುಗಿಸಲು ಆಡಳಿತಾಧಿಕಾರಿಯವರಿಗೆ ಸೂಕ್ತ ನಿರ್ದೇಶನವನ್ನು ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ.

ಸಹಕಾರ ಸಂಘಗಳ ನಿಬಂಧಕರ ದಿನಾಂಕ 05-06-2010ರ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಸದರಿ ಪತ್ರದಲ್ಲಿ ನಮೂಸಿರುವ ಆಡಳಿತಾಧಿಕಾರಿಯವರ ಅವಧಿಯ ದಿನಾಂಕ ಈಗಾಗಲೇ ಮುಕ್ತಾಯಗೊಂಡಿರುವುದರಿಂದ, ಸದರಿ ಅವಧಿಯನ್ನು ಮತ್ತೆ ವಿಸ್ತರಿಸಲು ಸರ್ಕಾರವು ತೀರ್ಮಾನಿಸಿ, ಈ ಕೆಳಕಂಡಂತೆ ಆದೇಶಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಇ 47 ಸಸಂನೋ 2008, ಬೆಂಗಳೂರು, ದಿನಾಂಕ: 26-10-2010

ಆಲ್ ಮಿರ್ಘಾನ್ ಎಜುಕೇಷನ್ ಮತ್ತು ಸೋಷಿಯಲ್ ವೆಲ್‌ಫೇರ್ ಸೊಸೈಟಿ, ಬಾಗಲಕೋಟೆ ಇದಕ್ಕೆ ಕರ್ನಾಟಕ ಸಂಘಗಳ ನೋಂದಣಿ ಕಾಯ್ದೆ 1960ರ ಕಲಂ 27ಎ ಪ್ರಕಾರ ಸರ್ಕಾರಕ್ಕೆ ವಿಹಿತವಾದ ಅಧಿಕಾರವನ್ನು ಚಲಾಯಿಸಿ, ತಹಶೀಲ್ದಾರ್, ಬಾಗಲಕೋಟೆ ಇವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಿದ್ದು, ಇದರ ಬದಲಾಗಿ ಸಹಕಾರ ಸಂಘಗಳ ಸಹಾಯ ನಿಬಂಧಕರು, ಬಾಗಲಕೋಟೆ ಇವರನ್ನು ಸದರಿ ಸೊಸೈಟಿಗೆ ಆಡಳಿತಾಧಿಕಾರಿಯನ್ನಾಗಿ ನೇಮಿಸಿ ದಿನಾಂಕ 31-07-2010 ರಿಂದ ಆರು ತಿಂಗಳ ಅವಧಿಗೆ ವಿಸ್ತರಿಸಿ ಆದೇಶಿಸಿದೆ. ಸದರಿ ಅವಧಿಯಲ್ಲಿ ಆಡಳಿತಾಧಿಕಾರಿಯವರು ಸಂಸ್ಥೆಗೆ ಚುನಾವಣೆ ನಡೆಸಿ, ಚುನಾಯಿತ ಆಡಳಿತ ಮಂಡಳಿಗೆ ಅಧಿಕಾರವನ್ನು ಹಸ್ತಾಂತರಿಸುವಂತೆ ಆದೇಶಿಸಿದೆ ಹಾಗೂ ನಿಗದಿತ ಅವಧಿಗೆ ಕ್ರಮ ಕೈಗೊಂಡ ಬಗ್ಗೆ ಸರ್ಕಾರಕ್ಕೆ ವರದಿ ನೀಡಲು ಸಹ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ನಂಜುಂಡಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ-2

ಸಹಕಾರ ಇಲಾಖೆ

ಪಿ.ಆರ್. 2800

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಕರ್ನಾಟಕ ಸರ್ಕಾರ ಸಚಿವಾಲಯದ ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ಹುದ್ದೆಗಳನ್ನು ಮುಂದುವರೆಸುವ ಬಗ್ಗೆ.

ಓದಲಾಗಿದೆ :

1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 048 ಸಸಿವಿ 02, ದಿನಾಂಕ 07-03-2003
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 048 ಸಸಿವಿ 02, ದಿನಾಂಕ 03-06-2003
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 017 ಸಸಿವಿ 04, ದಿನಾಂಕ 06-01-2005
4. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 014 ಸಸಿವಿ 05, ದಿನಾಂಕ 14-07-2005
5. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 010 ಸಸಿವಿ 06, ದಿನಾಂಕ 25-02-2005
6. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 050 ಸಸಿವಿ 06, ದಿನಾಂಕ 27-06-2006
7. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 017 ಸಸಿವಿ 07, ದಿನಾಂಕ 01-03-2007
8. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 626 ಸಅಸೇ 07, ದಿನಾಂಕ 01-03-2008
9. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 534 ಸಅಸೇ 09, ದಿನಾಂಕ 03-11-2009
10. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 272 ಸಅಸೇ 10, ದಿನಾಂಕ 07-06-2010
11. ಸರ್ಕಾರದ ಆದೇಶ ಸಂಖ್ಯೆ: ಡಿಪಿಇ 004 ಎಆರ್‌ಯು 08, ದಿನಾಂಕ 26-08-2008
12. ಸಾರ್ವಜನಿಕ ಉದ್ದಿಮೆಗಳ ಇಲಾಖೆ ಅನಧಿಕೃತ ಟಿಪ್ಪಣಿ ಸಂಖ್ಯೆ: ಸಾಉಇ 15 ಎಂಇಎ 2007, ದಿನಾಂಕ 06-05-2010.

ಪ್ರಸ್ತಾವನೆ :

ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಸಾರ್ವಜನಿಕ ಉದ್ದಿಮೆ ಇಲಾಖೆಯಲ್ಲಿ ಹುದ್ದೆಗಳನ್ನು ಸೃಜಿಸಿ ಕಾಲಕಾಲಕ್ಕೆ ಮುಂದುವರೆಸಲಾಗಿದೆ. ಮೇಲೆ ಕ್ರಮ ಸಂಖ್ಯೆ: (10) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಸಾರ್ವಜನಿಕ ಉದ್ದಿಮೆಗಳು ಇಲಾಖೆಯಲ್ಲಿ 51 ತಾತ್ಕಾಲಿಕ ಹುದ್ದೆಗಳನ್ನು ದಿನಾಂಕ 07-03-2010 ರಿಂದ ಒಂದು ವರ್ಷದ ಅವಧಿಗೆ ಮುಂದುವರೆಸಲಾಗಿದೆ. ಮೇಲೆ ಕ್ರಮ ಸಂಖ್ಯೆ (11) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಸಾರ್ವಜನಿಕ ಉದ್ದಿಮೆ ಇಲಾಖೆಯು ತಾಂತ್ರಿಕ ಮತ್ತು ಮೌಲ್ಯಮಾಪನ ವಿಭಾಗದ 08 ಹುದ್ದೆಗಳನ್ನು ಸೃಜಿಸಿದೆ. ಮೇಲೆ ಕ್ರಮ ಸಂಖ್ಯೆ (12)ರಲ್ಲಿ ಓದಲಾದ ಅನಧಿಕೃತ ಟಿಪ್ಪಣಿಯಲ್ಲಿ ಸಾರ್ವಜನಿಕ ಉದ್ದಿಮೆ ಇಲಾಖೆಯು ದಿನಾಂಕ 26-08-2008ರ ಆದೇಶದಲ್ಲಿ ಸೃಜಿಸಲಾದ 08 ತಾತ್ಕಾಲಿಕ ಹುದ್ದೆಗಳನ್ನು ಮುಂದುವರೆಸುವಂತೆ ಸಾರ್ವಜನಿಕ ಉದ್ದಿಮೆ ಇಲಾಖೆಯು ಕೋರಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 71 ಸಅಸೇ 2010, ಬೆಂಗಳೂರು, ದಿನಾಂಕ: 12-11-2010

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕರ್ನಾಟಕ ಸರ್ಕಾರದ ಸಚಿವಾಲಯದ ಸಾರ್ವಜನಿಕ ಉದ್ದಿಮೆಗಳ ಇಲಾಖೆಯ ತಾಂತ್ರಿಕ ಮತ್ತು ಮೌಲ್ಯ ಮಾಪನ ವಿಭಾಗದಲ್ಲಿ ದಿನಾಂಕ 26-08-2008ರ ಆದೇಶದಲ್ಲಿ ಸೃಜಿಸಲಾಗಿರುವ ಈ ಕೆಳಕಂಡ ತಾತ್ಕಾಲಿಕ ಹುದ್ದೆಗಳನ್ನು ದಿನಾಂಕ 26-08-2009 ರಿಂದ ಎರಡು ವರ್ಷಗಳ ಅವಧಿಗೆ ಮುಂದುವರಿಸಲಾಗಿದೆ.

ಕ್ರ.ಸಂ.	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ
1	ಉಪ ಕಾರ್ಯದರ್ಶಿ	01 ಹುದ್ದೆ
2	ಉಪ ನಿರ್ದೇಶಕರು (ತಾಂತ್ರಿಕ) (ಅಧೀನ ಕಾರ್ಯದರ್ಶಿ ಹುದ್ದೆಯಿಂದ)	04 ಹುದ್ದೆಗಳು
3	ಜಂಟಿ ನಿಯಂತ್ರಕರು	01 ಹುದ್ದೆ
4.	ಲೆಕ್ಕ ಪತ್ರ ಅಧೀಕ್ಷಕರು	02 ಹುದ್ದೆಗಳು
	ಒಟ್ಟು	**08 ಹುದ್ದೆಗಳು**

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ 10-07-1996 ರಲ್ಲಿ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ. ಆರ್. ವಿಜಯಾನಂದ ಶರ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ಸೇವೆಗಳು-3)

ಪಿ.ಆರ್. 2801

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : 2010-11ನೇ ಸಾಲಿನ ಲೆಕ್ಕ ಶೀರ್ಷಿಕೆ 2210-05-105-1-12-101 (ಯೋಜನೇತರ) ಅಡಿಯಲ್ಲಿ ಹೆಚ್ಚುವರಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ: ಆಕುಕ 188 ಪಿಟಿಡಿ 2009, ದಿನಾಂಕ 09-03-2010
2) ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 108 ಬಿಆರ್‌ಎಸ್ 2010, ದಿನಾಂಕ 29-10-2010

***

ಪ್ರಸ್ತಾವನೆ :

ಮೇಲೆ ಓದಲಾದ ಕ್ರ.ಸಂ. (1)ರಲ್ಲಿನ ಸರ್ಕಾರದ ಆದೇಶದಲ್ಲಿ 2009-10ನೇ ಸಾಲಿನಲ್ಲಿ ಹೃದಯ ಸಂಜೀವಿನಿ ಯೋಜನೆ ಅಡಿಯಲ್ಲಿ ಬಡ ಹೃದ್ರೋಗಿಗಳಿಗೆ (ಃಕಐ) ಉಚಿತವಾಗಿ ಶ್ರೀ ಜಯದೇವ ಹೃದ್ರೋಗ ಚಿಕಿತ್ಸಾ ಸಂಸ್ಥೆ, ಬೆಂಗಳೂರು ಇಲ್ಲಿ ಹೃದಯ ಚಿಕಿತ್ಸೆ ನೀಡಲು ಲೆಕ್ಕ ಶೀರ್ಷಿಕೆ 2210-05-105-1-12-101 (ಯೋಜನೇತರ) ಅಡಿಯಲ್ಲಿ ರೂ. 200.00 ಲಕ್ಷಗಳನ್ನು ಆರ್ಥಿಕ ಇಲಾಖೆ ಆದೇಶದನ್ವಯ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಿತ್ತು.

ಮೇಲೆ ಓದಲಾದ ಕ್ರ.ಸಂ. (2) ರಲ್ಲಿನ ಸರ್ಕಾರದ ಆದೇಶದಲ್ಲಿ, ಬಡ ಹೃದ್ರೋಗಿಗಳಿಗೆ (ಃಕಐ) ಉಚಿತವಾಗಿ ಶ್ರೀ ಜಯದೇವ ಹೃದ್ರೋಗ ಚಿಕಿತ್ಸಾ ಸಂಸ್ಥೆ, ಬೆಂಗಳೂರು ಇಲ್ಲಿ ಹೃದಯ ಚಿಕಿತ್ಸೆ ನೀಡಲು ಲೆಕ್ಕ ಶೀರ್ಷಿಕೆ 2210-05-105-1-12-101 (ಯೋಜನೇತರ) ಅಡಿಯಲ್ಲಿ ರೂ. 400.00 ಲಕ್ಷಗಳ ಹೆಚ್ಚುವರಿ ಅನುದಾನವನ್ನು ಪ್ರಸ್ತುತ ಆರ್ಥಿಕ ವರ್ಷದ ಪೂರಕ ಅಂದಾಜಿನಲ್ಲಿ ಅನುದಾನ ಸಂಖ್ಯೆ: 22ರಲ್ಲಿ ಸಕ್ರಮಗೊಳಿಸುವ ಷರತ್ತುಗಳಿಗೆ ಒಳಪಡಿಸಿ ಮಂಜೂರು ಮಾಡಿದೆ.

ಈ ಹಿನ್ನೆಲೆಯಲ್ಲಿ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಆಕುಕ 188 ಪಿಟಿಡಿ 2009, ಬೆಂಗಳೂರು, ದಿನಾಂಕ: 11-11-2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಹೃದಯ ಸಂಜೀವಿನಿ ಯೋಜನೆ ಅಡಿಯಲ್ಲಿ ಬಡ ಹೃದ್ರೋಗಿಗಳಿಗೆ (BPL) ಉಚಿತವಾಗಿ ಶ್ರೀ ಜಯದೇವ ಹೃದ್ರೋಗ ಚಿಕಿತ್ಸಾ ಸಂಸ್ಥೆ, ಬೆಂಗಳೂರು ಇಲ್ಲಿ ಹೃದಯ ಚಿಕಿತ್ಸೆ ನೀಡಲು ಲೆಕ್ಕ ಶೀರ್ಷಿಕೆ 2210-05-105-1-12-101 (ಯೋಜನೇತರ) ಅಡಿಯಲ್ಲಿ ರೂ. 400.00 ಲಕ್ಷಗಳನ್ನು (ನಾಲ್ಕು ನೂರು ಲಕ್ಷ ರೂಪಾಯಿಗಳು ಮಾತ್ರ) ಹೆಚ್ಚುವರಿ ಅನುದಾನವಾಗಿ ಬಿಡುಗಡೆ ಮಾಡಲು ಸರ್ಕಾರದ ಮಂಜೂರಾತಿ ನೀಡಿದೆ.

ಈ ಹೆಚ್ಚುವರಿ ಅನುದಾನವನ್ನು ಪ್ರಸ್ತುತ ಆರ್ಥಿಕ ವರ್ಷದ ಪೂರಕ ಅಂದಾಜಿನಲ್ಲಿ (ಅನುದಾನ ಸಂಖ್ಯೆ: 22) ಸಕ್ರಮಗೊಳಿಸಲು ಸೂಕ್ತ ಕ್ರಮ ಕೈಗೊಳ್ಳುವುದು.

ತತ್ಸಂಬಂಧಿತ ಸಹಾಯಾನುದಾನದ ಬಿಲ್ಲುಗಳಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರ್ಕಾರದ ಉಪ ಕಾರ್ಯದರ್ಶಿ (ವೈದ್ಯಕೀಯ ಶಿಕ್ಷಣ) ಯವರು ಮೇಲು ರುಜು ಮಾಡಲು ಅಧಿಕೃತಗೊಳಿಸಲಾಗಿದೆ. ಸದರಿ ತ್ರೈಮಾಸಿಕ ಬಿಲ್ಲುಗಳಿಗೆ ನಗದೀಕರಣಕ್ಕಾಗಿ ಸಂಬಂಧಿಸಿದ ಬೆಂಗಳೂರಿನ ರಾಜ್ಯ ಹುಜೂರ್ ಖಜಾನೆಯಿಂದ ಮೇಲು ರುಜುವಿನೊಂದಿಗೆ ಪಡೆಯತಕ್ಕದು.

1958ರ ಕರ್ನಾಟಕ ಆರ್ಥಿಕ ಸಂಹಿತೆಯ 161 ಅನುಚ್ಛೇದದಡಿ ಯಾವ ಉದ್ದೇಶಕ್ಕಾಗಿ ಮೇಲ್ಕಂಡ ಸಹಾಯಾನುದಾನವನ್ನು ಬಿಡುಗಡೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಉಪಯೋಗಿಸಿ ಅದರಲ್ಲಿ ನಿಗದಿಪಡಿಸಿರುವ ನಮೂನೆಯಲ್ಲಿ ಬಳಕೆ ಪ್ರಮಾಣ ಪತ್ರವನ್ನು ಸರ್ಕಾರಕ್ಕೆ ಮಹಾಲೇಖಪಾಲರಿಗೆ ಮತ್ತು ವೈದ್ಯಕೀಯ ಶಿಕ್ಷಣ ನಿರ್ದೇಶಕರಿಗೆ ತ್ವರಿತವಾಗಿ ಸಲ್ಲಿಸತಕ್ಕದ್ದು. 342(ii)(x)ನೇ ಅನುಚ್ಛೇದದಡಿ ರೀ-ಕನ್ಸಲೇಷನ್ ಪ್ರಮಾಣ ಪತ್ರವನ್ನು ಮಾಹಾಲೇಖಪಾಲರ ಕಚೇರಿಯಿಂದ ಪಡೆದು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಆರ್. ಎಸ್. ಇಟಗಿ
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾರತೀಯ ವೈದ್ಯ ಪದ್ಧತಿ)

ಪಿ.ಆರ್. 2802

ನಗರಾಭಿವೃದ್ಧಿ ಸಚಿವಾಲಯ

ವಿಷಯ : 74ನೇ ಸಂವಿಧಾನದ (ತಿದ್ದುಪಡಿ) ಕಾಯ್ದೆಯಡಿಯಲ್ಲಿ ಯೋಜನಾ ಪ್ರಕಾರ್ಯಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಪ್ರತ್ಯಾಯೋಜಿಸುವ ಸಂಬಂಧ

ಪ್ರಸ್ತಾವನೆ :

74ನೇ ಸಂವಿಧಾನದ (ತಿದ್ದುಪಡಿ) ಕಾಯ್ದೆಯಡಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಯೋಜನಾ ಪ್ರಕಾರ್ಯಗಳನ್ನು ಪ್ರತ್ಯಾಯೋಜಿಸುವ ಕುರಿತು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ಈ ಸಂಬಂಧ ಅನುಸರಿಸಬೇಕಾದ ಕ್ರಮದ ಕುರಿತು ಮತ್ತು ಯೋಜನಾ ಪ್ರಕಾರ್ಯಗಳನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ವರ್ಗಾಯಿಸಿದ ನಂತರ ನಗರಾಭಿವೃದ್ಧಿ ಪ್ರಾಧಿಕಾರಗಳು/ಯೋಜನಾ ಪ್ರಾಧಿಕಾರಗಳು ನಿರ್ವಹಿಸಬೇಕಾದ ಪಾತ್ರದ ಕುರಿತು ಸರ್ಕಾರವು ಚಿಂತನೆ ಮಾಡುತ್ತಿದೆ. ಆದರೆ, ಅಲ್ಲಿಯವರೆಗೆ ಚುನಾಯಿತ ಸಂಸ್ಥೆಗಳಾದ ನಗರ ಸ್ಥಳೀಯ ಸಂಸ್ಥೆಗಳು ಮಹಾಯೋಜನೆ ತಯಾರಿಕೆಯಲ್ಲಿ ಹೆಚ್ಚಿನ ಜವಾಬ್ದಾರಿ ವಹಿಸುವ ಅವಶ್ಯಕತೆಯಿದೆ ಅದು ಪ್ರಸ್ತುತ ಸಾಕ್ಷಿಭೂತವಾಗಿರುವುದಿಲ್ಲ. ಈ ನಿಟ್ಟಿನಲ್ಲಿ ನಗರ ಸ್ಥಳೀಯ ಸಂಸ್ಥೆಗಳು ಮಹಾಯೋಜನೆ ತಯಾರಿಕೆಯಲ್ಲಿ ಪಾತ್ರವಹಿಸುವುದು ಸೂಕ್ತವೆಂದು ಸರ್ಕಾರವು ಭಾವಿಸುತ್ತದೆ.

ಪ್ರಸ್ತುತ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಅವಕಾಶಗಳನ್ವಯ ಮಹಾಯೋಜನೆಯನ್ನು ಎರಡು ಹಂತಗಳಲ್ಲಿ ಅಂದರೆ. ತಾತ್ಕಾಲಿಕ ಮತ್ತು ಅಂತಿಮವೆಂದು ತಯಾರಿಸಲಾಗುತ್ತದೆ. ಯೋಜನಾ ಪ್ರಾಧಿಕಾರಗಳು ಮಹಾಯೋಜನೆಯನ್ನು ತಯಾರಿಸಿ ಸರ್ಕಾರದ ತಾತ್ಕಾಲಿಕ ಅನುಮೋದನೆಗಾಗಿ ಸಲ್ಲಿಸುವ ಪೂರ್ವದಲ್ಲಿ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳಿಂದ ಸಹಮತಿ ಪಡೆಯಬೇಕೆಂಬುದು ಸರ್ಕಾರದ ಅನಿಸಿಕೆಯಾಗಿರುತ್ತದೆ. ಹಾಗೆಯೇ, ಸರ್ಕಾರದ ತಾತ್ಕಾಲಿಕ ಅನುಮೋದನೆ ದೊರೆತ ನಂತರ, ಆಕ್ಷೇಪಣೆಗಳು ಹಾಗೂ ಸಲಹೆಗಳನ್ನು ಆಹ್ವಾನಿಸಿದ ನಂತರ ಮಹಾಯೋಜನೆಯನ್ನು ಸರ್ಕಾರದ ಅಂತಿಮ ಅನುಮೋದನೆಗಾಗಿ ಸಲ್ಲಿಸುವ ಪೂರ್ವದಲ್ಲಿ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳಿಂದ ಪುನಃ ಸಹಮತಿ ಪಡೆಯಬೇಕಾಗಿರುತ್ತದೆ. ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂಬಂಧಿಸಿದಂತೆ, ಪಂಚಾಯತ್ ರಾಜ್ ಸಂಸ್ಥೆಗಳು ಮಹಾಯೋಜನೆ ತಯಾರಿಕೆಯಲ್ಲಿ ಯಾವುದೇ ಪಾತ್ರ ನಿರ್ವಹಿಸುತ್ತಿಲ್ಲವಾದ್ದರಿಂದ, ಪ್ರಸ್ತುತ ಸಂದರ್ಭದಲ್ಲಿಯೂ ಯಾವುದೇ ಸನ್ನಿವೇಶದ ಬದಲಾವಣೆ ಇರುವುದಿಲ್ಲ.

ಮೇಲೆ ತಿಳಿಸಿರುವ ಸಂದರ್ಭಗಳ ಹಿನ್ನೆಲೆಯಲ್ಲಿ ಸರ್ಕಾರವು ಮಹಾಯೋಜನೆ ಅನುಮೋದನೆ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ್ದು, ಅದರಂತೆ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಯುಡಿಡಿ 146 ಸಿಎಸ್‌ಎಸ್ 2009, ಬೆಂಗಳೂರು, ದಿನಾಂಕ: 14–12–2009

ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಪ್ರಕರಣ 76ಕೆ ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಈ ಕೆಳಗಿನಂತೆ ಆದೇಶಗಳನ್ನು ತತ್‌ಕ್ಷಣ ಜಾರಿಗೆ ಬರುವಂತೆ ಹೊರಡಿಸಲಾಗಿದೆ.

1. ಸ್ಥಳೀಯ ಯೋಜನಾ ಪ್ರದೇಶವು ಸಂಬಂಧಿತ ನಗರ ಸ್ಥಳಿಯ ಸಂಸ್ಥೆಗಳ ವ್ಯಾಪ್ತಿಯನ್ನೂ ಮೀರಿರುವುದರಿಂದ ಮಹಾ ಯೋಜನಾ ತಯಾರಿಕೆಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಗಳು ಮತ್ತು ಯೋಜನಾ ಪ್ರಾಧಿಕಾರಗಳೇ ಪ್ರಸ್ತುತ ಸಮಯದಲ್ಲಿ ಜವಾಬ್ದಾರಿಯುತ ಸಂಸ್ಥೆ (ಏಜೆನ್ಸಿ)ಗಳಾಗಿ ಮುಂದುವರೆಯತಕ್ಕದ್ದು.
2. ನಗರಾಭಿವೃದ್ಧಿ ಪ್ರಾಧಿಕಾರಗಳು ಮತ್ತು ಯೋಜನಾ ಪ್ರಾಧಿಕಾರಗಳು ಸ್ಥಳೀಯ ಯೋಜನಾ ಪ್ರದೇಶಗಳಿಗೆ ತಯಾರಿಸಲ್ಪಟ್ಟ ಮಹಾಯೋಜನೆಗಳನ್ನು ತಾತ್ಕಾಲಿಕ ಮತ್ತು ಅಂತಿಮ ಎರಡೂ ಹಂತಗಳಲ್ಲಿ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳಿಗೆ ಪರಿಶೀಲಿಸಲು ಹಾಗೂ ಆಕ್ಷೇಪಣೆಗಳನ್ನು ಅವರಿಂದ ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೊಳಪಟ್ಟು ಸ್ವೀಕರಿಸಲು ಕಳುಹಿಸತಕ್ಕದ್ದು.
3. ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಆಕ್ಷೇಪಣೆಗಳನ್ನು ಸಂಬಂಧಿಸಿದ ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ಯೋಜನಾ ಪ್ರಾಧಿಕಾರಗಳಿಗೆ ಮಹಾಯೋಜನೆ ಸ್ವೀಕರಿಸಿದ ದಿನಾಂಕದಿಂದ 45 ದಿನಗಳೊಳಗಾಗಿ ಸಲ್ಲಿಸತಕ್ಕದ್ದು. ಒಂದು ವೇಳೆ ನಗರ ಸ್ಥಳೀಯ ಸಂಸ್ಥೆಯು 45 ದಿನಗಳ ನಿಗದಿತ ಸಮಯದೊಳಗೆ ತನ್ನ ಆಕ್ಷೇಪಣೆಗಳನ್ನು ಸಲ್ಲಿಸದಿದ್ದಲ್ಲಿ ಅಂತಹ ಸ್ಥಳೀಯ ಸಂಸ್ಥೆಯ ಆಕ್ಷೇಪಣೆಗಳು ಹಾಗೂ ಸಲಹೆಗಳು ಇಲ್ಲವೆಂದು ಭಾವಿಸತಕ್ಕದ್ದು ಮತ್ತು ಸಂಬಂಧಿತ ನಗರಾಭಿವೃದ್ಧಿ ಪ್ರಾಧಿಕಾರಗಳು/ಯೋಜನಾ ಪ್ರಾಧಿಕಾರಗಳು ಮಹಾಯೋಜನೆಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸುವ ಕಾರ್ಯವನ್ನು ಮುಂದುವರಿಸತಕ್ಕದ್ದು.

ಮುಂದಿನ ಆದೇಶದವರೆಗೆ ಮೇಲಿನ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಸಿ. ಆರ್. ರವೀಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ

ನಗರಾಭಿವೃದ್ಧಿ ಇಲಾಖೆ

URBAN DEVELOPMENT SECRETARIAT

Sub : Devolution of planning functions to the Urban Local Bodies under the 74th Constitutional (Amendment) Act – reg.

PREAMBLE:

The devolution of planning functions to the Urban Local Bodies under the 74th Constitutional (Amendment) Act, is under active consideration of the Government. Government is working out the modalities on this issue and also the role to be played by the Urban Development Authorities / Planning Authorities, once the planning functions are transferred to the Urban Local Bodies. But till such time, the Urban Local Bodies which are elected bodies need to have a greater say in the preparation of Master Plans, which is not being witnessed at present. Government intends that the Urban Local Bodies should play a role in the preparation of Master Plan.

Presently, the Master Plans are being prepared as per the provisions of the Karnataka Town and Country Planning Act, 1961 at two stages i.e., draft and final. Government feels that the draft Master Plan prepared by the Planning Authorities before being submitted to the Government shall be vetted by the respective Urban Local Bodies. Similarly, once the draft is approved by the Government, after calling for objections and suggestions, before submitting the Master Plan for final approval to the

Government, it shall be again vetted by concerned Urban Local Bodies. As far as the Panchayat Raj Institutions within the local planning area are concerned, there is no change in the situation since these Panchayat Raj Institutions have no role to play in the preparation of the Master Plan even at present.

In view of the circumstances mentioned above, the Government has comprehensively examined the issue of approval of Master Plan and hence this Order.

Government Order No. UDD 146 CSS 2009, Bangalore, Dated : 14.12.2009

After careful consideration of issue, in exercise of powers vested under Section 76-K of the Karnataka Town and Country Planning Act, 1961 the following orders have been issued which shall come into force immediately.

(i) Urban Development Authorities and Planning Authorities for the time being may continue to be the agencies for preparation of Master Plans as the local planning area extends beyond the limits of the respective Urban Local Bodies.

(ii) The Master Plans prepared by the Urban Development Authorities and Planning Authorities, for the respective local planning areas shall be sent to the respective Urban Local Bodies both at draft and final stage for vetting and the comments by them shall be limited to the jurisdiction of the respective Urban Local Bodies.

(iii) The Urban Local Bodies shall furnish its comments to the respective Urban Development Authorities / Planning Authority within forty-five days from the date of receipt of the Master Plan. If the Urban Local Body does not offer its comments within the prescribed time of forty five days, it shall be presumed that it has no comments and suggestions and the concerned Urban Development Authority / Planning Authority shall process the Master Plan for submission to Government for approval.

The above procedures shall be scrupulously followed until further Orders.

By order and in the name of the Governor of Karnataka

C. R. Ravindra

Under Secretary to Government

Urban Development Department

PR No. 2758

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : 2010–11ನೇ ಶೈಕ್ಷಣಿಕ ಸಾಲಿಗೆ 01 ಅನುದಾನಿತ ಮತ್ತು 02 ಅನುದಾನರಹಿತ (ಒಟ್ಟು 03) ಆಯುರ್ವೇದ ವೈದ್ಯಕೀಯ ಮಹಾ ವಿದ್ಯಾಲಯಗಳಲ್ಲಿ ಹಾಗೂ 01 ಅನುದಾನರಹಿತ ಯುನಾನಿ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಸೀಟ್ ಮಾಟ್ರಿಕ್ಸ್ ನಿಗದಿಗೊಳಿಸುವ ಬಗ್ಗೆ.

ಓದಲಾಗಿದೆ : 1) ಸರ್ಕಾರದ ಆದೇಶ ಸಂಖ್ಯೆ: ಆಕುಕ 138 ಪಿಟಿಡಿ 2010, ದಿನಾಂಕ 23–09–2010

2) ನಿರ್ದೇಶಕರು, ಆಯುಷ್ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ: ಆಯುಷ್/03/ಅಭಿವೃದ್ಧಿ(2)/2010–11, ದಿನಾಂಕ 25–09–2010.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಸಂ. (1) ರಲ್ಲಿನ ಸರ್ಕಾರದ ಆದೇಶದಲ್ಲಿ, ಪದವಿ ಕೋರ್ಸುಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ರಾಜ್ಯದಲ್ಲಿನ 03 ಅನುದಾನಿತ ಹಾಗೂ 08 ಅನುದಾನರಹಿತ (ಒಟ್ಟು–11) ಆಯುರ್ವೇದ ವೈದ್ಯಕೀಯ ಮಹಾ ವಿದ್ಯಾಲಯಗಳಿಗೆ 2010–11ನೇ ಸಾಲಿಗೆ ಮಾನ್ಯತೆ ನೀಡಿದ್ದು, ನಿಯಮಾನುಸಾರ ಸೀಟುಗಳ ಹಂಚಿಕೆಯನ್ನು ಮಾಡಿ, ಸೀಟ್ ಮ್ಯಾಟ್ರಿಕ್ಸ್‌ನ್ನು ನಿಗದಿಪಡಿಸಿ ಆದೇಶಿಸಿದೆ.

ಮೇಲೆ ಓದಲಾದ ಕ್ರ.ಸ. (2)ರ ಆಯುಷ್ ನಿರ್ದೇಶಕರ ಪ್ರಸ್ತಾವನೆಯಲ್ಲಿ, ಕೇಂದ್ರ ಸರ್ಕಾರವು ರಾಜ್ಯದಲ್ಲಿನ 01 ಅನುದಾನಿತ ಮತ್ತು 02 ಅನುದಾನರಹಿತ (ಒಟ್ಟು 03) ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಹಾಗೂ 01 ಅನುದಾನರಹಿತ ಯುನಾನಿ ವೈದ್ಯಕೀಯ ಮಹಾವಿದ್ಯಾಲಯಗಳಿಗೆ 2010–11ನೇ ಸಾಲಿಗೆ ಮಾನ್ಯತೆ ನೀಡಿದ್ದು, ಅಂತಹ ಮಹಾವಿದ್ಯಾಲಯಗಳ ಪಟ್ಟಿಯನ್ನು ಸಲ್ಲಿಸಿ, ಅನುಬಂಧ–ಐ ರಲ್ಲಿರುವಂತೆ ಸೀಟ್ ಮ್ಯಾಟ್ರಿಕ್ಸ್‌ನ್ನು ನಿಗದಿಪಡಿಸಿ ಆದೇಶ ಹೊರಡಿಸುವಂತೆ ಶಿಫಾರಸ್ಸು ಮಾಡಿದ್ದಾರೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಆಕುಕ 138 ಪಿಟಿಡಿ 2010, ಬೆಂಗಳೂರು, ದಿನಾಂಕ: 27–09–2010

ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆಯಲ್ಲಿ, ಪದವಿ ಕೋರ್ಸುಗಳ ಪ್ರವೇಶಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ರಾಜ್ಯದಲ್ಲಿನ 01 ಅನುದಾನಿತ ಮತ್ತು 02 ಅನುದಾನರಹಿತ (ಒಟ್ಟು 03) ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಹಾಗೂ 01 ಅನುದಾನರಹಿತ ಯುನಾನಿ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ 2010–11ನೇ ಸಾಲಿಗೆ ಮಾನ್ಯತೆ ನೀಡಿದ್ದು, ನಿಯಮಾನುಸಾರ ಸೀಟುಗಳ ಹಂಚಿಕೆಯನ್ನು ಮಾಡಿ ಸೀಟ್ ಮ್ಯಾಟ್ರಿಕ್ಸ್‌ನ್ನು ಅನುಬಂಧ–ಐ ರಲ್ಲಿ ನಿಗದಿಪಡಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಆರ್. ಎಸ್. ಇಟಗಿ

ಸರ್ಕಾರದ ಅಧೀನ ಕಾರ್ಯದರ್ಶಿ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ಭಾರತೀಯ ವೈದ್ಯ ಪದ್ಧತಿ)

ANNEXURE-1

(Government Seats in Government & Un-Aided Ayurvedic/Unani

1	2	3	4	5	6	7	8	9	10	11
Sl No.	Name of the College	Total Intake	No. of Govt. seats	Special Quota	GM-50%			SC-15%		
					GM	GM	GM	SC	SC	SC
						(R)	(K)		(R)	(K)
1	AYURVEDA **AIDED COLLEGE** B. M. K. Ayurvedc Medical College, Belgaum	75	53	0	20	5	2	6	1	1
2	**UN-AIDED COLLEGES** S.D.M. Ayurvedic Medical College, Hassan	75	15	0	5	2	1	1	1	0
3	KPSVS Ayurvedic Medical College, Manvi	40	8	0	3	1	0	1	0	0
	Total	190	76	0	28	8	3	8	2	1
4	**UNANI** Tippu Sultan, Unani Medical College, Gulbarga	40	8	0	3	1	0	1	0	0

Note : The Seat Matrix is subjected to change either way as per the Directions of Rajiv Gandhi University of Health Sciences &

Medical Colleges for the academic year 2010-11

12	13	14	15	16	17	18	19	20	21	22	23	24	25	26	27	28	29
ST-3%			Cat-1-4%			II(a)-16%				II(b)4%		III(a) 4%			III(b) 5%		
ST	ST	ST	Cat-1	Cat-R	Cat-K	II(a)	II(a)-15% II(a)	II(a)	II(b)	II(b)	II(b)	III(a)	III(a)	III(a)	III(b)	III(b)	III(b)
	(R)	(K)					(R)	(K)		(R)	(K)		(R)	(K)		(R)	(K)
1	1	0	1	1	0	6	1	1	1	0	1	1	1	0	1	1	0
0	1	0	0	0	0	1	1	0	0	0	0	0	1	0	1	0	0
0	0	0	1	0	0	1	0	0	0	0	0	0	0	0	1	0	0
1	2	0	2	1	0	8	2	1	1	0	1	1	2	0	3	1	0
0	0	0	0	0	0	1	0	0	0	0	0	1	0	0	1	0	0

Govt. of Karnataka from time to time Subject to approval by Government of India. An undertaking shall be obtained.

R. S. Itagi
Under Secretary to Government
Health & Family Welfare Department (IMI)

PR 2759

ಮೂಲ ಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : ಶಿವಮೊಗ್ಗ ನಗರದ ರೈಲು ಮಾರ್ಗದಲ್ಲಿ ಬರುವ ಎಲ್.ಸಿ. ಸಂಖ್ಯೆ 48ರ ಬದಲಿಗೆ ರಸ್ತೆ ಮೇಲು ಸೇತುವೆಯ ಅಪ್ರೋಚ್ ರಸ್ತೆ ನಿರ್ಮಾಣದ ಕಾಮಗಾರಿಗೆ ಹಣ ಬಿಡುಗಡೆ ಬಗ್ಗೆ.

ಓದಲಾಗಿದೆ :
1) ಸರ್ಕಾರದ ಪತ್ರ ಸಂ: ಮೂಅಇ 103 ರಾರಾಹೆ 06, ದಿನಾಂಕ 4–7–2008
2) ಸರ್ಕಾರದ ಆದೇಶ ಸಂ.: ಮೂಅಇ 17 ರಾರಾಹೆ 10, ದಿನಾಂಕ 12–03–2010
3) ಸರ್ಕಾರದ ಆದೇಶ ಸಂ.: ಮೂಅಇ 17 ರಾರಾಹೆ 10, ದಿನಾಂಕ 14–07–2010
4) ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದ), ಲೋಕೋಪಯೋಗಿ ಇಲಾಖೆ, ಬೆಂಗಳೂರು ರವರಪತ್ರ ಸಂಖ್ಯೆ: ಸಿಬಿಎಸ್:ಹಭಪ:34:ಹಭಪ:5465:2010–11, ದಿನಾಂಕ 25–09–2010ರ ಪತ್ರ.

ಪ್ರಸ್ತಾವನೆ :

ಶಿವಮೊಗ್ಗ ನಗರದ ರೈಲು ಮಾರ್ಗದಲ್ಲಿ ಬರುವ ಎಲ್.ಸಿ. ಸಂಖ್ಯೆ 48 ರ ಬದಲಿಗೆ ರಸ್ತೆ ಮೇಲು ಸೇತುವೆ ಹಾಗೂ ಅಪ್ರೋಚ್ ರಸ್ತೆ ನಿರ್ಮಾಣಕ್ಕೆ ತಗಲುವ ಒಟ್ಟಾರೆ ವೆಚ್ಚ ರೂ. 18.19 ಕೋಟಿಗಲ ಪರಿಷ್ಕೃತ ಅಂದಾಜಿಗೆ ತಗುಲುವ ಒಟ್ಟಾರೆ ಮೊತ್ತದ ಶೇ. 50 ರಷ್ಟನ್ನು ರೈಲ್ವೆ ಇಲಾಖೆಯಿಂದ ಪಡೆಯುವ ಷರತ್ತಿಗೊಳಪಟ್ಟು ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯಿಂದ ಕೈಗೆತ್ತಿಕೊಳ್ಳಲು ಮೇಲೆ ಓದಲಾದ (1)ರ ಸರ್ಕಾರಿ ಪತ್ರದಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿತ್ತು.

2. ಎಲ್. ಸಿ. ಸಂಖ್ಯೆ 48 ರಲ್ಲಿ ರಸ್ತೆ ಮೇಲು ಸೇತುವೆಗೆ ಕೂಡು ರಸ್ತೆ ನಿರ್ಮಿಸುವ ಕಾಮಗಾರಿಯನ್ನು ಪ್ರಾರಂಭಿಸಲು ಸ್ಥಳದಲ್ಲಿರುವ ವಿದ್ಯುತ್ ಕಂಭಗಳ ಸ್ಥಳಾಂತರ ಮತ್ತು ಅರಣ್ಯ ಇಲಾಖೆಗೆ ಸಂಬಂಧಿಸಿದ ಮರಗಳ ಕಡಿತಕ್ಕೆ ಹಾಗೂ ಯುಟಿಲಟಿ ಸ್ಥಳಾಂತರಕ್ಕೆ ರೂ. 2.00 ಕೋಟಿಯನ್ನು ಮೇಲೆ ಓದಲಾದ (2)ರ ಸರ್ಕಾರಿ ಅದೇಶದಲ್ಲಿ ಬಿಡುಗಡೆ ಮಾಡಲಾಗಿತ್ತು.

3. ವಿದ್ಯುತ್ ಕಂಬಗಳ ಸ್ಥಳಾಂತರದ ಹಾಗೂ ಇತರೆ ಬಿಲ್ಲಿನ ಮೊತ್ತವನ್ನು ನಿಗದಿತ ಅವಧಿಯಲ್ಲಿ ಸಲ್ಲಿಸದೇ ಇರುವುದರಿಮದ ಮೇಲ್ಕಂಡ ಕಾಮಗಾರಿಗೆ ಬಿಡುಗಡೆ ಮಾಡಲಾದ ಮೊತ್ತವನ್ನು ದಿನಾಂಕ 31–03–2010 ರೊಳಗಾಗಿ ರೂ. 53,76,921/– ಗಳನ್ನು ಮಾತ್ರ ವೆಚ್ಚವಾಗಿದ್ದು, ಉಳಿದ ಮೊತ್ತವನ್ನು ಭರಿಸಲು ಸಾಧ್ಯವಾಗದೇ ಇರುವುದರಿಂದ ಲ್ಯಾಪ್ಸ್ ಆಗಿರುತ್ತದೆ. ಆದ ಕಾರಣ ಕಾಮಗಾರಿಯ ವೆಚ್ಚವನ್ನು ಭರಿಸಲು ರೂ. 2.00 ಕೋಟಿಯನ್ನು ಮೇಲೆ ಓದಲಾದ (3)ರ ಸರ್ಕಾರಿ ಆದೇಶದಲ್ಲಿ ಬಿಡುಗಡೆ ಮಾಡಲಾಗಿತ್ತು.

4. ಮೇಲೆ ಓದಲಾದ (3)ರ ಸರ್ಕಾರಿ ಆದೇಶದಲ್ಲಿ, ಸದರಿ ಕಾಮಗಾರಿಗೆ ಬಿಡುಗಡೆ ಮಾಡಲಾದ ರೂ. 2.00 ಕೋಟಿಗಳು ಸಂಪೂರ್ಣವಾಗಿ ಬಳಕೆ ಮಾಡಲಾಗಿರುವುದರಿಂದ ಮತ್ತು ಬಳಕೆ ಪ್ರಮಾಣ ಪತ್ರ ಮತ್ತು ಕಾಮಗಾರಿಯ ಪ್ರಗತಿಯ ವರದಿಯನ್ನು ನೀಡುತ್ತಾ ಕಾಮಗಾರಿಯ ವೆಚ್ಚಕ್ಕಾಗಿ ರಾಜ್ಯ ಸರ್ಕಾರ ಪಾಲಿನ ಮೊತ್ತ ರೂ. 3.00 ಕೋಟಿಯನ್ನು ಬಿಡುಗಡೆ ಮಾಡಬೇಕೆಂದು ಮೇಲೆ ಓದಲಾದ (4)ರ ಪತ್ರದಲ್ಲಿ ಮುಖ್ಯ ಇಂಜಿನಿಯರವರು (ದ) ಕೋರಿರುತ್ತಾರೆ.

5. ಈ ಅಂಶಗಳಲ್ಲೆವನ್ನು ಪರಿಶೀಲಿಸಿ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಮೂಅಇ 17 ರಾರಾಹೆ 2010, ಬೆಂಗಳೂರು, ದಿನಾಂಕ: 30–10–2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶಿವಮೊಗ್ಗ ನಗರದ ರೈಲು ಮಾರ್ಗದಲ್ಲಿ ಬರುವ ಎಲ್.ಸಿ. ಸಂಖ್ಯೆ 48ರ ಬದಲಿಗೆ ರಸ್ತೆ ಮೇಲು ಸೇತುವೆಯ ಅಪ್ರೋಚ್ ರಸ್ತೆ ನಿರ್ಮಾಣದ ಕಾಮಗಾರಿಗೆ ರೂ. 3.00 ಕೋಟಿಯನ್ನು (ರೂಪಾಯಿ ಮೂರು ಕೋಟಿಗಳು ಮಾತ್ರ) ಬಿಡುಗಡೆ ಮಾಡಿದೆ. ಸದರಿ ಮೊತ್ತವನ್ನು 2010–11ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ **"5465–01–190–3–04–(ಯೋಜನೆ)–211 ಬಂಡವಾಳ"** ಇದರ ಅಡಿಯಲ್ಲಿ ರಸ್ತೆ ಮೇಲು ಸೇತುವೆ/ಕೆಳಸೇತುವೆ ನಿರ್ಮಾಣಕ್ಕೆ ಒದಗಣೆ ಮಾಡಿರುವ ರೂ. 30.00 ಕೋಟಿಗಳಿಂದ ಭರಿಸುವುದು. ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಬಂದರು ಮತ್ತು ಒಳನಾಡು, ಜಲಸಾರಿಗೆ ಇಲಾಖೆ, ಶಿವಮೊಗ್ಗ ವಿಶೇಷ ವಿಭಾಗ, ಶಿವಮೊಗ್ಗ ಇವರು ಸವಿವರ ಸಾದಿಲ್ವಾರು ಬಿಲ್ಲಿನ ಮೂಲಕ ಸೆಳೆದು ಸಂಬಂಧಪಟ್ಟವರಿಗೆ ಖಜಾನೆ ಚೆಕ್ ಮೂಲಕ ಪಾವತಿಸತಕ್ಕದ್ದು.

ಈ ಆದೇಶವನ್ನು ದಿನಾಂಕ 16–5–2008 ಸಂಖ್ಯೆ FD 1, TFP 2008 ಸರ್ಕಾರಿ ಅದೇಶದಲ್ಲಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರದತ್ತವಾಗಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಿ. ಎ. ಬಾಬುರವೀಂದ್ರನಾಥ್ ಪಟೇಲ್
ಸರ್ಕಾರದ ಅಧೀನ ಕಾರ್ಯದರ್ಶಿ
ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ

ಪಿ.ಆರ್. 2760

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಬಿಳಗುಂದಿ ಗ್ರಾಮದ ಹತ್ತಿರ ಬೆಣ್ಣೆತೊರಾ ನದಿಗೆ ಅಡ್ಡಲಾಗಿ ಬಿ.ಸಿ.ಬಿ. ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಕುರಿತು.

ಓದಲಾಗಿದೆ :
1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಸಂಖ್ಯೆ: ಮುಇಂ/ಸನಿ(ಉ)ವ /ಬಿಜಾ/ಎಇ–5/2010–11/5594 ದಿನಾಂಕ: 12–10–2010.
2. ಸರ್ಕಾರದ ಆದೇಶ ಸಂಖ್ಯೆ ಸನೀಇ 236 ಮಸಾವಿ 2009(7) ದಿನಾಂಕ : 24–12–2009
3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿನಾಂಕ ; 28–10–2010ರ ಪತ್ರ ಸಂಖ್ಯೆ : ಮುಸದ/ ಆಪ್ತಶಾಖೆ/ ಟೆಂಡರ್/ 08–09–3112.

ಪ್ರಸ್ತಾವನೆ :

ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಬಿಳಗುಂದಿ ಗ್ರಾಮದ ಹತ್ತಿರ ಬೆಣ್ಣೆತೊರಾ ನದಿಗೆ ಅಡ್ಡಲಾಗಿ ಬಿ.ಸಿ.ಬಿ. ನಿರ್ಮಾಣ ಕಾಮಗಾರಿಯ ರೂ. 169.50.00 ಲಕ್ಷಗಳ ಅಂದಾಜು ಪಟ್ಟಿಗೆ ಮೇಲೆ (2) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು

ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ನೋಂದಣಿ ಸಂಖ್ಯೆ : 08/2010–11ರಡಿ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಈ ಕಾಮಗಾರಿಯನ್ನು ಕೈಗೊಳ್ಳಲು ಭಾರತ ಸರ್ಕಾರದ ಅನುಮೋದನೆ ದೊರಕಿದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಗುಲ್ಬರ್ಗಾ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	23–07–2010
ಜಿಲ್ಲಾ ಟೆಂಡರ್ ಬುಲೆಟಿನ್	31–07–2010
ಕರ್ನಾಟಕ ರಾಜ್ಯಪತ್ರ	29–07–2010
ಸಂಯುಕ್ತ ಕರ್ನಾಟಕ ದಿನಪತ್ರಿಕೆ	22–07–2010
ಡೆಕ್ಕನ್ ಹೆರಾಲ್ಡ್ ಆಂಗ್ಲ ದಿನ ಪತ್ರಿಕೆ	22–07–2010

ದಿನಾಂಕ 14–09–2010ರಂದು ಟೆಂಡರ್‌ನ ತಾಂತ್ರಿಕ ಬಿಡ್‌ಅನ್ನು ತೆರೆದು ಪರಿಶೀಲಿಸಲಾಗಿ, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಟೆಂಡರ್‌ನಲ್ಲಿ ಭಾಗವಹಿಸಿದ್ದ ಇಬ್ಬರು ಗುತ್ತಿಗೆದಾರರ ಪೈಕಿ ಒಬ್ಬ ಗುತ್ತಿಗೆದಾರರು ಮಾತ್ರ ಅರ್ಹತೆ ಹೊಂದಿದ್ದು ಇವರ ಆರ್ಥಿಕ ಬಿಡ್‌ಅನ್ನು ದಿನಾಂಕ ; 24–09–2010 ರಂದು ತೆರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 1,60,30,460/–
ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 1,60,27,309/–

ಕ್ರ.ಸಂ.	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಶ್ರೀ ದೇವೀಂದ್ರಪ್ಪ ಗೌಡ ಎಂ. ಬಿರಾದಾರ, ಒಂದನೇ ದರ್ಜೆ ಗುತ್ತಿಗೆದಾರರು	1,82,43,088/–	13.80 ಹೆಚ್ಚು	13.83 ಹೆಚ್ಚು

ಮೇಲ್ಕಂಡಂತೆ ಶ್ರೀ ದೇವೀಂದ್ರಪ್ಪ ಗೌಡ ಎಂ. ಬಿರಾದಾರ, ಒಂದನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 13.83 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರದ ಅನುಮೋದನೆ ಕೋರಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 14–10–2010ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 1,60,27,309/– ಗಳ ಮೇಲೆ ಶೇಕಡ 13.50ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 1,81,90,996/– ಗಳಿಗೆ ಕಾಮಗಾರಿಯನ್ನು ಶ್ರೀ ದೇವೀಂದ್ರಪ್ಪ ಗೌಡ ಎಂ. ಬಿರಾದಾರ, ಒಂದನೇ ದರ್ಜೆ ಗುತ್ತಿಗೆದಾರರಿಗೆ ವಹಿಸುವಂತೆ ಶಿಫಾರಸ್ಸು ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 39 ಅಪಿಬಂ 2010, ಬೆಂಗಳೂರು, ದಿನಾಂಕ : 30ನೇ ಅಕ್ಟೋಬರ್ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಬೆಳಗುಂದಿ ಗ್ರಾಮದ ಹತ್ತಿರ ಬೆಣ್ಣೆತೊರಾ ನದಿಗೆ ಅಡ್ಡಲಾಗಿ ಬಿ.ಸಿ.ಬಿ. ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ.1,60,27,309/– ಗಳ ಮೇಲೆ ಶೇಕಡ 13.50 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ.1,81,90,996/–ಗಳಿಗೆ (ಒಂದುಕೋಟಿ ಎಂಬತ್ತೊಂದು ಲಕ್ಷದ ತೊಂಬತ್ತು ಸಾವಿರದ ಒಂಭೈನೂರ ತೊಂಭತ್ತಾರು ರೂ.ಗಳು ಮಾತ್ರ) ಶ್ರೀ ದೇವೀಂದ್ರಪ್ಪ ಗೌಡ ಎಂ. ಬಿರಾದಾರ, ಒಂದನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.

2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ 20–01–2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ. ಆರ್. 2706 ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಲಿಂಗಯ್ಯವಾಡಿ–ಬೆಟ ಜೇವರ್ಗಿ ಗ್ರಾಮದ ಹತ್ತಿರ ಬೆಣ್ಣೆತೊರಾ ನದಿಗೆ ಅಡ್ಡಲಾಗಿ ಬಿ.ಸಿ.ಬಿ. ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಕುರಿತು.

ಓದಲಾಗಿದೆ :
1. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ಪತ್ರದ ಸಂಖ್ಯೆ: ಮುಇಂ/ಸನೀ(ಉ) ವ /ಬಿಜಾ/ಎಇ–5/2010–11/5595 ದಿನಾಂಕ: 12–10–2010.
2 ಸರ್ಕಾರದ ಆದೇಶ ಸಂಖ್ಯೆ ಸನೀಇ 6 ನಯೋಕಾ 2009 ದಿನಾಂಕ : 06–01–2010
3 ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿನಾಂಕ ; 28–10–2010ರ ಪತ್ರ ಸಂಖ್ಯೆ : ಮುಸದ/ ಆಪ್ತಶಾಖೆ/ ಟೆಂಡರ್/08–09/3112.

ಪ್ರಸ್ತಾವನೆ :

ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಲಿಂಗಯ್ಯವಾಡಿ–ಬೆಟ ಜೇವರ್ಗಿ ಗ್ರಾಮದ ಹತ್ತಿರ ಬೆಣ್ಣೆತೊರಾ ನದಿಗೆ ಅಡ್ಡಲಾಗಿ ಬಿ.ಸಿ.ಬಿ. ನಿರ್ಮಾಣ ಕಾಮಗಾರಿಯ ರೂ. 150.00 ಲಕ್ಷಗಳ ಅಂದಾಜು ಪಟ್ಟಿಗೆ ಮೇಲೆ (2) ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರರವರ ನೋಂದಣಿ ಸಂಖ್ಯೆ : 06/2010–11ರಡಿ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ

ಈ ಕಾಮಗಾರಿಯನ್ನು ಕೈಗೊಳ್ಳಲು ಗುಲ್ಬರ್ಗಾ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ರಾಜ್ಯ ಟೆಂಡರ್ ಬುಲೆಟಿನ್	23–07–2010
ಜಿಲ್ಲಾ ಟೆಂಡರ್ ಬುಲೆಟಿನ್	31–07–2010
ಕರ್ನಾಟಕ ರಾಜ್ಯಪತ್ರ	29–07–2010
ಸಂಯುಕ್ತ ಕರ್ನಾಟಕ ದಿನಪತ್ರಿಕೆ	22–07–2010
ಡೆಕ್ಕನ್ ಹೆರಾಲ್ಡ್ ಆಂಗ್ಲ ದಿನ ಪತ್ರಿಕೆ	22–07–2010

ದಿನಾಂಕ 14–09–2010ರಂದು ಟೆಂಡರ್‌ನ ತಾಂತ್ರಿಕ ಬಿಡ್‌ಅನ್ನು ತೆರೆದು ಪರಿಶೀಲಿಸಲಾಗಿ, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಟೆಂಡರ್‌ನಲ್ಲಿ ಭಾಗವಹಿಸಿದ್ದ ಇಬ್ಬರು ಗುತ್ತಿಗೆದಾರರ ಪೈಕಿ ಒಬ್ಬ ಗುತ್ತಿಗೆದಾರರು ಮಾತ್ರ ಅರ್ಹತೆ ಹೊಂದಿದ್ದು ಇವರ ಆರ್ಥಿಕ ಬಿಡ್‌ಅನ್ನು ದಿನಾಂಕ ; 24–09–2010 ರಂದು ತೆರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 1,45,58,970/–
ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 1,43,76,600/–
ಕ್ರ.ಸಂ.	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಶ್ರೀ ಹುಲಿಕಂತರಾಯ ಸಾಹೇಬಗೌಡ ಒಂದನೇ ದರ್ಜೆ ಗುತ್ತಿಗೆದಾರರು	1,66,21,181/–	14.16 ಹೆಚ್ಚು	15.61 ಹೆಚ್ಚು

ಮೇಲ್ಕಂಡಂತೆ ಶ್ರೀ ಹುಲಿಕಂತರಾಯ ಸಾಹೇಬಗೌಡ, ಒಂದನೇ ದರ್ಜೆ ಗುತ್ತಿಗೆದಾರರು, ಇವರು ಟೆಂಡರ್‌ನಲ್ಲಿ ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 15.61 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 14–10–2010ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 1,43,76,600/– ಗಳ ಮೇಲೆ ಶೇಕಡ 14.00ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 1,63,89,324/– ಗಳಿಗೆ ಕಾಮಗಾರಿಯನ್ನು ಶ್ರೀ ಹುಲಿಕಂಠರಾಯ ಸಾಹೇಬ ಗೌಡ, ಒಂದನೇ ದರ್ಜೆ ಗುತ್ತಿಗೆದಾರರಿಗೆ ವಹಿಸುವಂತೆ ಶಿಫಾರಸ್ಸು ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 40 ಅಪಿಬಂ 2010, ಬೆಂಗಳೂರು, ದಿನಾಂಕ : 30ನೇ ಅಕ್ಟೋಬರ್ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಗುಲ್ಬರ್ಗಾ ಜಿಲ್ಲೆಯ ಆಳಂದ ತಾಲ್ಲೂಕಿನ ಲಿಂಗಯ್ಯವಾಡಿ–ಬೆಟ ಜೇವರ್ಗಿ ಗ್ರಾಮದ ಹತ್ತಿರ ಬೆಣ್ಣೆತೊರಾ ನದಿಗೆ ಅಡ್ಡಲಾಗಿ ಬಿ.ಸಿ.ಬಿ. ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದ ಟೆಂಡರಿಗಿಡಲಾದ ಮೊತ್ತ ರೂ. 1,43,76,600/–ಗಳ ಮೇಲೆ ಶೇಕಡ 14.00 ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 1,63,89,324/–ಗಳಿಗೆ (ಒಂದುಕೋಟಿ ಅರವತ್ತಮೂರು ಲಕ್ಷದ ಎಂಬತ್ತೊಂಭತ್ತು ಸಾವಿರದ ಮುನ್ನೂರ ಇಪ್ಪತ್ನಾಲ್ಕು ರೂ.ಗಳು ಮಾತ್ರ) ಶ್ರೀ ಹುಲಿಕಂಠರಾಯ ಸಾಹೇಬ ಗೌಡ, ಒಂದನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ 20–01–2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

\ ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ. ಆರ್. 2707 ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ತಾಲ್ಲೂಕು, ಬೆಳವಾಡಿ ಕೆರೆಗೆ ಚಾನಲ್ ನಿರ್ಮಾಣ ಕಾಮಗಾರಿಯ ಟೆಂಡರ್ ಕುರಿತು.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಸನೀಇ 236 ಮಸಾವಿ 2009 (22) ದಿನಾಂಕ : 07–01–2010
2. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ರವರ ಪತ್ರ ಸಂಖ್ಯೆ : ಮುಸದ/ತಾಂ.–2/ಸಇಂ.2/ಚಿಕ್ಕಮಗಳೂರು/ಬೆಳವಾಡಿಕೆರೆ/ಎಐಬಿಪಿ/ಇ–ಟೆಂಡರ್/2010/2971 ದಿನಾಂಕ : 15–10–2010
3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿನಾಂಕ ; 28–10–2010ರ ಪತ್ರ ಸಂಖ್ಯೆ : ಮುಸದ/ಆಪ್ತಶಾಖೆ/ ಟೆಂಡರ್/09–10/3112.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಭಾರತ ಸರ್ಕಾರದ ಧನಸಹಾಯದಲ್ಲಿ ಕೈಗೊಂಡಿರುವ ಎ.ಐ.ಬಿ.ಪಿ. ಕಾರ್ಯಕ್ರಮದಡಿ ರೂ. 500.00 ಲಕ್ಷ ಅಂದಾಜು ಮೊತ್ತದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುವ 8 ಕಾಮಗಾರಿಗಳ ಪೈಕಿ ಈ ಕಾಮಗಾರಿಯ ರೂ. 200.00 ಲಕ್ಷ ಮೊತ್ತದ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಈ ಕಾಮಗಾರಿಗಳನ್ನು ಕೈಗೊಳ್ಳಲು ಭಾರತ ಸರ್ಕಾರದ ಅನುಮೋದನೆ ದೊರಕಿರುತ್ತದೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಹಾಸನ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಚಿಕ್ಕಮಗಳೂರು ಜಿಲ್ಲಾ ಟೆಂಡರ್ ಬುಲೆಟಿನ್	19–07–2010
ವಿಜಯ ಕರ್ನಾಟಕ ಹಾಗೂ ಡೆಕ್ಕನ್ ಹೆರಾಲ್ಡ್‌ನ ಪತ್ರಿಕೆ	17–07–2010
ಉದಯವಾಣಿ ದಿನ ಪತ್ರಿಕೆ	18–07–2010
ರಾಜ್ಯ ಟೆಂಡರ್ ಬುಲೆಟಿನ್	17–07–2010

ದಿನಾಂಕ 18–08–2010ರಂದು ಟೆಂಡರ್‌ನ ತಾಂತ್ರಿಕ ಬಿಡ್‌ಅನ್ನು ತೆರೆದು ಪರಿಶೀಲಿಸಲಾಗಿ, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಟೆಂಡರ್‌ನಲ್ಲಿ ಒಬ್ಬ ಗುತ್ತಿಗೆದಾರರು ಮಾತ್ರ ಭಾಗವಹಿಸಿದ್ದು ಇವರ ಟೆಂಡರ್ ಕ್ರಮಬದ್ಧವಾದ ಕಾರಣ ಇವರ ಆರ್ಥಿಕ ಬಿಡ್‌ಅನ್ನು ದಿನಾಂಕ ; 15–09–2010 ರಂದು ತೆರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಹಾಗೂ ಪರಿಷ್ಕೃತ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ			ರೂ. 1,97,05,569/–
ಕ್ರ.ಸಂ.	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನಂತೆ ಹಾಗೂ ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಎಸ್. ನಾರಾಯಣ ರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು	2,25,46,649/–	14.42 ಹೆಚ್ಚು

ಮೇಲ್ಕಂಡಂತೆ ಎಸ್. ನಾರಾಯಣ ರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು, ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 14.42 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಬೆಂಗಳೂರು ಇವರು ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 14–10–2010ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಯಲ್ಲಿ ಗುತ್ತಿಗೆದಾರರ ಮನವಿಯನ್ನು ಕೂಲಂಕುಷವಾಗಿ ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 1,97,05,569/– ಗಳ ಮೇಲೆ ಶೇಕಡ 14.00ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 2,24,64,349/– ಗಳಿಗೆ ಕಾಮಗಾರಿಯನ್ನು ಎಸ್. ನಾರಾಯಣ ರೆಡ್ಡಿ, 1ನೇ ದರ್ಜೆ ಗುತ್ತಿಗೆದಾರರು ಇವರಿಗೆ ವಹಿಸುವಂತೆ ಶಿಫಾರಸ್ಸು ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ನಿರ್ಧಾರಕ್ಕೆ ಗುತ್ತಿಗೆದಾರರು ತಮ್ಮ ಒಪ್ಪಿಗೆಯನ್ನು ಸೂಚಿಸಿರುವುದಾಗಿ ತಿಳಿಸಿ ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 41 ಅಪಿಬಂ 2010, ಬೆಂಗಳೂರು, ದಿನಾಂಕ : 30ನೇ ಅಕ್ಟೋಬರ್ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ತಾಲ್ಲೂಕು, ಬೆಳವಾಡಿಕೆರೆಗೆ ಚಾನಲ್ ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 1,97,05,569/–ಗಳ ಮೇಲೆ ಶೇ. 14.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 2.24,64,349/–ಗಳಿಗೆ (ರೂ. ಎರಡು ಕೋಟಿ ಇಪ್ಪತ್ತನಾಲ್ಕು ಲಕ್ಷ ಅರವತ್ತ ನಾಲ್ಕು ಸಾವಿರದ ಮೂರು ನೂರ ನಲವತ್ತೊಂಬತ್ತು) ಕಾಮಗಾರಿಯನ್ನು ಶ್ರೀ ಎಸ್. ನಾರಾಯಣ ರೆಡ್ಡಿ, ಒಂದನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ 20–01–2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

\ ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ. ಆರ್. 2708 ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕು ಹುಲಿ ಗ್ರಾಮದ ಹತ್ತಿರ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಕುರಿತು.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಸನೀಇ 06 ನಯೋಕಾ 2009, ದಿನಾಂಕ : 06–01–2010
2. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರ ಪತ್ರ ಸಂಖ್ಯೆ : ಮುಇಂ/ಸನಿ(ಉ) ವಲಯ/ಬಿಜೆಪಿ/ಎಇ–3/2010–11/5705 ದಿನಾಂಕ : 20–10–2010.
3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿನಾಂಕ ; 30–10–2010ರ ಪತ್ರ ಸಂಖ್ಯೆ : ಮುಸದ/ ಆಪ್ತಶಾಖೆ/ ಟೆಂಡರ್/08–09/3172.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ನಬಾರ್ಡ್ ಅಡಿ ರೂ. 49.90 ಲಕ್ಷ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆಗೊಂಡಿರುವ ಈ ಕಾಮಗಾರಿಯ ಅಂದಾಜಿಗೆ ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ಬೆಳಗಾವಿ ವೃತ್ತರವರ ನೊಂದಣಿ ಸಂಖ್ಯೆ : 121/6–2010 ರಡಿ ತಾಂತ್ರಿಕ ಮಂಜೂರಾತಿ ನೀಡಲಾಗಿದೆ.

ಈ ಕಾಮಗಾರಿಗಳ ಕೈಗೊಳ್ಳಲು ಬೆಳಗಾವಿ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	09–08–2010
ಕರ್ನಾಟಕ ರಾಜ್ಯ ಪತ್ರ	09–08–2010
ಸಂಯುಕ್ತ ಕರ್ನಾಟಕ ಹಾಗೂ ವಿಜಯ ಕರ್ನಾಟಕ ದಿನಪತ್ರಿಕೆ	14–08–2010

ದಿನಾಂಕ 14–09–2010ರಂದು ಟೆಂಡರ್‌ನ್ನು ತೆರೆದು ಪರಿಶೀಲಿಸಲಾಗಿ, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಟೆಂಡರ್‌ನಲ್ಲಿ ಭಾಗವಹಿಸಿದ್ದ ಇಬ್ಬರು ಗುತ್ತಿಗೆದಾರರ ಪೈಕಿ ಒಬ್ಬ ಗುತ್ತಿಗೆದಾರರು ಮಾತ್ರ ಅರ್ಹತೆ ಹೊಂದಿರುವುದಾಗಿ ವರದಿಯಾಗಿರುತ್ತದೆ. ಟೆಂಡರ್ ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 49,72,832/–
ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 47,22,470/–
ಕ್ರ.ಸಂ.	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಪರಶುರಾಮ ಆರ್. ಪಮ್ಮಾರ, ಒಂದನೇ ದರ್ಜೆ ಗುತ್ತಿಗೆದಾರರು	ರೂ. 52,16,443/–	4.90 ಹೆಚ್ಚು	10.46 ಹೆಚ್ಚು

ಮೇಲ್ಕಂಡಂತೆ ಶ್ರೀ ಪರಶುರಾಮ ಆರ್. ಪಮ್ಮಾರ, ಒಂದನೇ ದರ್ಜೆ ಗುತ್ತಿಗೆದಾರರು, ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 10.46 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 29–10–2010ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಗೂ ಮೊದಲು ಗುತ್ತಿಗೆದಾರರು ನೀಡಿದ್ದ ಪತ್ರವನ್ನು ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 47,22,470/– ಗಳ ಮೇಲೆ ಶೇಕಡ 10.00ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 51,94,717/– ಗಳಿಗೆ ಕಾಮಗಾರಿಯನ್ನು ಶ್ರೀ ಪರಶುರಾಮ ಆರ್. ಪಮ್ಮಾರ, 1ನೇ ದರ್ಜೆ ಗುತ್ತಿಗೆದಾರರು ಇವರಿಗೆ ವಹಿಸುವಂತೆ ಶಿಫಾರಸ್ಸು ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 3ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 42 ಅಪಿಬಂ 2010, ಬೆಂಗಳೂರು, ದಿನಾಂಕ : 30ನೇ ಅಕ್ಟೋಬರ್ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಬೆಳಗಾವಿ ಜಿಲ್ಲೆ ಸವದತ್ತಿ ತಾಲ್ಲೂಕು ಹುಲಿ ಗ್ರಾಮದ ಹತ್ತಿರ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 47,22,470/–ಗಳ ಮೇಲೆ ಶೇ. 10.00 ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 51,94,717/–ಗಳಿಗೆ (ರೂ.ಐವತ್ತೊಂದು ಲಕ್ಷ ತೊಂಬತ್ತನಾಲ್ಕು ಸಾವಿರದ ಏಳುನೂರ ಹದಿನೇಳು) ಕಾಮಗಾರಿಯನ್ನು ಶ್ರೀ ಪರಶುರಾಮ ಆರ್ ಪಮ್ಮಾರ, ಒಂದನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ 20–01–2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ. ಆರ್. 2709

ಜಲಸಂಪನ್ಮೂಲ ಸಚಿವಾಲಯ

ವಿಷಯ : ಹಾವೇರಿ ಹಿರೆಕೇರೂರು ತಾಲ್ಲೂಕು, ತಿಪಾಯಿಕೊಪ್ಪ ಗ್ರಾಮದ ಹತ್ತಿರ ಕುಮದ್ವತಿ ನದಿಗೆ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಕುರಿತು.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಸನೀಇ 130 ಅಪಿಬಂ, 2008, ದಿನಾಂಕ : 23–12–2008
2. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ರವರ ಪತ್ರ ಸಂಖ್ಯೆ : ಮುಇಂ/ಸನಿ(ಉ) ವಲಯ/ಬಿಜೆಪಿ/ಎಇ–3/2010–11/5699 ದಿನಾಂಕ : 19–10–2010.
3. ಅಧ್ಯಕ್ಷರು, ಟೆಂಡರ್ ಪರಿಶೀಲನಾ ಸಮಿತಿ, ಸಣ್ಣ ನೀರಾವರಿ ಇಲಾಖೆ ಹಾಗೂ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದಕ್ಷಿಣ) ವಲಯ, ಬೆಂಗಳೂರು ರವರ ದಿನಾಂಕ ; 30–10–2010ರ ಪತ್ರ ಸಂಖ್ಯೆ : ಮುಸದ/ ಆಪ್ತಶಾಖೆ/ ಟೆಂಡರ್/08–09/3172.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ರೂ. 160.41 ಲಕ್ಷ ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆಗೊಂಡಿರುವ ಈ ಕಾಮಗಾರಿಯ ಅಂದಾಜಿಗೆ ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರರವರ ನೋಂದಣಿ ಸಂಖ್ಯೆ : 135/2008–09 ರಡಿ ತಾಂತ್ರಿಕ ಮಂಜೂರಾತಿ ನೀಡಲಾಗಿದೆ.

ಮೊದಲೆರಡು ಟೆಂಡರ್ ಕರೆಗಳಿಗೆ ಯಾವುದೇ ಪ್ರತಿಕ್ರಿಯೆ ಸ್ವಿಕೃತವಾಗಿರುವುದಿಲ್ಲಾ. 3ನೇ ಟೆಂಡರ್ ಕರೆಗೆ ಸ್ವೀಕೃತವಾಗಿದ್ದ ದರಗಳು ಅತೀ ಹೆಚ್ಚಾಗಿದ್ದರಿಂದ ತಿರಸ್ಕರಿಸಲಾಗಿದೆ. ನಾಲ್ಕನೇ ಬಾರಿಗೆ ಈ ಕಾಮಗಾರಿಯನ್ನು ಕೈಗೊಳ್ಳಲು ಧಾರವಾಡ ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಕರೆಯಲಾದ ಅಲ್ಪಾವಧಿ ಟೆಂಡರ್‌ನ ಪ್ರಕಟಣೆಯನ್ನು ಈ ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ಜಿಲ್ಲಾ ಟೆಂಡರ್ ಬುಲೆಟಿನ್	13–08–2010
ರಾಜ್ಯ ಟೆಂಡರ್ ಬುಲೆಟಿನ್	10–08–2010
ಸಂಯುಕ್ತ ಕರ್ನಾಟಕ ದಿನಪತ್ರಿಕೆ	13–08–2010

ದಿನಾಂಕ 13–09–2010ರಂದು ಟೆಂಡರ್‌ನ ತಾಂತ್ರಿಕ ಬಿಡ್ ತೆರೆದು ಪರಿಶೀಲಿಸಲಾಗಿ, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಟೆಂಡರ್‌ನಲ್ಲಿ ಭಾಗವಹಿಸಿದ್ದ ಇಬ್ಬರು ಗುತ್ತಿಗೆದಾರರ ಪೈಕಿ ಇಬ್ಬರು ಗುತ್ತಿಗೆದಾರರು ಅರ್ಹತೆ ಹೊಂದಿರುವುದಾಗಿ ವರದಿಯಾಗಿರುತ್ತದೆ. ನಂತರ ಆರ್ಥಿಕ ಬಿಡ್ ತೆರೆದು ಪರಿಶೀಲಿಸಲಾಗಿದ್ದು ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 1,48,09,499/–
ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ	ರೂ. 1,27,93,020/–

ಕ್ರ.ಸಂ.	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಜೆ.ಆರ್. ಗೌರೀಶ, 1 ನೇ ದರ್ಜೆ ಗುತ್ತಿಗೆದಾರರು	1,66,39,012/–	12.35 ಹೆಚ್ಚು	30.06 ಹೆಚ್ಚು
2	ದಯಾನಂದ ಶೆಟ್ಟಿ, 1 ನೇ ದರ್ಜೆ ಗುತ್ತಿಗೆದಾರರು	1,82,70,595/–	23.37 ಹೆಚ್ಚು	42.82 ಹೆಚ್ಚು

ಮೇಲ್ಕಂಡಂತೆ ಜೆ.ಆರ್. ಗೌರೀಶ, 1ನೇ ದರ್ಜೆ ಗುತ್ತಿಗೆದಾರರು, ಇವರು ಕನಿಷ್ಠ ದರಗಳನ್ನು ನಮೂದಿಸಿರುವ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಂತೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 30.06 ರಷ್ಟು ಹೆಚ್ಚಾಗಿದ್ದು, ಸದರಿಯವರ ಟೆಂಡರನ್ನು ಸಂಧಾನದ ಮೂಲಕ ಅಂಗೀಕರಿಸಲು ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ಇವರು ಮೇಲೆ (2)ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಗುತ್ತಿಗೆದಾರರು ಸೂಚಿಸಿರುವ ದರಗಳನ್ನು ಕಡಿಮೆಗೊಳಿಸುವ ಸಲುವಾಗಿ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲು ದಿನಾಂಕ 29–10–2010ರಂದು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯ ಸಭೆಯನ್ನು ಕರೆಯಲಾಗಿತ್ತು. ಸಭೆಗೂ ಮೊದಲು ಗುತ್ತಿಗೆದಾರರು ನೀಡಿದ್ದ ಪತ್ರವನ್ನು ಪರಿಶೀಲಿಸಿದ ನಂತರ ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 1,27,93,020/– ಗಳ ಮೇಲೆ ಶೇಕಡ 14.60ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 1,46,60,801/– ಗಳಿಗೆ ಕಾಮಗಾರಿಯನ್ನು ಆರ್. ಗೌರೀಶ, 1ನೇ ದರ್ಜೆ ಗುತ್ತಿಗೆದಾರರು ಇವರಿಗೆ ವಹಿಸುವಂತೆ ಶಿಫಾರಸ್ಸು ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಈ ಮೊತ್ತಕ್ಕೆ ಟೆಂಡರ್ ಅಂಗೀಕರಿಸಲು ಇಲಾಖಾ ಟೆಂಡರ್ ಪರಿಶೀಲನಾ ಸಮಿತಿಯು ಮೇಲೆ 2ರಲ್ಲಿ ಓದಲಾದ ಪತ್ರದಲ್ಲಿ ಶಿಫಾರಸ್ಸು ಮಾಡಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಸನೀಇ 43 ಅಪಿಬಂ 2010, ಬೆಂಗಳೂರು, ದಿನಾಂಕ : 30ನೇ ಅಕ್ಟೋಬರ್ 2010

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಹಾವೇರಿ ಹಿರೇಕೆರೂರು ತಾಲ್ಲೂಕು, ತಿಪಾಯಿಕೊಪ್ಪ ಗ್ರಾಮದ ಹತ್ತಿರ ಕುಮದ್ವತಿ ನದಿಗೆ ಬ್ಯಾರೇಜ್ ನಿರ್ಮಾಣ ಕಾಮಗಾರಿಯ ಟೆಂಡರ್ ಅನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 1,27,93,020/– ಗಳ ಮೇಲೆ ಶೇಕಡ 14.60ರಷ್ಟು ಹೆಚ್ಚಿನ ದರಗಳಿಗೆ ಅಂದರೆ ರೂ. 1,46,60,801/– ಗಳಿಗೆ (ರೂ. 1 ಕೋಟಿ ನಲವತ್ತಾರು ಲಕ್ಷ ಅರವತ್ತು ಸಾವಿರದ ಎಂಟುನೂರ ಒಂದು) ಕಾಮಗಾರಿಯನ್ನು . ಶ್ರೀ ಜೆ.ಆರ್. ಗೌರೀಶ, 1 ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.
3. ಅಸಹಜ ದರಗಳನ್ನು ಸಮನ್ವಯಪಡಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ 20–01–2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

\

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ. ಆರ್. 2710